ಕನ್ನಡ ಮತ್ತು ಸಂಸ್ಕೃತಿ ಇಲಾಖೆ

**ಸ್ವಾತಂತ್ರ್ಯ ಅಮೃತ ಮಹೋತ್ಸವ ಪುಸ್ತಕ ಮಾಲೆ**

# ಸ್ವಾತಂತ್ರ್ಯ ಹೋರಾಟದಲ್ಲಿ ಕರ್ನಾಟಕ
# ಸುರಪುರ

ಪ್ರಧಾನ ಸಂಪಾದಕರು
**ಡಾ. ಬಿ.ವಿ. ವಸಂತಕುಮಾರ್**

ಸಂಪಾದಕರು
**ಡಾ. ಪ್ರಕಾಶ ಗ. ಖಾಡೆ**

ಲೇಖಕರು
**ಶ್ರೀನಿವಾಸ ಜಾಲವಾದಿ**

**ಕರ್ನಾಟಕ ಸಾಹಿತ್ಯ ಅಕಾಡೆಮಿ**
ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು–೫೬೦ ೦೦೨
ದೂರವಾಣಿ: ೦೮೦–೨೨೨೧೧೭೩೦ / ೨೨೧೦೬೪೬೦
www.karnatakasahithyaacademy.org
ಇ–ಮೇಲ್: sahithya.academy@gmail.com

**SURAPURA:** An Introducing Book on the Places in Karnataka that Played a Major Role in the Freedom Struggle, Written by Shrinivas Jalavadi, Published by Kariyappa N., Registrar, Karnataka Sahithya Academy, Kannada Bhavana, J.C. Road, Bengaluru-560002

ಹಕ್ಕು: ಕರ್ನಾಟಕ ಸಾಹಿತ್ಯ ಅಕಾಡೆಮಿ

**ಪ್ರಧಾನ ಸಂಪಾದಕರು**
ಡಾ. ಬಿ.ವಿ. ವಸಂತಕುಮಾರ್
ಅಧ್ಯಕ್ಷರು, ಕರ್ನಾಟಕ ಸಾಹಿತ್ಯ ಅಕಾಡೆಮಿ

**ಸಂಪಾದಕ ಮಂಡಳಿ**
ಡಾ. ಎಸ್. ಜಿ. ರಾಮದಾಸ ರೆಡ್ಡಿ
ಡಾ. ಮೃತ್ಯುಂಜಯ ರುಮಾಲೆ
ಶ್ರೀ ನರೇಂದ್ರಕುಮಾರ್ ಎಸ್.ಎಸ್.
ಡಾ. ಪ್ರಕಾಶ ಗ. ಖಾಡೆ
ಶ್ರೀಮತಿ ಕೋಡಿಬೆಟ್ಟು ರಾಜಲಕ್ಷ್ಮಿ

**ಲೇಖಕರು**
ಶ್ರೀನಿವಾಸ ಜಾಲವಾದಿ

ಮೊದಲ ಮುದ್ರಣ: ೨೦೨೨
ಪ್ರತಿಗಳು: ೧೦೦೦
ಬೆಲೆ: ರೂ. ೩೦/-
ಪುಟ: ೭೨


ಮುಖಪುಟ ಚಿತ್ರ: ಮುರಳೀಧರ ವಿ. ರಾಥೋಡ್

ಪ್ರಕಾಶಕರು:
ಕರಿಯಪ್ಪ ಎನ್., ರಿಜಿಸ್ಟ್ರಾರ್
ಕರ್ನಾಟಕ ಸಾಹಿತ್ಯ ಅಕಾಡೆಮಿ

ಮುದ್ರಕರು
**ರಶ್ಮಿ ಪ್ರಿಂಟರ್ಸ್**
ಸುಧಾಮನಗರ, ಬೆಂಗಳೂರು
ಮೊ: ೯೯೦೧೯೧೬೩೮೧

**ಬಸವರಾಜ ಬೊಮ್ಮಾಯಿ**
ಮುಖ್ಯಮಂತ್ರಿ

ವಿಧಾನಸೌಧ
ಬೆಂಗಳೂರು–560 001



## ಶುಭ ಸಂದೇಶ

ಭಾರತ ಸ್ವಾತಂತ್ರ್ಯದ ಅಮೃತ ಮಹೋತ್ಸವ ಸಂದರ್ಭದಲ್ಲಿ ದೇಶದಾದ್ಯಂತ ದೇಶಪ್ರೇಮವನ್ನು ಬೆಳೆಸುವ ಸಾವಿರಾರು ಕಾರ್ಯಕ್ರಮಗಳು ನಡೆಯುತ್ತಿರುವ ಹೊತ್ತಿನಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿಯು ಕರ್ನಾಟಕದ ೩೧ ಜಿಲ್ಲೆಗಳಲ್ಲಿ ಭಾರತ ಸ್ವಾತಂತ್ರ್ಯ ಸಂಗ್ರಾಮಕ್ಕೆ ಸಾಕ್ಷಿಯಾಗಿರುವ ೭೫ ಸ್ಥಳಗಳನ್ನು ಗುರುತಿಸಿ, ೭೫ ಪುಸ್ತಕಗಳನ್ನು ಹೊರತರುತ್ತಿರುವುದು ಸಂತೋಷದ ವಿಚಾರ.

ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕೆ ಕರ್ನಾಟಕದ ಕೊಡುಗೆ ಬಹಳ ಮಹತ್ವದ್ದು. ಕರ್ನಾಟಕದ ಹಲವು ಮಹನೀಯರು ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕಾಗಿ ನಡೆಸಿದ ತ್ಯಾಗ ಬಲಿದಾನಗಳು ಅಪಾರ. ಅಂತೆಯೇ ಕರ್ನಾಟಕದ ಸಾವಿರಾರು ಸ್ಥಳಗಳು ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕೆ ಸಾಕ್ಷಿಯಾಗಿ ನಿಂತಿವೆ. ವಿದುರಾಶ್ವತ್ಥ, ಈಸೂರು, ಶಿವಪುರಗಳನ್ನೂ ಒಳಗೊಂಡಂತೆ ಕರ್ನಾಟಕದ ೩೧ ಜಿಲ್ಲೆಗಳ ಸಾವಿರಾರು ಸ್ಥಳಗಳಲ್ಲಿ ಭಾರತದ ಸ್ವಾತಂತ್ರ್ಯ ಸಂಗ್ರಾಮವು ನಡೆದುದಕ್ಕೆ ಸಾಕ್ಷಿಯಾಗಿ ಹಲವಾರು ಕುರುಹುಗಳು, ಅವಶೇಷಗಳು, ಸ್ಮಾರಕಗಳು ಇತಿಹಾಸದ ಪುಟಗಳಲ್ಲಿ ದಾಖಲಾಗಿವೆ. ಆದಾಗ್ಯೂ ಇನ್ನೂ ದಾಖಲಾಗಬೇಕಾದ ಸಂಗತಿಗಳು ಉಳಿದಿವೆ. ಭಾರತ ಸ್ವಾತಂತ್ರ್ಯದ ಅಮೃತೋತ್ಸವದ ಸಂದರ್ಭದಲ್ಲಿ ಈ ಎಲ್ಲ ಅಂಶಗಳನ್ನು ದಾಖಲಿಸುವ ಕೆಲಸ ತುರ್ತಾಗಿ ಆಗಬೇಕಾಗಿದೆ.

ಭಾರತ ಸ್ವಾತಂತ್ರ್ಯ ಸಂಗ್ರಾಮಕ್ಕೆ ಸಾಕ್ಷಿಯಾಗಿರುವ ಕರ್ನಾಟಕದ ವಿವಿಧ ಸ್ಥಳದಲ್ಲಿ ನಡೆದ ಘಟನೆಗಳು, ತ್ಯಾಗ, ಬಲಿದಾನಗಳು, ಹೋರಾಟಗಳು ಇತ್ಯಾದಿ

ವಿವರಗಳೆಲ್ಲವನ್ನೂ ಪುಸ್ತಕ ರೂಪದಲ್ಲಿ ದಾಖಲಿಸುವ ಮೂಲಕ, ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಕರ್ನಾಟಕದ ಕೊಡುಗೆಯ ಮೇಲೆ ಬೆಳಕು ಚೆಲ್ಲುವ ಪ್ರಯತ್ನವನ್ನು ಕರ್ನಾಟಕ ಸಾಹಿತ್ಯ ಅಕಾಡೆಮಿ ಮಾಡಿದೆ. ಇದು ನಿಜಕ್ಕೂ ಒಂದು ಸಂಶೋಧನಾತ್ಮಕ ಪ್ರಯತ್ನವೇ ಸರಿ.

ಈ ಸಾರ್ಥಕ ಕಾರ್ಯವನ್ನು ಯಶಸ್ವಿಗೊಳಿಸಿದ ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷರು ಹಾಗೂ ಬಳಗದವರನ್ನು ನಾನು ಮನಃಪೂರ್ವಕವಾಗಿ ಅಭಿನಂದಿಸುತ್ತೇನೆ.

ಎಲ್ಲರಿಗೂ ಭಾರತ ಸ್ವಾತಂತ್ರ್ಯ ಅಮೃತ ಮಹೋತ್ಸವದ ಶುಭಾಶಯಗಳು.

(ಬಸವರಾಜ ಬೊಮ್ಮಾಯಿ)
ಮುಖ್ಯಮಂತ್ರಿ
ಕರ್ನಾಟಕ ಸರ್ಕಾರ

**ವಿ ಸುನಿಲ್ ಕುಮಾರ್**

ಸ್ವಾತಂತ್ರ್ಯದ ಅಮೃತಮಹೋತ್ಸವ

ಇಂಧನ ಹಾಗೂ
ಕನ್ನಡ ಮತ್ತು ಸಂಸ್ಕೃತಿ ಸಚಿವರು



# ಶುಭ ಸಂದೇಶ

**'ಜಯ ಭಾರತ ಜನನಿಯ ತನುಜಾತೆ, ಜಯ ಹೇ ಕರ್ನಾಟಕ ಮಾತೆ'**

ಜಗತ್ತಿನಲ್ಲಿ ಭಾರತ ಒಂದು ವಿಶಿಷ್ಟವಾದ ಮಹತ್ವದ ರಾಷ್ಟ್ರ. ವಿಶ್ವಕ್ಕೆ ವಿಶ್ವಮಾನವನನ್ನು, ವಿಶ್ವಕುಟುಂಬವನ್ನು, ವಿಶ್ವನಾಥನನ್ನು, ಜಗನ್ಮಾತೆಯನ್ನು ನೀಡಿರುವ ಆಧ್ಯಾತ್ಮದ ಪುಣ್ಯಭೂಮಿ. ವೇದ, ಉಪನಿಷತ್ತುಗಳ ಕಾಲದಿಂದ ಹಿಡಿದು, ರಾಮ, ಕೃಷ್ಣ, ಶಿವ, ಬುದ್ಧ, ಬಸವ, ಗಾಂಧಿ, ಅಂಬೇಡ್ಕರ್, ಮೈತ್ರೇಯಿ, ಗಾರ್ಗಿ, ಅರುಂಧತಿ, ಸೀತೆ, ಮಂಡೋದರಿ, ಮೀರಾ, ಅಕ್ಕಮಹಾದೇವಿ ಮೊದಲಾದ ಪೌರಾಣಿಕ, ಐತಿಹಾಸಿಕ ವ್ಯಕ್ತಿತ್ವಗಳ ಅಂತಃಶಕ್ತಿಯಿಂದ ಜಗತ್ತನ್ನು ಬೆಳಗಿದ ದೇಶ ಭಾರತ. ಇಂಥ ದೇಶದ ಮೇಲೆ ಅಲೆಗ್ಸಾಂಡರನಿಂದ ಹಿಡಿದು ಮೊಘಲರಾದಿಯಾಗಿ ಬ್ರಿಟಿಷರವರೆಗೆ ಆಕ್ರಮಣ ಮಾಡಲು ಪ್ರಯತ್ನಿಸಿ, ಸೋತು ಭಾರತೀಯ ಸಂಸ್ಕೃತಿಯ ಅಗಾಧತೆಗೆ ಶರಣಾಗಿ ಭಾರತೀಯರೇ ಆಗಿಹೋಗಿದ್ದಾರೆ. ಹಾಗೇ ಭಾರತವನ್ನು ಭಾರತವನ್ನಾಗಿ ಉಳಿಸಿರುವ ಮಹಾನ್ ಶಕ್ತಿಯೇ ಸ್ವಾತಂತ್ರ್ಯದ ತೀವ್ರ ತುಡಿತ.

ಭಾರತದ ಸ್ವಾತಂತ್ರ್ಯ ಸಂಗ್ರಾಮ ಸುಮಾರು ಮುನ್ನೂರು ವರ್ಷಗಳಿಗೂ ಹಳೆಯದು. ಇಡೀ ಭಾರತವೇ ಬ್ರಿಟಿಷರ ವಿರುದ್ಧ ಹೋರಾಡಿ ದಾಸ್ಯದಿಂದ ಮುಕ್ತವಾಗಿ ಸ್ವಾತಂತ್ರ್ಯವನ್ನು ಪಡೆದುಕೊಂಡು ಈಗ ೭೫ ವರ್ಷಗಳಾಗಿವೆ. ಈ ಸ್ವಾತಂತ್ರ್ಯದ ಅಮೃತ ಮಹೋತ್ಸವ ಸಂದರ್ಭವನ್ನು ಅರ್ಥಪೂರ್ಣವಾಗಿ ಆಚರಿಸಬೇಕಾದ್ದು ನಮ್ಮೆಲ್ಲರ ಕರ್ತವ್ಯ.

ಇಡೀ ದೇಶವನ್ನೇ ಜಾಗೃತಗೊಳಿಸಿದ ಭಾರತದ ಸ್ವಾತಂತ್ರ್ಯ ಸಂಗ್ರಾಮ,

ನಮ್ಮ ಕರ್ನಾಟಕದಲ್ಲಿಯೂ ಸಹ ಸ್ವಾತಂತ್ರ್ಯ ಸಂಗ್ರಾಮದ ಪಾಂಚಜನ್ಯವನ್ನು ಮೊಳಗಿಸಿತು. ಕರ್ನಾಟಕದ ಕಲಿಗಳು ಸ್ವಾತಂತ್ರ್ಯ ಹೋರಾಟಕ್ಕೆ ಧುಮುಕಿ, ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕೆ ವಿಶಿಷ್ಟ ಕೊಡುಗೆ ನೀಡಿರುವುದನ್ನು ಸ್ಮರಿಸಬೇಕಿದೆ. ಕರ್ನಾಟಕದಲ್ಲಿ ಸಾವಿರಾರು ಸ್ವಾತಂತ್ರ್ಯ ಹೋರಾಟದ ಘಟನೆಗಳನ್ನು ಸಾರುವ ಐತಿಹಾಸಿಕ ಸ್ಥಳಗಳಿವೆ. ಅಂಥ ಸ್ಥಳಗಳು ಅರಿವಿಗೆ ಬಾರದೆ ಮರೆಯಾಗಿ ಹೋಗುತ್ತಿವೆ. ಸ್ವಾತಂತ್ರ್ಯದ ಹಣತೆ ಹೊತ್ತಿಸಿದ ಪ್ರಮುಖ ಸ್ಥಳಗಳಲ್ಲಿ ತ್ಯಾಗ, ಬಲಿದಾನಗಳನ್ನು ನೆನಪಿಸುವ ನಿಟ್ಟಿನಲ್ಲಿ ಮತ್ತು ಇಂದಿನ ಪೀಳಿಗೆಗೆ ತಿಳಿಸಿಕೊಡುವ ಕೆಲಸ ಈ ಅಮೃತ ಮಹೋತ್ಸವದ ಸಂದರ್ಭದಲ್ಲಿ ಆಗುತ್ತಿರುವುದು ಸಂತಸದ ವಿಷಯ. ಈ ನಿಟ್ಟಿನಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಒಂದು ಬೃಹತ್ ಆಂದೋಲನವನ್ನು ಹಮ್ಮಿಕೊಂಡಿದೆ. ಅದರ ಅಂಗವಾಗಿ ಕರ್ನಾಟಕ ಸಾಹಿತ್ಯ ಅಕಾಡೆಮಿಯು ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಕರ್ನಾಟಕದ ಐತಿಹಾಸಿಕ ಮಹತ್ವಗಳನ್ನು ತಿಳಿಸಿಕೊಡುವ ೭೫ ಸ್ಥಳಗಳ ಬಗ್ಗೆ ೭೫ ವಿವಿಧ ಲೇಖಕರಿಂದ ಒಟ್ಟು ೭೫ ಪುಸ್ತಕಗಳನ್ನು, ಅದರ ತಲಾ ೧೦೦೦ ಪ್ರತಿಯಂತೆ ೭೫೦೦೦ ಪ್ರತಿಗಳನ್ನು ಎರಡು ತಿಂಗಳಲ್ಲಿ ಬರೆಯಿಸಿ, ಮುದ್ರಿಸಿ ಓದುಗರಿಗೆ ತಲುಪಿಸುತ್ತಿರುವುದು ನಿಜಕ್ಕೂ ಹೆಮ್ಮೆಯ ವಿಷಯ. ಕರ್ನಾಟಕ ಸಾಹಿತ್ಯ ಅಕಾಡೆಮಿಯ ಪ್ರತಿಯೊಬ್ಬರನ್ನೂ ಈ ಸಂದರ್ಭದಲ್ಲಿ ಅಭಿನಂದಿಸುತ್ತೇನೆ.

ನಾವೆಲ್ಲರೂ ಕೂಡಿ ನಮ್ಮ ನಮ್ಮ ಮನೆಮನಗಳಿಂದ ನಾಡು, ನುಡಿ, ಸಾಹಿತ್ಯ, ಸಂಸ್ಕೃತಿ, ಪರಂಪರೆಗಳನ್ನು ಬೆಳೆಸೋಣ. ರಸಋಷಿ ಕುವೆಂಪು ಅವರು ಹೇಳಿರುವ 'ಜಯ ಭಾರತ ಜನನಿಯ ತನುಜಾತೆ, ಜಯ ಹೇ ಕರ್ನಾಟಕ ಮಾತೆ' ಎಂಬ ಆದರ್ಶದೊಂದಿಗೆ ಕರ್ನಾಟಕದ ಮೂಲಕ ಭಾರತವನ್ನೂ, ಭಾರತದ ಮೂಲಕ ಕರ್ನಾಟಕವನ್ನೂ ಅಭಿನ್ನಗೊಳಿಸೋಣ, ಬಲಿಷ್ಠಗೊಳಿಸೋಣ. ಭವ್ಯ ಕರ್ನಾಟಕ, ಭವ್ಯ ಭಾರತ ನಿರ್ಮಿಸೋಣ.

**(ವಿ ಸುನಿಲ್ ಕುಮಾರ್)**
ಇಂಧನ, ಕನ್ನಡ ಮತ್ತು ಸಂಸ್ಕೃತಿ
ಇಲಾಖೆ ಸಚಿವರು

# ಪ್ರಧಾನ ಸಂಪಾದಕರ ಮಾತು

ಸ್ವಾತಂತ್ರ್ಯ ಎಂಬುದು ಲೌಕಿಕವಾಗಿಯೂ ಲೋಕೋತ್ತರವಾಗಿಯೂ ಮಹೋನ್ನತವಾದ ಮೌಲ್ಯ. ಭಾರತೀಯ ಸಂಸ್ಕೃತಿಯು ಧರ್ಮ, ಅರ್ಥ, ಕಾಮ, ಮೋಕ್ಷಗಳನ್ನು ಪುರುಷಾರ್ಥವೆಂದು ಕರೆದಿದೆ. ಮೋಕ್ಷವೆಂದರೆ ಬಿಡುಗಡೆ, ಸ್ವಾತಂತ್ರ್ಯ ಎಂದರ್ಥ. ಹುಟ್ಟು ಸಾವುಗಳಿಂದ ಬಿಡುಗಡೆ ಎಂಬುದು ಲೋಕೋತ್ತರವಾದ ಅರ್ಥವಾದರೆ, ಸಾವಿಲ್ಲದ, ನೋವಿಲ್ಲದ ಸ್ಥಿತಿಗಾಗಿ ಕಲ್ಯಾಣ ನಾಡಿನ ನಿರ್ಮಾಣಕ್ಕಾಗಿ ನಾವು ಗಳಿಸುವ ನಮ್ಮ ಸ್ವಯಂ ನಿಯಂತ್ರಣದ ಸ್ವಾತಂತ್ರ್ಯ ಎಂಬುದು ಲೌಕಿಕವಾದ ಅರ್ಥ. ಲೌಕಿಕ ಹಾಗೂ ಅಲೌಕಿಕಗಳು ಪರಸ್ಪರ ವಿರೋಧಿಗಳಲ್ಲ; ಅವು ಪರಸ್ಪರ ಪೂರಕವಾದವು. ಲೋಕವನ್ನು ಲೋಕೋತ್ತರದ ಔನ್ನತ್ಯಕ್ಕೆ ಏರಿಸುವ ದರ್ಶನವೇ ಭಾರತೀಯ ದರ್ಶನ. ಸ್ವಾತಂತ್ರ್ಯ ನಮ್ಮ ಧರ್ಮ, ನಮ್ಮ ಆತ್ಮ, ನಮ್ಮ ಜೀವನದ ಪರಮ ಪುರುಷಾರ್ಥ. ಅದನ್ನು ಬಯಲು ಎಂದೂ ಕರೆದಿದ್ದಾರೆ. ಅಂತಹ ಸ್ವಾತಂತ್ರ್ಯಕ್ಕಾಗಿ ಭಾರತವು ತನ್ನ ಪುರಾತನ ಕಾಲದಿಂದಲೂ ಬದುಕುತ್ತಾ ಬಂದಿದೆ. ಸ್ವಾತಂತ್ರ್ಯಕ್ಕೆ ಚ್ಯುತಿ ಬಂದಾಗಲೆಲ್ಲ ಭಾರತೀಯರು ಭರತಮಾತೆಯ ಪದತಲದಲ್ಲಿ ತಮ್ಮ ತನು–ಮನ–ಧನಗಳನ್ನು ಅರ್ಪಿಸಿದ್ದಾರೆ. ಅದನ್ನು ರಸಋಷಿ ಕುವೆಂಪು ಅವರು "ಇಂದು ರಕ್ತದ ಬಿಂದು ನಾಳೆ ಸೌಖ್ಯದ ಸಿಂಧು" ಎಂದು ಕರೆದಿದ್ದಾರೆ.

ನಮ್ಮ ದೇಶದ ಸ್ವಾತಂತ್ರ್ಯ ಎಂದರೆ ಅದು ತ್ಯಾಗ, ಬಲಿದಾನಗಳ ಫಲ. ಭಾರತದ ಮೇಲೆ ದಾಳಿ ಮಾಡಲು ಬಂದ ಅಲೆಗ್ಸಾಂಡರನಿಂದ ಹಿಡಿದು ಮೊಘಲರಾದಿಯಾಗಿ ಬ್ರಿಟಿಷರವರೆಗಿನ ಎಲ್ಲ ದಾಳಿಕೋರರ ಕ್ರೌರ್ಯವನ್ನು ಮೆಟ್ಟಿ ನಿಂತು ಭಾರತೀಯರು ಭಾರತಾಂಬೆಯ ಆತ್ಮಗೌರವವನ್ನು ಎತ್ತಿಹಿಡಿದಿರುವುದರ ಪ್ರತೀಕ ನಮ್ಮ ಸ್ವಾತಂತ್ರ್ಯ.

ಪ್ರಸ್ತುತ ೧೫.೦೮.೧೯೪೭ ರಂದು ನಾವು ಗಳಿಸಿದ ಸ್ವಾತಂತ್ರ್ಯದ ಅಮೃತಘಳಿಗೆಗೆ ಇದೀಗ ೧೫.೦೮.೨೦೨೧ಕ್ಕೆ ೭೫ನೆಯ ಸ್ವಾತಂತ್ರ್ಯ ಅಮೃತ ಮಹೋತ್ಸವ ಸಂಭ್ರಮ. ೧೫.೦೮.೨೦೨೨ಕ್ಕೆ ೭೫ ವರ್ಷಗಳನ್ನು ಪೂರೈಸಿ ೭೬ನೆಯ ಸ್ವಾತಂತ್ರ್ಯೋತ್ಸವದ ಆತ್ಮನಿರ್ಭರ ಭಾರತದ ನವನಿರ್ಮಾಣದ ಅವಕಾಶಗಳ ಸಂಭ್ರಮ. ಈ ಒಂದು ವರ್ಷ ಕಾಲ ಭಾರತ ಸರ್ಕಾರ, ಕರ್ನಾಟಕ ಸರ್ಕಾರ "ಸ್ವಾತಂತ್ರ್ಯದ ಅಮೃತ ಮಹೋತ್ಸವ"ವನ್ನು ಆಚರಿಸುತ್ತಿದೆ. ಅದರ ಅಂಗವಾಗಿ ಕರ್ನಾಟಕ ಸಾಹಿತ್ಯ ಅಕಾಡೆಮಿಯು ಆಗಸ್ಟ್– ೨೦೨೧ರ ತಿಂಗಳು ಪೂರ್ತಿ "ಸ್ವಾತಂತ್ರ್ಯ ಹೋರಾಟದಲ್ಲಿ ಕರ್ನಾಟಕ" ಎಂಬ ಹೆಸರಿನಲ್ಲಿ ಕರ್ನಾಟಕದ ಎಲ್ಲ ಜಿಲ್ಲೆಗಳಲ್ಲಿ ನಡೆದಿರುವ ಸ್ವಾತಂತ್ರ್ಯ ಹೋರಾಟ ಕುರಿತ ಆನ್ಲೈನ್ ಉಪನ್ಯಾಸಗಳನ್ನು ನಡೆಸಿದೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಮಾನ್ಯ ಸಚಿವರಾದ ಶ್ರೀ ಸುನಿಲ್ ಕುಮಾರ್ ಅವರು ಸ್ವಾತಂತ್ರ್ಯದ ಅಮೃತ ಮಹೋತ್ಸವವನ್ನು ರಾಜ್ಯಾದ್ಯಂತ ಬೃಹತ್ ಸ್ವರೂಪದಲ್ಲಿ ಅರ್ಥಪೂರ್ಣವಾಗಿ ಆಚರಿಸಬೇಕೆಂದು ತೀರ್ಮಾನಿಸಿದ್ದಾರೆ. ಅವರಿಗೆ ರಾಜ್ಯದ ೭೫ ಸ್ಥಳಗಳಲ್ಲಿ ೭೫ ಸ್ವಾತಂತ್ರ್ಯ ಜಾಥಾಗಳು ನಡೆಯಬೇಕು, ಎಲ್ಲ ಜಿಲ್ಲೆಗಳಿಂದ ರಥಯಾತ್ರೆ ಆಗಬೇಕು, ಬೆಂಗಳೂರು ಮಹಾನಗರದಲ್ಲಿ ಮೂರು ದಿನಗಳ ಸಮಾವೇಶ, ಪ್ರದರ್ಶನಿ, ಪುಸ್ತಕ ಮಾರಾಟ ಮೊದಲಾದ ಹತ್ತು ಹಲವು ಚಟುವಟಿಕೆಗಳನ್ನು ನಡೆಸುವ ಮೂಲಕ ಹೊಸ ತಲೆಮಾರಿಗೆ ಸ್ವಾತಂತ್ರ್ಯದ ಅಮೃತವನ್ನುಣಿಸಬೇಕೆಂಬ ಕನಸಿದೆ. ಅದರ ಭಾಗವಾಗಿ ಅವರು ರಾಜ್ಯದ ೭೫ ಸ್ವಾತಂತ್ರ್ಯ ಹೋರಾಟದ ಸ್ಥಳಗಳನ್ನು ಗುರುತಿಸಿ ೭೫ ಕಿರುಹೊತ್ತಿಗೆಗಳನ್ನು ಬರೆಸಿ ಪ್ರಕಟಿಸುವ ಜವಾಬ್ದಾರಿಯನ್ನು ಕರ್ನಾಟಕ ಸಾಹಿತ್ಯ ಅಕಾಡೆಮಿಗೆ ವಹಿಸಿದ್ದಾರೆ. ನಮಗೆ ಜವಾಬ್ದಾರಿ ವಹಿಸಿದ್ದು ದಿನಾಂಕ: ೩೦.೧೧.೨೦೨೧ರಂದು ಮಾನ್ಯ ಸಚಿವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ. ಅಂದಿನಿಂದಲೇ ಕಾರ್ಯಪ್ರವೃತ್ತರಾದ ನಾವು ರಾಜ್ಯದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಎಲ್ಲ ಜಿಲ್ಲಾ ಸಹಾಯಕ ನಿರ್ದೇಶಕರಿಂದ ಸ್ಥಳಗಳ ಮಾಹಿತಿ ಪಡೆದೆವು. ಜೊತೆಗೆ ರಾಜ್ಯದ ಐದು ಜನರನ್ನು ಸಂಪಾದಕರನ್ನಾಗಿ ನಿಯೋಜಿಸಿ ದಿನಾಂಕ: ೦೩.೧೨.೨೦೨೧ರಂದು ಅಕಾಡೆಮಿಯಲ್ಲಿ ಸಂಪಾದಕರ ಸಭೆ ನಡೆಸಿದೆವು. ಸಂಪಾದಕರಾಗಿ ಡಾ. ಮೃತ್ಯುಂಜಯ ರುಮಾಲೆ, ಹೊಸಪೇಟೆ, ಡಾ. ಎಸ್. ಜಿ. ರಾಮದಾಸ ರೆಡ್ಡಿ, ಮೈಸೂರು, ಡಾ. ಪ್ರಕಾಶ ಗ. ಖಾಡೆ, ಬಾಗಲಕೋಟೆ,



ಶ್ರೀ ನರೇಂದ್ರಕುಮಾರ್ ಎಸ್.ಎಸ್., ಬೆಂಗಳೂರು ಹಾಗೂ ಶ್ರೀಮತಿ ರಾಜಲಕ್ಷ್ಮಿ ಕೋಡಿಬೆಟ್ಟು, ಮಂಗಳೂರು ಇವರೊಂದಿಗೆ ಎಲ್ಲ ಸ್ಥಳಗಳ ಬಗ್ಗೆ ಚರ್ಚಿಸಿ ೭೫ ಸ್ಥಳಗಳನ್ನು ಆಯ್ಕೆ ಮಾಡಿದೆವು. ಒಬ್ಬೊಬ್ಬ ಸಂಪಾದಕರಿಗೆ ೧೫ ಸ್ಥಳಗಳನ್ನು ಹಂಚಿ, ೧೫ ಲೇಖಕರಿಂದ ೧೫ ಕಿರುಪುಸ್ತಕಗಳನ್ನು ಬರೆಯಿಸಿಕೊಡುವ ಜವಾಬ್ದಾರಿ ನೀಡಿದೆವು. ಎರಡು ತಿಂಗಳ ಅವಧಿಯಲ್ಲಿ ಈ ೭೫ ಪುಸ್ತಕಗಳು ಪ್ರಕಟವಾಗುತ್ತಿವೆ. ಈ ಕೃತಿಗಳು ಇತಿಹಾಸದ ಶಾಸ್ತ್ರೀಯ ಮಾದರಿ, ವರದಿಯ ಕಥನ ಮಾದರಿ ಹಾಗೂ ಸೃಜನಶೀಲ ಅಭಿವ್ಯಕ್ತಿಯ ಸಾಹಿತ್ಯ ಮಾದರಿಗಳಿಂದ ಕೂಡಿರುವುದು ಗಮನಾರ್ಹ. ಅತೀ ಕಡಿಮೆ ಅವಧಿಯಲ್ಲಿ ಕ್ಷೇತ್ರಕಾರ್ಯ ಮತ್ತು ಅಧ್ಯಯನ ಮಾಡಿ ಮೌಲಿಕವಾದ ಕೃತಿಗಳನ್ನು ಬರೆದುಕೊಟ್ಟಿರುವ ಎಲ್ಲಾ ಲೇಖಕರ, ಸಂಪಾದಕರ ಶ್ರಮ ಸಾರ್ಥಕತೆ ಪಡೆದಿದೆ. ಈ ನಿಟ್ಟಿನ ಅಧ್ಯಯನಗಳಿಗೆ ಈ ಕೃತಿಗಳು ಪ್ರೇರೇಪಿಸುತ್ತವೆ. ಇದೊಂದು ತುರ್ತಾದ ಆಂದೋಲನಾತ್ಮಕವಾದ ಪ್ರಯತ್ನ. ಇದಕ್ಕೆ ಸಂಪೂರ್ಣ ಸಹಕಾರ ನೀಡಿದ ಮಾನ್ಯ ಸಚಿವರಾದ ಶ್ರೀ ವಿ ಸುನಿಲ್ ಕುಮಾರ್ ಅವರಿಗೆ, ಎಲ್ಲಾ ಸಂಪಾದಕರಿಗೆ, ಎಲ್ಲಾ ಲೇಖಕರಿಗೆ, ಇಲಾಖೆಯ ಕಾರ್ಯದರ್ಶಿಗಳಾದ ಡಾ. ಎನ್. ಮಂಜುಳಾ ಅವರಿಗೆ, ನಿರ್ದೇಶಕರಾದ ಶ್ರೀ ಎಸ್. ರಂಗಪ್ಪ ಅವರಿಗೆ, ಜಂಟಿ ನಿರ್ದೇಶಕರಾದ ಶ್ರೀ ಅಶೋಕ್ ಎನ್. ಚಲವಾದಿ ಅವರಿಗೆ ಹಾಗೂ ಎಲ್ಲಾ ಅಧಿಕಾರಿ ವರ್ಗಕ್ಕೆ ಸಾಹಿತ್ಯ ಅಕಾಡೆಮಿಯ ಸರ್ವ ಸದಸ್ಯರಿಗೆ ಪ್ರೀತಿಯಿಂದ ವಂದಿಸುತ್ತೇನೆ. ಯೋಜನೆ ಪೂರ್ಣಗೊಳ್ಳಲು ವಿಶೇಷವಾಗಿ ನೆರವಾದ ಮಿತ್ರರಾದ ಶ್ರೀ ಮಾಲತೀಶ್ ಭಟ್, ಶ್ರೀ ಹರ್ಷ ನಾರಾಯಣ, ಶ್ರೀಮತಿ ನಯನಾ ಎಸ್. ಅವರನ್ನು ನೆನೆಯುತ್ತಾ ವಂದಿಸುತ್ತೇನೆ. ಕಡಿಮೆ ಅವಧಿಯಲ್ಲಿ ಹಗಲಿರುಳು ಶ್ರಮಿಸಿದ ದಣಿವರಿಯದ ದುಡಿಮೆಗಾರರಾದ ರಿಜಿಸ್ಟ್ರಾರ್ ಎನ್. ಕರಿಯಪ್ಪ, ನಮ್ಮ ಬಳಗ ವಿ. ಹರೀಶ್‌ಕುಮಾರ್, ಹರೀಶ್, ಸೈಯದ್ ಜಾವೀದ್, ಸುಚಿತ್ರ ಎಸ್. ಜಿ., ಗೋಪಾಲ ಎನ್., ಸುನೀಲ್ ಅವರಿಗೆ ಹಾಗೂ ಸುಂದರವಾಗಿ ಮುದ್ರಿಸಿದ ರಶ್ಮಿ ಪ್ರಿಂಟರ್ಸ್ ಬಳಗಕ್ಕೆ, ಮುಖಪುಟ ರಚಿಸಿಕೊಟ್ಟ ಶ್ರೀ ಮುರಳೀಧರ ವಿ. ರಾಥೋಡ್ ಅವರಿಗೆ ವಂದಿಸುತ್ತೇನೆ.

**ಬಿ. ವಿ. ವಸಂತಕುಮಾರ್**

ಅಧ್ಯಕ್ಷರು

# ಲೇಖಕರ ಮಾತು

ಭಾರತದ ಸ್ವಾತಂತ್ರ್ಯ ಹೋರಾಟವು ಅತ್ಯಂತ ರೋಚಕವಾದುದು. ಸುಮಾರು ಎರಡು ಶತಮಾನಗಳ ಕಾಲ ಇಂಗ್ಲಿಷರೊಂದಿಗೆ ಹೋರಾಡಿ, ಜೀವ ತ್ಯಾಗ ಮಾಡಿದ, ತಮ್ಮದೆಲ್ಲವನ್ನೂ ದೇಶಕ್ಕೇ ಸಮರ್ಪಿಸಿದ ದೇಶಾಭಿಮಾನಿಗಳು ಒಂದು ಕಡೆಯಾದರೇ, ಇಡೀ ಜೀವನದಲ್ಲಿ ಏನನ್ನೂ ಸಾಧಿಸದೇ, ಎಲ್ಲವನ್ನೂ ಲಾಭದೃಷ್ಟಿಯಿಂದ ನೋಡಿದ, ಸ್ವಾತಂತ್ರ್ಯ ಬಂದ ನಂತರ ಅಧಿಕಾರದ ಗದ್ದುಗೆ ಏರಿದವರು ಇಳಿಯದೇ ಇರುವವರ ದೊಡ್ಡ ಗುಂಪು ಇನ್ನೊಂದೆಡೆಗೆ. ಈ ಇಬ್ಬಂದಿತನದಲ್ಲಿ ಶ್ರೀಸಾಮಾನ್ಯನು ನಲುಗಿ ಹೋಗಿದ್ದಾನೆ.

ಸ್ವಾತಂತ್ರ್ಯಾ ನಂತರದ ಅಮೃತ ಮಹೋತ್ಸವದ ಈ ಸಂದರ್ಭದಲ್ಲಿ ನಾವು ಹೊರಳಿ ನೋಡಿದಾಗ, ಸ್ವಾತಂತ್ರ್ಯ ಹೋರಾಟಗಾರರ ಕೆಚ್ಚೆದೆ ನಮ್ಮ ಕಣ್ಣ ಮುಂದೆ ಸುಳಿಯುತ್ತದೆ. ನಮ್ಮ ಕಣ್ಣ ಮುಂದಿನ ಬದುಕು, ನಮ್ಮ ಕಣ್ಣ ಮುಂದಿನ ಬೆಳಕಾಗಿ ಕಂಗೊಳಿಸುತ್ತದೆ.

ಸ್ವಾತಂತ್ರ್ಯ ಹೋರಾಟದಲ್ಲಿ ಸುರಪುರಕ್ಕೆ ಅಚ್ಚಳಿಯದ ಸ್ಥಾನವಿದೆ. ೧೮೫೭ ರಲ್ಲಿ ಪ್ರಥಮ ಸ್ವಾತಂತ್ರ್ಯದ ಹೋರಾಟದ ಕಿಡಿ ಹಾರಿದ್ದೇ ಸುರಪುರದಿಂದ! ಸುರಪುರದ ಬೇಡ ಅರಸರು, ಶೌರ್ಯಕ್ಕೇ ಇನ್ನೊಂದು ಹೆಸರಾಗಿದ್ದರು.

ರಾಜಾ ನಾಲ್ವಡಿ ವೆಂಕಟಪ್ಪ ನಾಯಕನು ತನ್ನ ೨೩ನೇ ವಯಸ್ಸಿಗೇ ಬ್ರಿಟಿಷರನ್ನು ಸದೆ ಬಡೆದು, ಅವರನ್ನು ಹಣ್ಣುಗಾಯಿ, ನೀರುಗಾಯಿ ಮಾಡಿದ್ದ. ಬ್ರಿಟಿಷರಂಥ ದೊಡ್ಡ ಸೈನ್ಯ ಪಡೆಯನ್ನು ಈ ಶೂರ ರಾಜ ಹಿಮ್ಮೆಟ್ಟಿಸಿ ಅವರ ದಿಕ್ಕು ತಪ್ಪಿಸಿದ್ದ. ಕೊನೆಗೆ ಅವನನ್ನು ಕುತಂತ್ರದ ಮೂಲಕ ಬ್ರಿಟಿಷರು ಸೆರೆ ಹಿಡಿದು, ಅವನನ್ನು ಕೊಂದು, ರಾಜನು ಗುಂಡು ಹಾರಿಸಿಕೊಂಡು ಆತ್ಮಹತ್ಯೆ

ಮಾಡಿಕೊಂಡ ಎಂದು ಹೇಳಿದರು. ಕೊನೆಗೆ ಅವನ ದೇಹವನ್ನು ಕೂಡ ಸುರಪುರ ಸಂಸ್ಥಾನಕ್ಕೆ ಕೊಡಲಿಲ್ಲ. ಇಡೀ ದಕ್ಷಿಣ ಭಾರತದಲ್ಲೆಲ್ಲಾ ಬ್ರಿಟೀಷರ ವಿರುದ್ಧ ಬಡಿದೆಬ್ಬಿಸಿದ, ಅವರ ವಿರುದ್ಧ ಆಕ್ರೋಶಗೊಳ್ಳುವಂತೆ ಮಾಡಿದ್ದು ಇದೇ ಸುರಪುರದ ವೀರ ಅರಸು. ಸಂಗೊಳ್ಳಿ ರಾಯಣ್ಣನಿಗೂ ಕೂಡ ಮುನ್ನೂರ ಜನ ವೀರ ಸೈನಿಕರನ್ನು ನೀಡಿ, ಅವನು ಬ್ರಿಟಿಷರ ವಿರುದ್ಧ ಸತತ ಐದು ವರ್ಷಗಳವರೆಗೆ ಹೋರಾಡುವಂತೆ ಪ್ರೇರೆಪಿಸಿದ್ದೂ, ಇದೇ ಸುರಪುರದ ಅರಸರು! ರಾಣಿ ಈಶ್ವರಮ್ಮ ಕೂಡ ಇಂಗ್ಲಿಷರನ್ನು ಸದೆಬಡಿದ ಸುರಪುರದ ವೀರರಾಣಿ! ಕರ್ನಲ್ ಮೆಡೋಜ್ ಟೇಲರ್‌ನ ಕುತಂತ್ರಗಳಿಗೆ ಮಣಿಯದೇ ಹೋರಾಟ ಮಾಡಿದ ವೀರ ವನಿತೆ ರಾಣಿ ಈಶ್ವರಮ್ಮನವರು.

ಕೊನೆಗೆ ೧೮೫೮ರಲ್ಲಿ ಸುರಪುರ ಸಂಸ್ಥಾನವು ಆಂಗ್ಲರ ವಶವಾಗಿ ಇದನ್ನು ಹೈದ್ರಾಬಾದ್ ನಿಜಾಮ್‌ನ ಆಡಳಿತಕ್ಕೊಳಪಡಿಸುತ್ತಾರೆ. ನಂತರ ದೀರ್ಘಕಾಲ ಬ್ರಿಟಿಷರು ಹಾಗೂ ಹೈದ್ರಾಬಾದ್ ನಿಜಾಂರ ನಿರಂಕುಶಮತಿ ಆಡಳಿತಕ್ಕೊಳಪಟ್ಟು ನಲುಗಿದ ಸುರಪುರ ಸಂಸ್ಥಾನ ಹಾಗೂ ಹೈದ್ರಾಬಾದ್ ಕರ್ನಾಟಕದ (ಈಗ ಕಲ್ಯಾಣ ಕರ್ನಾಟಕವಾಗಿದೆ) ಪ್ರದೇಶಗಳು ೧೯೪೭ ಅಗಸ್ಟ್ ೧೫ ರಂದು ಮುಕ್ತಿ ಪಡೆಯಲಿಲ್ಲ, ಸ್ವತಂತ್ರಗೊಳ್ಳಲಿಲ್ಲ, ಇದಕ್ಕಾಗಿ ಸ್ವತಂತ್ರ ಭಾರತದ ಉಕ್ಕಿನ ಮನುಷ್ಯ ಸರ್ದಾರ್ ವಲ್ಲಭಾಯಿ ಪಟೇಲರೇ ಬರಬೇಕಾಯಿತು. ಆಗ ನಡೆದ 'ಪೋಲೀಸ್ ಆ್ಯಕ್ಷನ್'ನಲ್ಲಿ ಅನೇಕ ಸ್ವಾತಂತ್ರ್ಯ ಹೋರಾಟಗಾರರು ವೀರ ಮರಣವನ್ನಪ್ಪಿದರು.

ಕೊನೆಗೆ ಈ ಭಾಗವು ೧೯೪೮ ಸೆಪ್ಟೆಂಬರ್ ೧೭ ರಂದು ಸ್ವತಂತ್ರವಾಯಿತು. ಹೀಗಾಗಿ ಇಲ್ಲಿ ಎರಡೆರಡು ಸ್ವಾತಂತ್ರ್ಯ ಹೋರಾಟಗಳು ನಡೆದವು. ಇದು ಸ್ವಾತಂತ್ರ್ಯ ಹೋರಾಟದ ಅಮರ ಕಥೆ. ಎಲ್ಲರೂ ಕೃತಜ್ಞತೆಯಿಂದ ಸ್ಮರಿಸಬೇಕಾದ ನಿತ್ಯ ಕಥೆ.

ಭಾರತದ ಸ್ವಾತಂತ್ರ್ಯದ ಅಮೃತ ಮಹೋತ್ಸವದ ಸಂದರ್ಭದಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿಯವರು 'ಸುರಪುರದ ಸ್ವಾತಂತ್ರ್ಯ ಹೋರಾಟಗಾರರು' ಎಂಬ ಕಿರುಪುಸ್ತಕ ಹೊರ ತರುತ್ತಿರುವುದು ತುಂಬ ಸಂತಸದ ಸಂಗತಿ. ಇದನ್ನು ರಚಿಸಲು ಹೇಳಿದ ಸಾಹಿತ್ಯ ಅಕಾಡೆಮಿ ಅಧ್ಯಕ್ಷರಾದ



ಡಾ. ಬಿ. ವಿ. ವಸಂತಕುಮಾರ್ ಅವರಿಗೂ, ಅಕಾಡೆಮಿಯ ಎಲ್ಲ ಸದಸ್ಯರಿಗೂ ಹಾಗೂ ಸಂಪಾದಕರಾದ ಡಾ. ಪ್ರಕಾಶ ಗ.ಖಾಡೆ ಅವರಿಗೂ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ. ನನ್ನ ಕುಟುಂಬದವರಿಗೂ, ಮಿತ್ರರಿಗೂ ಧನ್ಯವಾದಗಳನ್ನು ಸಲ್ಲಿಸುತ್ತೇನೆ.

ಎಲ್ಲರಿಗೂ ಸ್ವಾತಂತ್ರ್ಯ ಅಮೃತ ಮಹೋತ್ಸವದ ನಮನಗಳು.

ಸುರಪುರ **ಶ್ರೀನಿವಾಸ ಜಾಲವಾದಿ**

ದಿ.೨೨-೧೨-೨೦೨೧

# ಪರಿವಿಡಿ


| | |
|---|---|
| ಶುಭ ಸಂದೇಶ | ೩ |
| ಶುಭ ಸಂದೇಶ | ೫ |
| ಪ್ರಧಾನ ಸಂಪಾದಕರ ಮಾತು | ೭ |
| ಲೇಖಕರ ಮಾತು | ೧೧ |
| ‘ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಸುರಪುರ’ | ೧೭ |
| ರಾಜಾ ವೆಂಕಟಪ್ಪನಾಯಕನ ದುಂದುಮೆ | ೩೬ |
| ಸುರಪುರದ ಅತ್ಯಂತ ಹಿರಿಯ 'ದುಂದುಮೆ' ಹಾಡುಗಾರರು | ೪೭ |
| ಈಗಿನ ಪೀಳಿಗೆಯ 'ದುಂದುಮೆ' ಹಾಡುಗಾರರು | ೪೭ |
| ಸುರಪುರದ ವೀರ ಮಹಿಳೆ ರಾಣಿ ಈಶ್ವರಮ್ಮ | ೪೭ |
| ಇತಿಹಾಸ ಮರೆತ ಸ್ವಾತಂತ್ರ್ಯ ಹೋರಾಟದ ಅಧ್ಯಾಯ | ೫೧ |
| ಆಧಾರ ಗ್ರಂಥಗಳು | ೬೩ |
| ● ಅನುಬಂಧ<br>ಛಾಯಾಚಿತ್ರಗಳು | ೬೪ |
| ಅಮೃತ ಮಹೋತ್ಸವ ಪ್ರಕಟಣೆ – ೭೫ ಕಿರುಪುಸ್ತಕಗಳ ಪಟ್ಟಿ | ೬೯ |

# ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಸುರಪುರ

ಇದು ಅಮೃತಘಳಿಗೆ, ಅಮೃತ ಮಹೋತ್ಸವದ ಸಂಭ್ರಮ, ಭಾರತ ದೇಶಕ್ಕೆ ಸ್ವಾತಂತ್ರ್ಯ ಸಿಕ್ಕು ೭೫ ವರ್ಷಗಳು! ಸುದೀರ್ಘ ಹೋರಾಟದ ನಂತರ ದೇಶ ಬಂಧಮುಕ್ತವಾಯಿತು. ಇದಕ್ಕಾಗಿ ಲಕ್ಷ ಲಕ್ಷ ಜನ ತಮ್ಮ ರಕ್ತ ಹರಿಸಿದರು. ಅನೇಕರು ಸ್ವಾತಂತ್ರ್ಯ ಹೋರಾಟದಲ್ಲಿ ಧುಮುಕಿ ಮನೆ–ಮಠ ಕಳೆದುಕೊಂಡರು.

ಮಹಾತ್ಮಾ ಗಾಂಧೀಜಿಯವರ ಅಹಿಂಸಾತ್ಮಕ ಚಳವಳಿಗಳು, ಸತ್ಯಾಗ್ರಹಗಳು, ಉಪವಾಸವೆಂಬ ಸತ್ಯವ್ರತಗಳು, ಸತ್ಯ, ಅಹಿಂಸೆ, ಪ್ರಾಮಾಣಿಕತೆ,... ಮುಂತಾದವುಗಳ ಜೊತೆಜೊತೆಗೆ, ಬೆಂಕಿ ಉಂಡೆ ಸುಭಾಷ್ಚಂದ್ರ ಭೋಸರ ದಾಳಿಗಳು, ಜವಾಹರಲಾಲ ನೆಹರು ಅವರ ಸಮಾಧಾನಿ ಹೋರಾಟ, ಸರ್ದಾರ್ ವಲ್ಲಭಾಯಿ ಪಟೇಲರ ಉಕ್ಕಿನ ಭದ್ರಕೋಟೆ,...ಲಾಲ್ ಪಾಲ್ ಬಾಲ್...ಹೀಗೆ ಎಲ್ಲಾ ನಾಯಕರ ಸಮೂಹ ಹೋರಾಟದ ಫಲವಾಗಿ ೧೯೪೭ ಅಗಸ್ಟ್ ೧೫ ರಂದು ಈ ದೇಶಕ್ಕೆ ಸ್ವಾತಂತ್ರ್ಯ ಲಭಿಸಿತು. ಅದೂ ಭಾರತ–ಪಾಕಿಸ್ತಾನ ಎಂಬ ಎರಡು ದೇಶಗಳನ್ನು ಇಬ್ಭಾಗಿಸಿ ಹೋದವರು ಇಂಗ್ಲಿಷರು.

ಸುರಪುರದ ಅಪ್ರತಿಮ ಸಾಹಸಿ ದೊರೆ ನಾಲ್ವಡಿ ರಾಜಾ ವೆಂಕಟಪ್ಪ ನಾಯಕ, ಕಿತ್ತೂರ ರಾಣಿ ಚೆನ್ನಮ್ಮ, ಝಾನ್ಸಿ ರಾಣಿ ಲಕ್ಷ್ಮೀಬಾಯಿ ಮೊದಲಾದ ದೇಶಾಭಿಮಾನಿ ರಾಜರು–ರಾಣಿಯರು, ಸಂಗೊಳ್ಳಿ ರಾಯಣ್ಣನಂತಹ ದೇಶಭಕ್ತರು ಮೊದಲಿನಿಂದಲೂ ಬ್ರಿಟಿಷರ ವಿರುದ್ಧ ಹೋರಾಡುತ್ತಲೇ ಬಂದಿದ್ದರು. ಅನೇಕ ಕ್ರಾಂತಿಕಾರಿಗಳು ಬ್ರಿಟಿಷರ ಜಂಘಾಬಲವನ್ನೇ ಉಡುಗಿಸಿದ್ದರು. ಇವರೆಲ್ಲರ ಕೋಮಲ ದೇಶಭಕ್ತಿಯಂತಹ ಹೂವು ಕೊನೆಗೆ ಸ್ವಾತಂತ್ರ್ಯ ಜ್ಯೋತಿಯಾಗಿ ಅರಳಿತು.

**ಬೆಳಕು, ಅಸೀಮ ಬೆಳಕು! ಕತ್ತಲೆಗಿನ್ನೆಲ್ಲಿದೆ ಸ್ಥಾನ?**
**ಅಜ್ಞ ಜೀವದಾಳ ಗುಹೆಯು ತೆರೆಯಿತು ಗೂಢಗಳ**

**ಅಪ್ರಜ್ಞೆಯ ಇಳಿದು ನೋಡಲಾರದಂಥ ಕಂದರ**
**ಮಿಣುಕುತಿಹುದು ನಿಂತು ಪ್ರತೀಕ್ಷೆಯಲ್ಲಿ ಕಾತರ**

ಶ್ರೀ ಅರಬಿಂದೋ ಅವರು ಹೇಳುವಂತೆ ಬೆಳಕಿನ ಮುಂದೆ ಕತ್ತಲೆ ನಿಲ್ಲುವುದೆ? ಜ್ಞಾನದ ಮುಂದೆ ಅಜ್ಞಾನದ ಆಟ ನಡೆಯುವುದೆ? ಇಲ್ಲ, ಪ್ರಖರ ದೇಶಾಭಿಮಾನ, ತಾಯಿಯಂತೆ ಈ ಮಣ್ಣನ್ನು ಆರಾಧಿಸುವವರ ಮುಂದೆ, ಕುಟೀಲರ ಆಟ ಸಾಗದು. ದಾಸ್ಯತ್ವದ ಸಂಕೋಲೆಗಳು ತನ್ನಷ್ಟಕ್ಕೆ ತಾನೇ ಕಳಚಿ ಬೀಳುತ್ತವೆ.

ದೇಶ ಸ್ವತಂತ್ರವಾದರೆ ಎಲ್ಲರಿಗೂ ಸಮಾನ ಅವಕಾಶಗಳು ಸಿಗುತ್ತವೆ, ಪ್ರಜಾಪ್ರಭುತ್ವದಡಿಯಲ್ಲಿ ಪ್ರಜೆಗಳ ಸರಕಾರವೇ ಬರುತ್ತದೆ. ಅವರಿಗೆ ಎಲ್ಲ ರೀತಿಯ ಹಕ್ಕುಗಳು ದೊರಕುತ್ತವೆ. ದೇಶಕ್ಕೆ ಒಂದು ಅತ್ಯಂತ ಮಹತ್ವದ ಹೊಸ ಸಂವಿಧಾನ ಸಿಗುತ್ತದೆ. ಎಲ್ಲರೂ ಸಮಾನರು ಎಂಬ ಅಂಶ ಪ್ರಮುಖವಾಗುತ್ತದೆ. ಹೆಣ್ಣು ಮಕ್ಕಳಿಗೆ ಶಿಕ್ಷಣ, ಉದ್ಯೋಗಾವಕಾಶಗಳು ಸಿಕ್ಕು ಹೊಸ ಮನ್ವಂತರಕ್ಕೆ ನಾಂದಿ ಹಾಡುತ್ತದೆ.

ಲಿಂಗ ತಾರತಮ್ಯ ಜಾತಿ ಭೇದ ಅಳಿದು 'ನವ ಭಾರತದ ಉಗಮವಾಗುತ್ತದೆ' ಎಂದು ಎಲ್ಲ ಪ್ರಜ್ಞಾವಂತರ ಭಾವನೆಯಾಗಿತ್ತು. ಸ್ವಾತಂತ್ರ್ಯ ಸಿಕ್ಕ ಮೇಲೆ ಇಂಥ ಬಹಳಷ್ಟು ಕನಸುಗಳು ನನಸಾದವು ಕೂಡ!

ವ್ಯಾಪಾರಕ್ಕೆಂದು ಬಂದು ದೇಶದ ಚುಕ್ಕಾಣಿಯನ್ನೇ ಹಿಡಿದ ಕುತಂತ್ರಿಗಳು ಆಂಗ್ಲರು. ಭಾರತ ದೇಶ ಮಾಟ ಮಂತ್ರಗಳ ದೇಶ, ಮೂಢನಂಬಿಕೆ ಇಲ್ಲಿ ಮೈ ಚಾಚಿ ಮಲಗಿದೆ. ಇಲ್ಲಿನ ಕಂದಾಚಾರಿಗಳಿಗೆ ಆಧುನಿಕ ಶಿಕ್ಷಣದ ಸ್ಪರ್ಶವಿಲ್ಲ, ಅವರಿಗೆ ದೇಶ ಆಳಲು ಬರುವುದಿಲ್ಲ, ಅವರು ಸದಾ ಕಾಲವೂ ಗುಲಾಮರಾಗಿಯೇ ಇರಲು ಯೋಗ್ಯರು ಎಂದೇ ಅವರು ಭಾವಿಸಿದ್ದರು. ಅವರಿಗೆ ಭಾರತೀಯರು ಅನೇಕ ಪ್ರಸಂಗಗಳಲ್ಲಿ ಚಳ್ಳೆಹಣ್ಣು ತಿನ್ನಿಸಿ, ಸರಿಯಾದ ಪಾಠ ಕಲಿಸಿದರು.

ಮೊದಲು ಅಖಂಡ ಕಲಬುರಗಿ ಜಿಲ್ಲೆಯಲ್ಲಿ ಬರುತ್ತಿದ್ದ ಸುರಪುರವು, ಈಗ ಯಾದಗಿರಿ ಜಿಲ್ಲೆಯ ತಾಲ್ಲೂಕು ಕೇಂದ್ರವಾಗಿದೆ. ಸಗರನಾಡಿನ ಕೇಂದ್ರ ಸ್ಥಳ ಸುರಪುರವು ಐತಿಹಾಸಿಕ ಹಿರಿಮೆ–ಗರಿಮೆಗಳನ್ನು ಹೊಂದಿದೆ. ಗಂಡುಮೆಟ್ಟಿನ



ಸುರಪುರದ ಗೋಸಲ ವಂಶದ ಐತಿಹಾಸಿಕ ಪರಂಪರೆಯಲ್ಲಿ ಮೆರೆದು ಹೋದ ಇಲ್ಲಿನ ನಾಡ ನಾಯಕರಾಗಿದ್ದ ಬೇಡದೊರೆಗಳನ್ನು ಈ ನೆಲವು ಎಂದಿಗೂ ಮರೆಯದು! ತಿರುಪತಿಯ ಶ್ರೀ ವೆಂಕಟೇಶ್ವರನ ಅಗ್ರಪೂಜೆಯು ಸುರಪುರದ ಅರಸರಿಂದಲೇ ಯಾವಾಗಲೂ ಪ್ರಾರಂಭವಾಗುವುದು ಅನಾದಿ ಕಾಲದಿಂದಲೂ ನಡೆದುಕೊಂಡು ಬಂದಿದೆ. ಗೋಸಲ ವಂಶದ ಗಡ್ಡಿ ಪಿಡ್ಡನಾಯಕನು ವಿಜಾಪುರದ ಆದಿಲ್ ಶಾಹಿ ಅರಸರೊಂದಿಗೆ ಹೋರಾಡಿ, ಆದಿಲ್ ಶಾಹಿ ಅರಸರಿಂದ 'ಮದಗಜಗಂಡ ಬಹರಿ ಪಿಡ್ಡ ನಾಯಕ' ಎಂಬ ಬಿರುದು ಪಡೆದು ವಿಜೃಂಭಿಸುತ್ತಾನೆ. ಸಗರನಾಡಿನ ಅಧಿಪತ್ಯ ವಹಿಸಿಕೊಂಡು, ಎಲ್ಲ ಧರ್ಮದವರನ್ನು ಸಮಾನವಾಗಿ ಕಂಡು ಭಾವೈಕ್ಯದ ಹರಿಕಾರ'ನಾಗುತ್ತಾನೆ. ಇವನ ಶೂರತನ ಮೆಚ್ಚಿದ ಮೊಗಲ ದೊರೆ ಔರಂಗಜೇಬನ ಹಸ್ತಾಕ್ಷರ ರಾಜಮುದ್ರೆಯನ್ನು ಚಂದನವನದಲ್ಲಿ ಅದ್ದಿ, ಬಲಗೈಯಲ್ಲಿ ಮೂಡಿಸಿದ್ದು ಚರಿತಾರ್ಹ ದಾಖಲಾಗಿದೆ. ರಾಜಾ ವೆಂಕಟಪ್ಪ ನಾಯಕರ ಕಾಲದ 'ಪಾಂಡಿಚೇರಿ ಕಾಳಗ' ಜಗತ್ಪ್ರಸಿದ್ಧವಾದದ್ದು, ಆ ವೀರ ಪುರುಷನ ಬಗ್ಗೆ ಬರೆದ ಈ ನುಡಿಗಳ ಕೇಳಿರಿ....

**ಋಣವಿರೆ ನೋಡುವೆ ನಾನದನು ಮುಂದಕೆ**
**ಹರಸಿರಿ ಹಿರಿಯರೇ ಬಾಗುವೆನು**
**ಭಾರತ ಮಾತೆಗೆ ಬಿಗಿದಿಹ ಶೃಂಖಲೆ**
**ಕಡಿದೊಗೆಯಲು ನಾ ಹೋಗುವೆನು!**
**ಕನ್ನಡ ನಾಡಿನ ವೀರಾಗ್ರಣಿ ತಾ**
**ನಾಡಿಗೆ ನೆತ್ತರ ಸುರಿದನು!**
**ಆಂಗ್ಲನೆಲ್ಲರ ಆಹುತಿ ಕೊಳ್ಳುತ**
**ರಕುತದ ಕಾಲುವೆ ಹರಿಸಿದನು!!**

ಹೀಗೆ ಶೂರ ಅರಸನ ಬಗ್ಗೆ ಜನರ ಪ್ರೀತಿ ಅಪರಿಮಿತವಿದೆ. ಬೆಳಕಿನ ವೇಗ ಪಡೆದ ಈ ದೊರೆಯ ಬಗ್ಗೆ, ಅವರ ಶೂರತನದ ಬಗ್ಗೆ, ಲಾವಣಿಯಲ್ಲಿ, ಕಾವ್ಯಗಳಲ್ಲಿ, ಧುಮ್ ಧುಮೇ ಪದಗಳಲ್ಲಿ, ಲಿಖಿತ ದಾಖಲೆಗಳಲ್ಲಿ ನೂರಾರು ಉಲ್ಲೇಖಗಳಿವೆ. ಜನಪದರ ಬಾಯಲ್ಲಿ ಹಾಡಾಗಿವೆ.

**'ದಿನದಿ ಬೆಳಕದು ನೀಗಿ ಪಡುವಣದಿ ಮಸುಕಾಗೆ**
**ದೀಪ ಹೊನಲಲಿ ಬಿಡಲು ನದಿಗೆ ಬಂದೆ'**

* * *

ಸ್ವಾತಂತ್ರ್ಯ ಸಂಗ್ರಾಮದ ಕುರಿತು ಸಂತ ಅರಬಿಂದೋ ಹೇಳುತ್ತಾರೆ.....

'ಹಿಂದಿನಿಂದಲೂ ದುರ್ಬಲರ ಮೇಲೆ ಸಬಲರ ಸವಾರಿ ನಡೆದೇ ಇದೆ. ಸಬಲರು ಇದನ್ನೇ ತಮ್ಮ ಕಾಯಕವನ್ನಾಗಿಸಿಕೊಂಡಿದ್ದಾರೆ. ಅದಕ್ಕಾಗಿ ದುರ್ಬಲರು, ತಮ್ಮ ದುರ್ಬಲತೆಯನ್ನು ಮೀರಿ, ಮೈ ಕೊಡವಿಕೊಂಡು ನಿಲ್ಲಬೇಕಾದ ಸಮಯ ಬಂದಿದೆ. ಬಲಾಢ್ಯರ ಮನಸ್ಥಿತಿಗೆ ಸರಿಯಾದ ಪೆಟ್ಟು ನೀಡಿ, ಅವರು ಮೈ ಮುಟ್ಟಿ ನೋಡಿಕೊಳ್ಳುವಂತಾಗಬೇಕು. ಆದಿಯಿಂದಲೂ ದುರ್ಬಲರು ಪ್ರಬಲರಿಗೆ ಹೆದರಿ ಅಂಗೈಯಲ್ಲಿ ಜೀವ ಹಿಡಿದುಕೊಂಡು ಬದುಕಿದ್ದನ್ನು ನೋಡಿದ್ದೇವೆ. ಕಾಲ ಯಾವಾಗಲೂ ಒಂದೇ ರೀತಿಯಾಗಿರುವುದಿಲ್ಲ. ಕಾಲ ಚಕ್ರ ಸುತ್ತಿದಂತೆ ಸಬಲರ ಅಂತಃಶಕ್ತಿ ಅಡಗಿ, ನೈತಿಕ ಪ್ರಬಲತೆಯಿಂದ ದುರ್ಬಲರು ಮೇಲಿನ ಸ್ಥಾನಕ್ಕೆ ಬರಲಿದ್ದಾರೆ. ಈಗಾಗಲೇ ಈ ಕಾರ್ಯ ಆರಂಭವಾಗಿದೆ.' ಎಂದು ಹೇಳಿದ ಅವರು...

'ರಾತ್ರಿಯು ನಮ್ಮ ಆದಿಯೂ ಅಲ್ಲ, ಅಂತ್ಯವೂ ಅಲ್ಲ: ರಾತ್ರಿಯೇ ಕೃಷ್ಣ ವರ್ಣದ ಮಾತೆಯಾಗಿದ್ದು, ಅವಳ ಗರ್ಭದಲ್ಲಿ ನಾವು ಸುರಕ್ಷಿತವಾಗಿ ಅಡಗಿ ಕೊಂಡಿರುವುದರಿಂದಲೇ, ಪ್ರಪಂಚದ ವ್ಯಥೆಯ ಎತ್ತರವು ಬಹು ತೀವ್ರವಾಗಿ ನಮಗೆ ಆಗುವುದಿಲ್ಲ' ಎಂದೂ ಹೇಳುತ್ತಾರೆ. ಇದು ಹಗಲು–ರಾತ್ರಿಗಳ ಪರಿಕಲ್ಪನೆ. ಇದೇ ಈ ಜಗದ ಆಗು ಹೋಗುಗಳ ನಿಯಂತ್ರಣದ ನಿಯಮ ಕೂಡಾ!

**'ಭಾರತೀಯರು ನಾವು ಭಾರತಾಂಬೆಯೊಕ್ಕಲು, ಶೂರತನದ ಸುಪ್ರತೀಕ**
**ಕನ್ನಡಾಂಬೆ ಮಕ್ಕಳು'**
**ಮಾನವತೆಯ ವಿಜೃಂಭಣೆಯೇ ಮಾನವ ಕುಲದ ಜಯವು!**

'ಸಗರ ನಾಡಿನ' ಪೂರ್ವಕ್ಕೆ ಎಡದೊರೆ ಎರಡು ಸಾಸಿರ, ಪಶ್ಚಿಮಕ್ಕೆ ತರ್ದವಾಡಿ ಸಾಸಿರ, ಉತ್ತರಕ್ಕೆ ಅಲಂದೆ ಸಾಸಿರ ಮತ್ತು ದಕ್ಷಿಣಕ್ಕೆ ಕರಡಲ್ಲು ಮುನ್ನೂರನ್ನು ಹೊಂದಿತ್ತು. ಇತಿಹಾಸದ ದೃಷ್ಟಿಯಿಂಥ ಈ ಭಾಗದಲ್ಲಿ ಸಾತವಾಹನರು, ಬಾದಾಮಿಯ ಚಾಲುಕ್ಯರು, ರಾಷ್ಟ್ರಕೂಟರು, ಕಲ್ಯಾಣದ



ಚಾಲುಕ್ಯರು, ಹೊಯ್ಸಳರು, ಕಳಚೂರ್ಯರು, ಶಿಲಹಾರರು, ಮಾಸವಾಡಿಯ ಸೇವುಣರು, ಮಗದ ವಂಶದವರು, ಬಹಮನಿ ಅರಸರು, ಸುರಪುರದ ಗೋಸಲ ವಂಶದ ನಾಯಕರು, ಕಂಪನಿ ಸರ್ಕಾರ, ನಿಜಾಮ ಸರಕಾರಗಳು ಸಗರ ನಾಡನ್ನು ಆಳಿವೆ.

ಶಿರವಾಳ, ಕೆಂಭಾವಿ, ವಡಗೇರಿ, ಮುದನೂರು, ದುಮ್ಮಾದ್ರಿಗಳು ಹಿಂದಿನ ಕಾಲದಲ್ಲಿ ಅಗ್ರಹಾರಗಳಾಗಿದ್ದವು, ಹಾಗೂ ಘಟಿಕಾಸ್ಥಾನಗಳಾಗಿದ್ದವು. ಸಂಶೋಧಕ ಪದ್ಮಶ್ರೀ ಡಾ.ಕೆ. ಪೆದ್ದಯ್ಯನವರು 'ದೋಅಬ್ ಭೂ ಭಾಗದ ಪ್ರಾಗೈತಿಹಾಸಿಕ ನಿವೇಶನಗಳು' ಎಂಬ ತಮ್ಮ ಸಂಶೋಧನಾ ಗ್ರಂಥದಲ್ಲಿ 'ಬೂದಿಹಾಳ' – ಅತ್ಯಂತ ಪ್ರಾಚೀನ ಕಾಲದಲ್ಲಿ ಜನ ಜೀವನ ಹೊಂದಿತ್ತು. ಆಗ ಪಶು ಪಾಲನೆ ಕೂಡಾ ಇತ್ತು ಎಂದು ಅಭಿಪ್ರಾಯಪಟ್ಟಿದ್ದಾರೆ. ಹುಣಸಗಿ, ರಾಜನ್ ಕೋಳೂರು, ಹಗರಟಗಿ, ಮಾರಲಭಾವಿಗಳಲ್ಲಿ ಮೂರು ಲಕ್ಷ ವರ್ಷಗಳ ಹಿಂದೆಯೇ ಜನಜೀವನ ಇತ್ತು ಎನ್ನುತ್ತಾರೆ. ಅದಕ್ಕೆ ನಾನು ನನ್ನ ಒಂದು ಲೇಖನದಲ್ಲಿ 'ಬೂದಿಹಾಳ –ದಕ್ಷಿಣ ಭಾರತದ ಮೆಹಂಜೋದಾರೊ ಹರಪ್ಪ' ಎಂದು ಉಲ್ಲೇಖಿಸಿದ್ದೇನೆ.

**'ಮಧುಬನದ ಪಿಕದಂತೆ ಎದೆದುಂಬಿ ಝೇಂಕರಿಸೆ**
**ಸಗರ ನಾಡದುವೆನ್ನ ಸೊಗದ ತಾಣ!**
**ಮಣ್ಣ ಕಣಕಣವೆಲ್ಲ ದಿವ್ಯಭೂತಿಯ ಕಾಣಾ**
**ಸಗರನಾಡದುವೆನಗೆ ಪಂಚಪ್ರಾಣ!'**
**ಎಂದು ಕವಿರತ್ನ ಎ. ಕೃಷ್ಣ ರೆಂದಂತೆ,**

ಪುರಾಣ ಪ್ರಸಿದ್ಧ 'ಸಗರ' ಚಕ್ರವರ್ತಿಯ ಹೆಸರನ್ನು ಹೊಂದಿದ ಸಗರನಾಡು ಕೃಷ್ಣೆ– ಭೀಮೆಯರ ಹರಹಿನೊಂದಿಗೆ ಅತ್ಯಂತ ಪ್ರಾಚೀನವೂ, ತನ್ನ ಘನ ಐತಿಹ್ಯದ ಮೂಲಕ ವಿಶ್ವಖ್ಯಾತಿಯನ್ನು ಪಡೆದಿದೆ. ಯಾದಗಿರಿ ಈಗ ಜಿಲ್ಲೆಯಾಗಿ ದಶಕವಾಯ್ತು. ಸುರಪುರ ಸಂಸ್ಥಾನವನ್ನು ಹೊಂದಿದ್ದ ವೀರ–ಶೂರರ ನಾಡು, ಇಂಗ್ಲಿಷರನ್ನು ಸದೆಬಡೆದ ಬೀಡು, ಸಾಹಿತ್ಯ–ಕಲೆ–ಸಂಗೀತಗಳ ಆಗರ. ಇಲ್ಲಿ ಶ್ರೇಷ್ಠ ಕವಿಗಳು, ಪಂಡಿತರು, ವಿದ್ವಾಂಸರು ಇದ್ದರು. ಮೊಗಲರ ಅರಸ ಔರಂಗಜೇಬನ ಹಸ್ತದ ಗುರುತು ಈಗಲೂ ಸುರಪುರದ ದರ್ಬಾರದಲ್ಲಿದೆ.

ದಾಸರು, ಶರಣರು, ಸಂತರು, ಸೂಫಿಗಳು ನಡೆದಾಡಿದ ಈ ಪವಿತ್ರ ಪುಣ್ಯ ಭೂಮಿಯಲ್ಲಿ, 'ಕವಿಚೂತವನ ಚೈತ್ರ' ಬಿರುದಾಂಕಿತ ಕ್ರಿ.ಶ. ೧೧೦೦ ರಲ್ಲಿದ್ದ ದೇವಪುರದ ಲಕ್ಷ್ಮೀಶ ಮಹಾಕವಿ ಇದ್ದದ್ದು, 'ಜೈಮಿನಿ ಭಾರತ' ಬರೆದದ್ದು ನಮ್ಮ ಪುಣ್ಯ.

ವಚನ ಸಾಹಿತ್ಯದ ಗಂಗೋತ್ರಿ ಮುದನೂರಿನ ದೇವರ ದಾಸಿಮಾರ್ಯರು, ಭಗವಾನ್ ಸೂರ್ಯಪತ್ನಿ ಛಾಯಾ ಭಗವತಿಯ ದೇವಸ್ಥಾನ ನಾರಾಯಣಪುರದ ಹತ್ತಿರ ಇದೆ. ಕಕ್ಕೇರಿಯ ಡೋಹರ ಕಕ್ಕಯ್ಯ, ಇಲ್ಲಿರುವ ಡೋಹರ ಕಕ್ಕಯ್ಯನ ಗುಡಿ ಚಾಳುಕ್ಯರ ಕಾಲದಲ್ಲಿ ಆಗಿದೆ. ಹೆಮ್ಮಡಗಿ, ಹಗರಟಗಿ, ಅಗ್ನಿ, ಶಿರವಾಳ ಅತ್ಯಂತ ಪ್ರಾಚೀನ ಸ್ಥಳಗಳಾಗಿವೆ. ಗೋಗಿಯಲ್ಲಿ ಇಬ್ರಾಹಿಂ ಆದಿಲ್ ಶಹನ ಚರಿತ್ರೆಗೆ ಸಂಬಂಧಪಟ್ಟ ದಾಖಲೆಗಳಿವೆ. ಸಗರಕ್ಕೆ 'ನಸರತಾಬಾದ್' ಎಂದೂ ಕರೆಯುತ್ತಿದ್ದರು. ಸಗರದ ಬ್ರಹ್ಮಯ್ಯ, ಕೆಂಭಾವಿಯ ಭೋಗಣ್ಣ, ಭಾವೈಕ್ಯದ ಹರಿಕಾರ ತಿಂಥಣಿಯ ಮೌನೇಶ್ವರರು, ಖೈನೂರಿನ ಕೃಷ್ಣಪ್ಪಯ್ಯ, ಶಹಪುರದ ಚರಬಸವೇಶ್ವರರು, ಅಗ್ಗವಣಿಯ ಹೊನ್ನಯ್ಯ, ಹಾವಿನಾಳ ಕಲ್ಲಪ್ಪ, ಶಹಪುರದ ಪ್ರಶಾಂತ ಬೆಟ್ಟದ ಮೇಲೆ ಮಲಗಿರುವ ಬುದ್ಧ, ಯಾಳಗಿಯ ರಾಮಪ್ಪಯ್ಯ, ಕೂಡಲಗಿಯ ಬಾಬಾ ಮಹಾರಾಜರು, ಗೋಗಿಯ ಚಂದಾಸಾಹೇಬ, ಸಗರದ ಸೋಫಿ ಸರಮಸ್ತ ಸಾಹೇಬ, ಸಗರದ ನಾಚಯ್ಯ, ಸಿರವಾಳದ ಸಿದ್ಧಲಿಂಗೇಶ್ವರ, ಸುರಪುರದ ಆರಾಧ್ಯ ದೈವ ಶ್ರೀ ವೇಣುಗೋಪಾಲ ಸ್ವಾಮಿ,.... ಈ ಪುಣ್ಯ ಭೂಮಿಯ ಆರಾಧ್ಯ ದೈವರಾಗಿದ್ದಾರೆ. ಶರಣರ ಭಂಡಾರವೇ ಈ ಸಗರನಾಡು. ಬಸವಣ್ಣನವರು ಹರಸಿದ ಅಂದಿನ ಅಂತರ್ಜಾತಿ ವಿವಾಹದ ಧೀರ ಶರಣಜೀವಿ ಹರಳಯ್ಯ ಸುರಪುರದವರು, ಮುದನೂರಿನ ಹನ್ನೆರಂಗ ವಿಠ್ಠಲರು ಶ್ರೇಷ್ಠ ಆಧ್ಯಾತ್ಮ ಪುರುಷರಾಗಿದ್ದರು.

ಭಾವೈಕ್ಯದ ಹರಿಕಾರ ತಿಂಥಣಿಯ ಮೌನೇಶ್ವರರು ಹಿಂದು–ಮುಸ್ಲೀಂ ಭಾವೈಕ್ಯದ ಸಂಕೇತವಾಗಿದ್ದಾರೆ. ಅವರು ಹೇಳುತ್ತಾರೆ.....

**'ಮೆಟ್ಟು ಮಾರುವವರಾದರೂ ಆಗಲಿ**
**ಕಟ್ಟಿಗೆ ತರುವವರಾದರೂ ಆಗಲಿ**
**ಕಷ್ಟವ ಮಾಡಿ ಉಂಬುವರ ಮನೆಯಲ್ಲಿ**
**ಮುಷ್ಟಿ ತುಂಬ ಅನ್ನ ಉಣಬೇಕೋ ಬಸವಣ್ಣ!**



**'ಹಿಂದೂ–ತುರುಕರಿಗೆ ಚಂದ್ರನೊಬ್ಬನೆ**
**ನಿಂದಿಸಿದವನೆ ಅಧಮನು. ಕಾಣದ**
**ಅಂಧರಿಗೇಕೆ ದರ್ಪಣವು. ಸಕಲವೂ**
**ಒಂದೇ ಎಂದು ಕಂಡ ಗುರು ಬೇರೆ ಬಸವಣ್ಣ!**

ಅದಕ್ಕಾಗಿಯೇ ಎಲ್ಲರೂ ಸೇರಿ ಹೀಗೆ ಹೇಳುತ್ತಾರೆ,

**'ಓಂ ಏಕಲಾಕ ಐಂಸಿ ಹಜಾರ ಪಾಚೋಪಿರ್ ಪೈಗಂಬರ ಮೌನಧೀನ್!**
**ಜೀತಾ ಪೈಗಂಬರ ಮೌನಧೀನ್!**
**ಕಾಶೀಪತಿ ಗಂಗಾಧರ ಹರಹರ ಮಹಾದೇವ!**

ಹೀಗೆ ಭಾವೈಕ್ಯದ ಗಂಧದಲ್ಲಿ ತೇದ ಭಾರತದ ಸ್ವಾತಂತ್ರ್ಯದ ಹೋರಾಟ, ಇದಕ್ಕಾಗಿ ನಮ್ಮ ಹಿರಿಯರು ಮಾಡಿದ ತ್ಯಾಗ, ಬಲಿದಾನಗಳು ಮಾತ್ರ ಭಾರತೀಯರು ಎಂದೆಂದಿಗೂ ಮರೆಯದಂತಿವೆ. ಇಂದು ನಾವು 'ಸ್ವಾತಂತ್ರ್ಯದ ಅಮೃತ ಮಹೋತ್ಸವದ ನಡು ಮಧ್ಯಾಹ್ನ'ದಲ್ಲಿದ್ದೇವೆ. ಇದು ನಮಗೆ ಸುಮ್ಮನೇ ದೊರೆತ ಸ್ವಾತಂತ್ರ್ಯವಲ್ಲ. ಸುಮಾರು ೨೦೦ ವರ್ಷಗಳ ಬ್ರಿಟಿಷರ ಆಳ್ವಿಕೆ, ಅವರ ಅಟ್ಟಹಾಸ, ದಬ್ಬಾಳಿಕೆ, ದೌರ್ಜನ್ಯ, ಇಲ್ಲಿಯ ಸಂಪತ್ತನ್ನು ಕೊಳ್ಳೆ ಹೊಡೆದದ್ದು, ಮುಗ್ಧರು, ಮಹಿಳೆಯರ ಮೇಲೆ ದೌರ್ಜನ್ಯ.... ಒಂದೇ, ಎರಡೇ... ಅನುಭವಿಸಿದ್ದು ಸಾವಿರಾರು! ಆದರೆ ಎಲ್ಲರ ಗುರಿ ಒಂದೇ ಆಗಿತ್ತು. ಅದು ದೇಶವನ್ನು ಗುಲಾಮಗಿರಿಯಿಂದ ಮುಕ್ತಗೊಳಿಸುವುದು. ಸ್ವಾತಂತ್ರ್ಯ ನನ್ನ ಜನ್ಮಸಿದ್ಧ ಹಕ್ಕು' ಎಂದು ಸಾರಿದ್ದ ಬಾಲ ಗಂಗಾಧರ ತಿಲಕರಿಂದ, ಮಹಾತ್ಮಾ ಗಾಂಧಿ, ಸುಭಾಶ್ಚಂದ್ರ ಭೋಸ್, ನೆಹರೂ, ವಲ್ಲಭಭಾಯಿ ಪಟೇಲ, ದಾದಾಬಾಯಿ ನವರೋಜಿ, ತಾತ್ಯಾಟೋಪಿ, ಕೆ. ಎಂ. ಮುನ್ಸಿ, ಲಾಲಾ ಲಜಪತರಾಯ, ರಾಮಪ್ರಸಾದ ಬಿಸ್ಮಿಲ್ಲ, ಬಿಪಿನ್ ಚಂದ್ರಪಾಲ್, ಚಿತ್ತರಂಜನ್ ದಾಸ್, ಬೇಗಂ ಹಜರತ್ ಮಹಲ್, ಭಗತ್‌ಸಿಂಗ್, ಲಾಲ್‌ಬಹದ್ದೂರಶಾಸ್ತ್ರಿ, ಚಂದ್ರಶೇಖರ ಆಜಾದ್, ಸಿ.ರಾಜಗೋಪಾಲಾಚಾರಿ, ಮಂಗಲ್‌ಪಾಂಡೆ, ಸಾವರ್ಕರ್, ಸುಖದೇವ, ಕುನ್ವರ ಸಿಂಗ್, ಮೊದಲಾದ ಶ್ರೇಷ್ಠರು ಭಾರತದ ಸ್ವಾತಂತ್ರ್ಯದ ರೂವಾರಿಗಳು. ಗಾಂಧಿ ಮಾರ್ಗದ ಹಲವರಾದರೆ, ಸುಭಾಸ್ ಮಾರ್ಗದ ಹಲವರು. ಆದರೇ ಎಲ್ಲ ಮಾರ್ಗಗಳು ಬಂದು ಸೇರಿದ್ದು ಮಾತ್ರ ಸ್ವಾತಂತ್ರ್ಯ ಎಂಬ ಕೇಂದ್ರ ಬಿಂದುವಿನಲ್ಲಿ.

೧೮೫೭ ರ ಸಿಪಾಯಿದಂಗೆ ಸೇರಿದಂತೆ ೧೯೪೭ ರ ವರೆಗೂ ಈ ದಾರಿ ಸಾಗಿಬಂತು. ಅಲ್ಲದೇ ಇತ್ತ ಕಲ್ಯಾಣ ಕರ್ನಾಟಕದ ಹಲವೂ ಜಿಲ್ಲೆಗಳಲ್ಲಿ ೧೯೪೭ ಅಗಸ್ಟ್ ೧೫ ರಂದು ಸ್ವಾತಂತ್ರ್ಯ ಲಭಿಸಲಿಲ್ಲ. ಭಾರತದ ಉಳಿದೆಡೆ ಸ್ವಾತಂತ್ರ್ಯದ ಉನ್ಮಾದ ಇದ್ದರೇ ಕಲಬುರ್ಗಿ, ಬೀದರ, ಯಾದಗಿರಿ, ರಾಯಚೂರು,....ಗಳು ಹೈದ್ರಾಬಾದ್ ನಿಜಾಂನ  ಕಪಿಮುಷ್ಠಿಯಿಂದ ಬಿಡುಗಡೆಯಾಗಲಿಲ್ಲ. ಭಾರತದ ಒಕ್ಕೂಟ ಸೇರಲು ಹೈದ್ರಾಬಾದ್ ರಾಜ ಮೀರ್ ಉಸ್ಮಾನ್ ಅಲಿ ಬಹದ್ದೂರ ನಿರಾಕರಿಸಿದ್ದ. ಹೈದ್ರಾಬಾದ್ ಪ್ರಾಂತವನ್ನು ನಿಜಾಂ 'ದಕ್ಷಿಣ ಪಾಕಿಸ್ತಾನ' ಮಾಡಲು ಹೊರಟಿದ್ದ. ದೇಶ ಸ್ವತಂತ್ರವಾಯಿತು ಎಂದು 'ಸ್ವತಂತ್ರ ಹಕ್ಕಿ'ಗಳಂತೆ ಸ್ವಚ್ಛಂದವಾಗಿ ಹಾರಾಡಲು ಬಯಸಿದ್ದ ಪಕ್ಷಿಗಳು ದಿಗ್ಭ್ರಮೆಗೊಂಡವು. ಭಾರತದ ಸ್ವಾತಂತ್ರ್ಯ ಹೋರಾಟಗಾರರು ಮತ್ತೇ ಹೋರಾಟಕ್ಕಿಳಿದರು. ಇಲ್ಲಿ ನಡೆದ ರಜಾಕಾರ ಹಾವಳಿಯನ್ನು ಎದುರಿಸಿದರು. ಇಲ್ಲಿಯೂ ಹೋರಾಟಗಾರರನ್ನು ಸೆರೆಮನೆಗೆ ತಳ್ಳಲಾಯಿತು. ಅನೇಕರು ಬಲಿದಾನಗೈದರು. ಉಕ್ಕಿನ ಮನುಷ್ಯ ಸರ್ದಾರ್ ವಲ್ಲಭಭಾಯಿ ಪಟೇಲರು ಆಗ ಸ್ವತಂತ್ರ ಭಾರತದ ಗೃಹಮಂತ್ರಿಯಾಗಿದ್ದರು. ಕೊನೆಗೆ ಅವರೇ ಅಖಾಡಕ್ಕಿಳಿಯಬೇಕಾಯಿತು.

ಹೈದ್ರಾಬಾದ್ ಕರ್ನಾಟಕದ ಹೋರಾಟವು ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಒಂದು ಪ್ರಮುಖ ಅಧ್ಯಾಯವೇ ಆಗಿದೆ. ಸಮಗ್ರ ಭಾರತದ ಸ್ವಾತಂತ್ರ್ಯ ಒಂದೆಡೆಯಾದರೆ, 'ನಿಜಾಂನಂತಹ' ಸ್ವಾರ್ಥಿಗಳ ವಿರುದ್ಧದ ಸ್ವಾತಂತ್ರ್ಯದ ಹೋರಾಟವು ಇನ್ನೊಂದು ಆಯಾಮವೆನಿಸುತ್ತದೆ. ಇಂತಹ ಸ್ವಾರ್ಥಿಗಳಿಂದಲೇ ಭಾರತ ದೇಶದ ವಿಭಜನೆಯಾಯಿತು. ಭಾರತ–ಪಾಕಿಸ್ತಾನ ಎಂಬ ಎರಡು ದೇಶಗಳು ಸೃಷ್ಟಿಯಾದವು. ಈ ಹೈದ್ರಾಬಾದ್ ವಿಮೋಚನಾ ಚಳುವಳಿಯನ್ನು ಮುಂದೆ ನೋಡೋಣ.

ಈಗ ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ, ದಕ್ಷಿಣ ಭಾರತದಲ್ಲಿಯೇ ಮೊದಲ ಬಂಡಾಯದ ಕಿಡಿ ಹಾರಿಸಿದ ವೀರರ ಪಡೆ ಸುರಪುರ ಅರಸರ ಬಗ್ಗೆ ನೋಡೋಣ. ಶೂರ, ವೀರ, ಧೀರ ಎಂಬ ಶಬ್ದಗಳಿಗೆ ನಿಮಗೆ ಪರ್ಯಾಯ ಪದ ಸಿಗಬೇಕೆಂದರೇ ಶಬ್ದಕೋಶ'ದಲ್ಲಿ ಹುಡುಕಬೇಕಿಲ್ಲ ಇದಕ್ಕೆ ಪರ್ಯಾಯವೇ ಸುರಪುರ ಸಂಸ್ಥಾನ!



**ಈ ಲಾವಣಿ ಕೇಳಿ–**
**'ಬೇಡ ಪಡೆ ಕೂಡುತಲಿ ಹೊರಟೀತು'**
**ಹಾಡುತ ರಣದ ಗೀತೆಗಳ! ಸ್ವಾತಂತ್ರ್ಯ**
**ನಾಡ ಬಾವುಟವ ಹಾರಿಸಲು!'**
**ವೀರಕಪಿ ಧ್ವಜವೇ ಹನುಮಧ್ವಜ**
**ರಾಜಾ ವೆಂಕಟಪ್ಪ ನಾಯಕನ ಸಂಕೇತ!**
**ಸ್ವಾತಂತ್ರ್ಯ ಪಡೆಯೋ ಸುಕುಮಾರ**
**ಬಿಳಿಯರ ವಿರುದ್ಧ ನೀ ಗೆದ್ದು!'**

ಯಾದಗಿರಿ ಜಿಲ್ಲೆಯ ನೈರುತ್ಯ ಭಾಗಕ್ಕೆ ಸುಮಾರು ೫೫ ಕಿ.ಮೀ. ದೂರದಲ್ಲಿರುವ ಸುರಪುರ, ಕೃಷ್ಣೆ ಹಾಗೂ ಭೀಮೆಯರ ಮಧ್ಯದಲ್ಲಿದೆ. ಈ ಗೋಸಲ ವಂಶದ' ಅರಸರು ಕ್ರಿ. ಶ. ೧೬೩೬ರಿಂದ ೧೮೫೮ರ ವರೆಗೆ ೧೨ ಜನ ರಾಜರು ಸುರಪುರ ಸಂಸ್ಥಾನವನ್ನು ಆಳಿದ್ದಾರೆ. ಇವರು ಗೋವುಗಳ ರಕ್ಷಕರಾಗಿದ್ದರು. ಈ ಅರಸರ ಮುಖ್ಯ ಉದ್ಯೋಗ ಬೇಟೆಯಾಗಿತ್ತು. ಇವರು ಮೂಲತಃ ರತ್ನಗಿರಿಯವರು.

ಸಗರ ನಾಡಿನ ಮುಖ್ಯ ಕೋಟೆ ಸಗರ ದುರ್ಗವನ್ನು ಬಹುಮನಿಗಳಿಂದ ವಶಪಡಿಸಿಕೊಂಡ ಅಳಿಯ ರಾಮರಾಯ 'ಸಗರ ಸಂಕ್ರಮಣ ಧುರೀಣ'ಎಂದು ಬಿರುದನ್ನು ಹೊಂದಿದ್ದ. ಈ ವಿಜಯನಗರದ ಅರಸರನ್ನು ಬೆಂಬಲಿಸಿದ್ದ ಸಗರ ನಾಡಿನ ಬೇಡರ ಪಾಳೇಯಗಾರನಿಗೆ ಗೆದ್ದ ಕೋಟೆಯನ್ನು ಒಪ್ಪಿಸಿದ್ದನ್ನು ಮಹತ್ವದ ಇತಿಹಾಸಕಾರರು  ಉಲ್ಲೇಖಿಸಿದ್ದಾರೆ.

ಇವರ ಮೂಲಪುರುಷ ಜಕ್ಕಪ್ಪ ದೇಸಾಯಿ ಕಕ್ಕೇರಿ ಮುಖ್ಯಭಾಗದಲ್ಲಿ ಆಳ್ವಿಕೆ ಶುರು ಮಾಡುತ್ತಾನೆ. ಇವರ ಮಕ್ಕಳು ಗಡ್ಡಿಲಿಂಗ ನಾಯಕ ಹಾಗೂ ಗಡ್ಡಿಪಿಡ್ಡ ನಾಯಕರು. ಗಡ್ಡಿಲಿಂಗ ನಾಯಕನು ಗುಡಗುಂಟಿ ಸಂಸ್ಥಾನದ ಒಡೆಯನಾದರೇ, ಗಡ್ಡಿ ಪಿಡ್ಡ ನಾಯಕನು ೧೬೩೯ರಲ್ಲಿ ಬಿಜಾಪುರದ ಆದಿಲ್ ಶಹನಿಂದ ತಾಳಿಕೋಟಿ ಹಾಗೂ ಕೊಡೇಕಲ್ಲ ಸರ್ ದೇಶಗತಿ ಸಂಪಾದಿಸುವುದರೊಂದಿಗೆ ಸುರಪುರ ಸಂಸ್ಥಾನದ ಉದಯಕ್ಕೆ ಕಾರಣನಾದನು ಎಂದು ಇತಿಹಾಸ ತಜ್ಞ ಫ್ರಾಮುರ್ಜ ಜಂಗ್ ಬಹದ್ದೂರರು ಅಭಿಪ್ರಾಯ ಪಡುತ್ತಾರೆ. ಮೊಗಲರನ್ನು, ಔರಂಗಜೇಬನನ್ನು ಹಿಮ್ಮೆಟ್ಟಿಸಿದ ದೊರೆಗಳು,

ವಾಗಣಗೇರಿಯಲ್ಲಿ ಬೃಹತ್ ಕೋಟೆ ನಿರ್ಮಿಸಿ ತನ್ನ ಸಾಮ್ರಾಜ್ಯ ಆರಂಭಿಸಿದರು. ದೊರೆ ಪಿಡ್ಡನಾಯಕನು ಮದ್ದೇರಿದ ಆನೆಯ ಸೊಕ್ಕನ್ನು ಇಳಿಸಿ ಆದಿಲ್ ಶಾಹಿಗಳಿಂದ 'ಮದಗಜಮಲ್ಲ' ಎಂಬ ಬಿರುದನ್ನೂ ಕೂಡ ಸಂಪಾದಿಸಿದ್ದ. ೧೬೪೮ರಲ್ಲಿ ಬಿಜಾಪುರದ ಆದಿಲ್ ಶಾ ಮಾಮಲೇನ ಸರತಾಬಾದ 'ಗಜ ದಂಡ ಹರಿ ಪಿಡ್ಡ ನಾಯಕ' ಎಂಬ ಬಿರುದನ್ನು ನೀಡಿ ಈತನಿಗೆ ಆನೆ, ಕೊತ್ತಲ ಕುದುರೆ, ಪಾಲ್ಕಿ, ಆಪ್ತ ಬಗಿರಿ, ಸಿರಪಟ್ಟ, ಡಂಕಾ, ಒಂಟಿ, ರೂಲಿ, ಹಜಾರಿ, ಮನಸಖು, ನವಲಿ, ಚಿತಾಪುರ, ಪಾಲ್ಕಿ ಮಾನ್ಯ, ಹಾಗೂ ಬಿಜಾಪುರ ಪ್ರಾಂತ್ಯದ ಸರದೇಶಗತಿಗಳನ್ನೆಲ್ಲ ಪಿಡ್ಡ ನಾಯಕನ ಹೆಸರಿನಲ್ಲಿ ಆದಿಲ್ ಶಾ ಘೋಷಿಸುತ್ತಾನೆ. (ಕೈಫಿಯತ್ತು ೧, ೨, ೩ / ಕಪಟರಾಳ ಕೃಷ್ಣರಾವರ – 'ಸುರಪುರ ಸಂಸ್ಥಾನದ ಇತಿಹಾಸ' ೧೯೭೭, ಪುಟ ೨೧ ರಂತೆ)

ನಂತರದ ಘಟನೆಗಳಲ್ಲಿ ಔರಂಗಜೇಬನ ದಾಳಿಯನ್ನು ಖಂಡಿತವಾಗಿ ಹಾಗೂ ದಿಟ್ಟವಾಗಿ ಎದುರಿಸಿದ್ದು ಅರಸು ಪಿಡ್ಡನಾಯಕ ಮಾತ್ರ ಇದಕ್ಕಾಗಿ ಔರಂಗಜೇಬ ಬರೆದ ಪತ್ರ 'ನೀನು ಮುಸಲ್ಮಾನ್‌ನಾಗಿದ್ದರೇ ನಮ್ಮ ಧರ್ಮಬಂಧುವಾಗಿರುತ್ತಿದ್ದಿ.....' ಇದು ಇಂದಿಗೂ ಸುರಪುರ ಅರಸರ ಅರಮನೆಯಲ್ಲಿದೆ.

ಔರಂಗಜೇಬನ ಸಾವು ಕೂಡ ವಾಗಣಗೇರಿಯ ಹತ್ತಿರವೇ ಅದೂ ಸುರಪುರದ ಅರಸರಿಂದಲೇ ಆಯಿತು. ಆದರೆ ಮೊಗಲರು ಇದನ್ನು ಬಹಿರಂಗ ಪಡಿಸಲಿಲ್ಲ. ದೆಹಲಿಗೆ ಮೊಗಲರಸನ ದೇಹ ತಲುಪಿದ ಮೇಲೆಯೇ ಘೋಷಿಸಿದರು. ಮೊಗಲರ ಭಾರಿ ಸೈನ್ಯವು ವೀರ ಸುರಪುರ ಅರಸನ ಮುಂದೆ ಮಂಡಿಯೂರಿತು!

ಕ್ರಿ.ಶ.೧೬೩೬ರಿಂದ ೧೮೫೮ರವರೆಗೆ ಒಟ್ಟು ೨೨೨ ವರ್ಷಗಳ ಕಾಲ ಸುರಪುರ ಸಂಸ್ಥಾನವನ್ನು, ಗಡ್ಡಿ ಪಿಡ್ಡ ನಾಯಕ, ಹಸರಂಗಿ ಪಾಮನಾಯಕ, ಪೀತಾಂಬರ ಬಹರಿ ಪಿಡ್ಡ ನಾಯಕ, ಇಮ್ಮಡಿ ಪಾಮನಾಯಕ, ಮುಮ್ಮಡಿ ಪಿಡ್ಡನಾಯಕ, ಮೊಂಡುಗೈ ರಾಜಾ ವೆಂಕಟಪ್ಪ ನಾಯಕ, ಮುಮ್ಮಡಿ ರಾಜಾ ಪಾಮನಾಯಕ, ಇಮ್ಮಡಿ ರಾಜಾ ವೆಂಕಟಪ್ಪನಾಯಕ, ರಾಜಾ ನಾಲ್ವಡಿ ಪಿಡ್ಡ ನಾಯಕ, ಮುಮ್ಮಡಿ ರಾಜಾ ವೆಂಕಟಪ್ಪ ನಾಯಕ, ರಾಜಾ ಕೃಷ್ಣಪ್ಪ ನಾಯಕ, ರಾಜಾ ನಾಲ್ವಡಿ ವೆಂಕಟಪ್ಪ ನಾಯಕ ಆಳಿದರು.



ಸುರಪುರದ ಎಲ್ಲ ಅರಸರಲ್ಲಿ ರಾಜಾ ನಾಲ್ವಡಿ ವೆಂಕಟಪ್ಪ ನಾಯಕ ತುಂಬ ಪ್ರಸಿದ್ಧ ಅರಸು. ಕ್ರಿ.ಶ.೧೮೪೩ ರಿಂದ ೧೮೫೮ ರವರೆಗೆ ಆಳ್ವಿಕೆ ಮಾಡಿದ ಈ ರಾಜನು ಶೂರತ್ವಕ್ಕೆ ಇನ್ನೊಂದು ಹೆಸರು.

೧೪ನೇ ಶತಮಾನದಲ್ಲಿ ನಂಜುಂಡ ಕವಿ ರಚಿಸಿದ 'ಕುಮಾರ ರಾಮ ಚರಿತೆ'ಯಲ್ಲಿ ಬೇಡರ ಪಡೆಯ ಶೌರ್ಯ ಸಾಹಸದ ವರ್ಣನೆಯಿದೆ. ಹಲಗಲಿಯ ಬೇಡರಂತೆ ಸುರಪುರದ ಬೇಡರು ಕೂಡ ಸ್ವಾತಂತ್ರ್ಯ, ಸ್ವಾಭಿಮಾನ, ಸತ್ಯನಿಷ್ಠೆ, ಸ್ವಾಮಿನಿಷ್ಠೆಗೆ ಹೆಸರಾಗಿದ್ದರು.

ರಾಜಾ ಕೃಷ್ಣಪ್ಪ ನಾಯಕ ಹಾಗೂ ರಾಣಿ ಈಶ್ವರಮ್ಮ ಅವರ ಪುತ್ರನೇ ರಾಜಾ ನಾಲ್ವಡಿ ವೆಂಕಟಪ್ಪ ನಾಯಕ. ರಾಜಾ ಕೃಷ್ಣಪ್ಪ ನಾಯಕನು ತೀರಿ ಹೋದಾಗ ವೆಂಕಟಪ್ಪ ನಾಯಕ ಇನ್ನೂ ಅಪ್ರಾಪ್ತನಾಗಿದ್ದನು. ಆ ಸಂದರ್ಭದಲ್ಲಿ ರಾಣಿ ಈಶ್ವರಮ್ಮ ಮಗನನ್ನು ಪಟ್ಟಕ್ಕೆ ಕೂಡಿಸಿ ಅವನ ಹೆಸರಿನಿಂದ ರಾಜ್ಯಭಾರ ಮಾಡುತ್ತಿದ್ದಳು. ಬ್ರಿಟಿಷರು ಸಮಯ ಸಾಧಕರು. ಇದೇ ಸಂದರ್ಭವನ್ನು ಬಳಸಿಕೊಂಡು, ವೆಂಕಟಪ್ಪ ನಾಯಕನು ಅಪ್ರಾಪ್ತನಿದ್ದಾನೆ, ಅವನಿಗೆ ಆಡಳಿತದಲ್ಲಿ ಅನುಕೂಲ ಮಾಡಿಕೊಡಬೇಕೆಂದು ಪ್ರಸಿದ್ಧ ಲೇಖಕ 'ಮೆಡೋಜ್ ಟೇಲರ್'ನನ್ನು ಸುರಪುರದ ರಾಜಕೀಯ ಕಾರ್ಯಭಾರಿ ಎಂದು ಇಂಗ್ಲಿಷರು ನೇಮಿಸಿದರು. ಅವನು ಉತ್ತಮ ಆಡಳಿತಗಾರನಾಗಿದ್ದುದ್ದಲ್ಲದೇ, ರಾಜಕುಮಾರನಿಗೆ ಉತ್ತಮ ಶಿಕ್ಷಣ ಕೊಡಿಸಿದನು. ಆಂಗ್ಲ ಶಿಕ್ಷಣಕ್ಕೆ ವ್ಯವಸ್ಥೆ ಮಾಡಿದ್ದನು. ಯುವರಾಜನು ಟೇಲರನನ್ನು 'ಅಪ್ಪ' ಎಂದೇ ಕರೆಯುತ್ತಿದ್ದನು. ಒಳ್ಳೆಯ ಆಡಳಿತ ನೀಡಿದ ಮೆಡೋಜ್ ಟೇಲರ್ ಪ್ರಸಿದ್ಧಿಯನ್ನು ಪಡೆದನು. ಅವನು ಕಟ್ಟಿಸಿದ 'ಟೇಲರ್ಸ್ ಮಂಜಿಲ್' ಆಕರ್ಷಕವಾಗಿದೆ. ವೆಂಕಟಪ್ಪ ನಾಯಕನು ಪ್ರಾಪ್ತ ವಯಸ್ಕನಾದ ಮೇಲೆ ಅವನಿಗೆ ರಾಜ್ಯಭಾರವನ್ನು ವಹಿಸಿಕೊಟ್ಟನು. ಆಗ ಯುವರಾಜನಿಗೆ ಕೇವಲ ಹದಿನೆಂಟು ವಯಸ್ಸು. ಈ ಸಂದರ್ಭದಲ್ಲಿ ಬ್ರಿಟಿಷರು ಹಾಗೂ ನಿಜಾಮರು ರಾಜ್ಯವನ್ನು ಕೊಳ್ಳೆ ಹೊಡೆದರು. ಉತ್ಕಟ ದೇಶಪ್ರೇಮಿಯಾಗಿದ್ದ ಯುವರಾಜನು ವಿದೇಶಿಯರ ದಬ್ಬಾಳಿಕೆಯಿಂದ ನಲುಗಿಹೋಗಿದ್ದನು.

೧೮೫೩ರ ನಂತರ ಭಾರತದ ಗವರ್ನರ್ ಜನರಲ್ ಲಾರ್ಡ್ ಡಾಲ್‌ಹೌಸಿಯು ಸುರಪುರಕ್ಕೆ ಮೇಲ್ವಿಚಾರಣೆಗೆ ಬ್ರಿಟಿಷ್ ರೆಸಿಡೆಂಟನನ್ನು ನೇಮಿಸಿಕೊಂಡು ಅವನಿಗೆ ವಾರ್ಷಿಕ ೨೦ ಸಾವಿರ ರೂಪಾಯಿಗಳನ್ನು

ನೀಡಬೇಕೆಂದು ರಾಜಾ ವೆಂಕಟಪ್ಪ ನಾಯಕನಿಗೆ ಸೂಚನೆ ನೀಡಿದನು. ಇದರಿಂದ ರೋಸಿಹೋದ ರಾಜನು ಸಾಧ್ಯವಿಲ್ಲವೆಂದನು. ಮೊದಲೇ ರಾಜ್ಯವು ಆರ್ಥಿಕವಾಗಿ ದುಸ್ಥಿತಿಯಲ್ಲಿತ್ತು. ರಾಜನು ಅರಬ್ ಹಾಗೂ ರೊಹಿಲರನ್ನು ತನ್ನ ಸೈನ್ಯದಲ್ಲಿ ಸೇರಿಸಿಕೊಂಡು ಬ್ರಿಟಿಷರನ್ನು ಬಗ್ಗು ಬಡಿಯಲು ತಯಾರಾದನು. ಇದಕ್ಕಾಗಿ ರಾಯಚೂರಿನಿಂದ ಧನಸಹಾಯ ಪಡೆದುಕೊಂಡಿದ್ದನು.

ಭಾರತದಲ್ಲಿ ೧೮೫೭ರಲ್ಲಿ ಪ್ರಥಮ ಸ್ವಾತಂತ್ರ್ಯ ಸಂಗ್ರಾಮದ ಭರ್ಜರಿ ತಯಾರಿ ನಡೆದಿತ್ತು. ಆಗ ದಕ್ಷಿಣ ಭಾರತದ ರಾಜರನ್ನು ಒಂದುಗೂಡಿಸಿ ಬ್ರಿಟಿಷರನ್ನು ಬಗ್ಗು ಬಡಿಯಬೇಕೆಂದು ರಾಜನು ತಯಾರಾದನು.

ಜಮಖಂಡಿ, ಆನೆಗೊಂದಿ, ನರಗುಂದ, ಹುನಗುಂದ, ಶಿರಹಟ್ಟಿ, ಅಕ್ಕಲಕೋಟೆ, ಕೋಲ್ಹಾಪುರ, ಬಳ್ಳಾರಿ, ಮಿರಜ, ಜತ್ತ, ಮುಧೋಳ, ಧಾರವಾಡ, ಕಲಾದಗಿ, ರಾಯಚೂರು ಮೊದಲಾದ ಅರಸರು ರಾಜಾ ವೆಂಕಟಪ್ಪ ನಾಯಕನೇ ಈ ಮಹತ್ವದ ಹೋರಾಟದ ನೇತೃತ್ವವನ್ನು ವಹಿಸಿಕೊಳ್ಳಬೇಕೆಂದು ಕೋರಿದರು. ವೆಂಕಟಪ್ಪ ನಾಯಕನು ಕೂಡ ಎಲ್ಲ ರೀತಿಯ ತಯಾರಿ ಮಾಡಿಕೊಂಡಿದ್ದನು. ಸುರಪುರ ಸ್ವಾತಂತ್ರ್ಯದ ರಣಕಹಳೆಯೂದಲು ತಯಾರಾಯಿತು. ಬ್ರಿಟಿಷರಿಗೆ ಇದರ ಸುಳಿವು ಸಿಕ್ಕು ಅವರು ಸುರಪುರದ ರಾಜನನ್ನು ಬಗ್ಗು ಬಡಿಯಲು ಹವಣಿಸಿದರು. ಅವರು ಸುರಪುರದ ಅರಸನ ಚಲನವಲನಗಳನ್ನು ಅತ್ಯಂತ ಸೂಕ್ಷ್ಮವಾಗಿ ಗಮನಿಸಲು ಅನೇಕ ಗೂಢಚಾರರನ್ನು ನೇಮಿಸಿದರು. ೧೮೫೭ರ ಡಿಸೆಂಬರ್‌ದಲ್ಲಿ ಮರಾಠಾ ನಾಯಕ ಪೇಶ್ವೆ ನಾನಾ ಸಾಹೇಬನೊಡನೆ ತನ್ನ ಪ್ರತಿನಿಧಿ ಮೂಲಕ ಮಾತುಕತೆ ನಡೆಸಿದನು. ಆಗಾಗ ನಾನಾಸಾಹೇಬನ ಮಾರ್ಗದರ್ಶನ ಪಡೆಯುತ್ತಿದ್ದನು. ಆಗ ರಾಜನಿಗೆ ಇನ್ನೂ ತುಂಬಾ ಚಿಕ್ಕ ವಯಸ್ಸು.

ಬೆಳಗಾವಿಯ ೨೯ ನೇ ದಳದಲ್ಲಿ ಕ್ರಾಂತಿಯ ಕಿಡಿಯನ್ನು ಹಚ್ಚಿ ಸೈನ್ಯದಲ್ಲಿ ದಂಗೆ ಎಬ್ಬಿಸಲು ವೆಂಕಟಪ್ಪ ನಾಯಕನು ಮಹಿಪಾಲಸಿಂಗ ಎಂಬ ಗೂಢಚಾರನನ್ನು ಕಳುಹಿಸಿದನು. ಅವನನ್ನು ಬ್ರಿಟೀಷರು ಬಂಧಿಸಿ ಮಾಹಿತಿಯನ್ನು ಪಡೆದರು. ಬ್ರಿಟಿಷರು ಸುರಪುರದ ಅರಸನಿಗೆ ಪತ್ರವೊಂದನ್ನು ಬರೆದು ಶಾಂತಿಯಿಂದ ಇರಬೇಕೆಂದು ಎಚ್ಚರಿಕೆ ನೀಡಿದರು. ರಾಜನು ಕೂಡ ತಾನು ಬ್ರಿಟೀಷರಿಗೆ ನಿಷ್ಠೆಯಿಂದ ಇರುವುದಾಗಿ ತಿಳಿಸಿದನು.



ವೆಂಕಟಪ್ಪ ನಾಯಕನು ತನ್ನ ಸೈನ್ಯಕ್ಕೆ ಅರಬ್‌ರನ್ನು ಸೇರಿಸುತ್ತಿರುವನೆಂದು ಹೈದರಾಬಾದಿನ ನಿಜಾಮ ಸಾಲಾರಜಂಗನು ಆಂಗ್ಲರಿಗೆ ೧೮೫೮ ಜನವರಿ ೧೫ ರಂದು ಪತ್ರವೊಂದನ್ನು ಬರೆದು ತಿಳಿಸಿದನು. ಈ ಮೊದಲೇ ಬ್ರಿಟಿಷರು ಹಾಗೂ ನಿಜಾಮರು ಸೇರಿ ಸುರಪುರವನ್ನು ಕೊಳ್ಳೆ ಹೊಡೆದಿದ್ದರು. ಇದು ಸುರಪುರ ಜನತೆಯ ಆಕ್ರೋಶಕ್ಕೆ ಕಾರಣವಾಗಿತ್ತು. ಇದು ರಾಜಾ ವೆಂಕಟಪ್ಪ ನಾಯಕನನ್ನು ರೊಚ್ಚಿಗೆಬ್ಬಿಸಿತು. ಬ್ರಿಟಿಷರೊಂದಿಗೆ ಹೋರಾಡಲು, ಬಂಡಾಯವೇಳಲು ರಾಜನು, ನಾನಾಸಾಹೇಬ ಪೇಶ್ವೆ, ಜಮಖಂಡಿ ರಾಜ ಪಟವರ್ಧನ್, ಮಳಖೇಡ ಜಮೀನ್ದಾರ, ಜಂಬಗಿಯ ದೇಶಮುಖ ಬಸವಲಿಂಗಪ್ಪ, ಮುಂಡರಗಿ ಭೀಮರಾಯ, ನರಗುಂದದ ಬಾಬಾಸಾಹೇಬ, ಸಂಗೊಳ್ಳಿ ರಾಯಣ್ಣ, ಹೈದ್ರಾಬಾದಿನ ಅರಬ್ ಸೈನಿಕರ ನೆರವು ಪಡೆಯಲು ನಿರ್ಧರಿಸಿದನು. ಸುರಪುರದ ಸುತ್ತಮುತ್ತಲಿನ ಜಮೀನದಾರರು ತಾವಾಗೇ ಮುಂದೆ ಬಂದು ಸಹಾಯ ಸಹಕಾರ ನೀಡಿದರು.

ಇದರಿಂದ ಸ್ಫೂರ್ತಿಗೊಂಡ ಧೀರ ಶೂರ ರಾಜನು ೧೮೫೮ ರಲ್ಲಿ ಬ್ರಿಟಿಷರ ವಿರುದ್ಧ ರಣಕಹಳೆಯನ್ನು ಮೊಳಗಿಸಿದನು. ಯುದ್ಧಕ್ಕೆ ಬಂದ ಕ್ಯಾಪ್ಟನ್ ನ್ಯೂಬೇರಿಯನ್ನು ರುಕ್ಮಾಂಪುರದ ಬಳಿ ಹೊಡೆದುರುಳಿಸಿದನು. ಇಂದಿಗೂ ನ್ಯೂಬೇರಿ ಸಮಾಧಿಯು ರುಕ್ಮಾಂಪುರದ ಹತ್ತಿರವಿದೆ. ನ್ಯೂಬೇರಿಯ ರುಂಡದ ಸಮಾಧಿ ಸುರಪುರದ ಮೇಲ್ಗಡೆ ಯಲ್ಲಪ್ಪ ಭಾವಿಯ ಹತ್ತಿರವಿದ್ದರೇ, ಅವನ ಮುಂಡದ ಸಮಾಧಿ ರುಕ್ಮಾಂಪುರದ ಹತ್ತಿರ ೫ ಕಿ.ಮೀ. ದೂರದಲ್ಲಿದೆ.

ಸುರಪುರದಲ್ಲಿ ಮೊಳಗಿದ ಈ ಜಯಭೇರಿಯು ಎಲ್ಲೆಡೆ ಮಾರ್ದನಿ ಮೊಳಗಿಸಿತು. ಸುರಪುರದಲ್ಲಿ ಹೊತ್ತಿಸಿದ ಬಂಡಾಯದ ಕಿಡಿ, ಇಡೀ ದಕ್ಷಿಣ ಭಾರತದಲ್ಲೆಲ್ಲ ವ್ಯಾಪಿಸಿತು. ಸುರಪುರ ಸಮೀಪದ ಕವಡಿಮಟ್ಟಿಯಲ್ಲಿ ಕ್ಯಾಪ್ಟನ್ ಮಾಲ್‌ಕೋಮ್‌ನ ನೇತೃತ್ವದ ಬ್ರಿಟಿಷರ ಸೈನ್ಯ ಬಿಡಾರ ಹೂಡಿತ್ತು. ಸಿಂಧನೂರಿನ ಸಮೀಪ ಕೂಡ ಮತ್ತೊಂದು ದಂಡು ಬಿಡಾರ ಹೂಡಿತ್ತು. ಮಾಲಕೋಮ್‌ನು ಸುರಪುರದ ಅರಸನ ಸಾಮರ್ಥ್ಯ ಅರಿತು ಅವನಿಗೆ ತಿಳಿಹೇಳಲು ಬ್ರಿಟಿಷ ಅಧಿಕಾರಿ ಕ್ಯಾಂಪ್‌ಬೆಲ್‌ನನ್ನು ಕಳುಹಿಸಿದ್ದನು. ಅವನು ಮಾತನ್ನು ಧಿಕ್ಕರಿಸಿದ ರಾಜಾ ವೆಂಕಟಪ್ಪ ನಾಯಕನು ವೀರಾವೇಷದಿಂದ ಘರ್ಜಿಸಿದನು. ೧೮೫೮ರ ಫೆಬ್ರುವರಿ ೭ ರಂದು ಬ್ರಿಟಿಷ ಸೈನ್ಯ ಸುರಪುರದ ಕೋಟೆಯನ್ನು ಆಕ್ರಮಿಸಲು

ಹವಣಿಸಿತು. ಸುರಪುರದ ಶೂರ ಸೈನಿಕರು ಅವರನ್ನು ಕೊಂದು ಹಾಕಿದರು. ಮರುದಿನ ಬ್ರಿಟಿಷರ ಮದರಾಸಿನ ಪ್ರೆಸಿಡೆನ್ಸಿ ಮುಖ್ಯಸ್ಥನಾಗಿದ್ದ ಕಾಲ್‌ಹ್ಯೂಸ್‌ನ ನೇತೃತ್ವದಲ್ಲಿ ಇನ್ನೊಂದು ತಂಡ ಆಕ್ರಮಿಸಿದಾಗ ಅವರನ್ನೂ ಕೊಂದು ಹಾಕಿದರು, ಬ್ರಿಟಿಷರ ೫೦೦ ಸೈನಿಕರು ಹತರಾದರು.

ನಂತರ ಬ್ರಿಟಿಷರು ಸೇನಾಧಿಕಾರಿ ಕ್ಯಾಪ್ಟನ್ ವೈಂಡ್‌ಹ್ಯಾಮ್‌ನ ನೇತೃತ್ವದಲ್ಲಿ ಪ್ರಬಲ ಸೈನ್ಯ ಕಳುಹಿಸಿದರು. ಆದರೂ ಕೂಡ 'ಸುರಪುರ' ಮಣಿಯಲಿಲ್ಲ. ವೆಂಕಟಪ್ಪ ನಾಯಕನು ಜೀವದ ಹಂಗು ತೊರೆದು ಹೋರಾಟ ಮಾಡಿದನು. ಸುರಪುರದ ಕೋಟೆಗಳು ದುರ್ಗಮವಾದವುಗಳಾಗಿದ್ದುದು ಎದುರಾಳಿಗಳಿಗೆ ಮುಳ್ಳಾಯಿತು, ನುಂಗಲಾರದ ತುತ್ತಾಯಿತು.

ಬ್ರಿಟಿಷರ ಸೈನ್ಯ ರಾಜಾ ಪಿಡ್ಡ ನಾಯಕನನ್ನು ಕೊಂದಾಗ, ಸುರಪುರದ ಮಾತೆ 'ರಾಣಿ ಈಶ್ವರಮ್ಮ' ಬ್ರಿಟಿಷರ ವಿರುದ್ಧ ಸಿಡಿದೇಳುತ್ತಾಳೆ. ನನ್ನ ಎರಡು ಕುಡಿಗಳಲ್ಲಿ ಒಂದು ಕುಡಿಯನ್ನು ಕಳೆದು ಕೊಂಡಿದ್ದೇನೆ ಎಂದು ದುಃಖಿತಳಾಗುತ್ತಾಳೆ. 'ಬೇಡರು ಯಾರಿಗೂ ಹೆದರಬಾರದು, ಸಮಯ ಬಂದರೆ ಸ್ತ್ರೀಯರೂ ವೀರ ನಾರಿಯರಾಗಿ ಹೋರಾಟಕ್ಕೆ ಮುನ್ನುಗ್ಗಬೇಕು, ಕೆಂಪು ಮುಸುಡಿಗಳನ್ನು ಸದೆ ಬಡೆಯಬೇಕು' ಎಂದು 'ವೀರಧ್ವನಿ'ಯನ್ನು ಹೊರಡಿಸುತ್ತಾಳೆ. ಅವಳ ಈ ವೀರಾವೇಶದ 'ಧ್ವನಿ' ಹಾಗೂ ವೆಂಕಟಪ್ಪ ನಾಯಕನ ಶೌರ್ಯದ ಛಾಯೆ ಎಲ್ಲೆಡೆ ಹರಡಿ, ಬ್ರಿಟಿಷರ ವಿರುದ್ಧ ಕೊಲ್ಲಾಪುರದಲ್ಲಿ ೨೭ ನೆಯದು ಧಾರವಾಡದಲ್ಲಿ ೨೮ ನೆಯದು, ಬೆಳಗಾವಿಯಲ್ಲಿ ೨೯ ನೆಯ ದಂಗೆಗಳಾದವು. ಈ ಕುರಿತು ಬ್ರಿಟಿಷ ಅಧಿಕಾರಿಗಳು ಸರ್ಕಾರಕ್ಕೆ ವರದಿ ಸಲ್ಲಿಸಿದ್ದು ಕಂಡು ಬರುತ್ತದೆ. ಇದಕೆಲ್ಲ ಸುರಪುರದ ದೊರೆ ರಾಜಾ ವೆಂಕಟಪ್ಪ ನಾಯಕನೇ ಕಾರಣ ಎಂದು ಉಲ್ಲೇಖಿಸಿದ್ದಾರೆ.

ಇತ್ತ ಕಡೆ ಬ್ರಿಟಿಷರ ದಾಳಿ ಮುಂದುವರೆದಂತೆ, ಸುರಪುರದ ಸೈನ್ಯಕ್ಕೆ ಅನೇಕ ತೊಂದರೆಗಳು ಎದುರಾದವು. ಇಂತಹ ಸಂದರ್ಭದಲ್ಲಿ ರಾಜನ ಆಪ್ತ ವರ್ಗದಲ್ಲಿದ್ದ, ಬ್ರಿಟಿಷರ ರಹಸ್ಯ ಪ್ರತಿನಿಧಿಯಾಗಿದ್ದ ವಾಗನಗೇರಿ ಭೀಮರಾಯನು ಹೈದ್ರಾಬಾದ್‌ಗೆ ಹೋಗಿ ಸಾಲರಜಂಗ್‌ನ ಸಹಾಯ ಪಡೆಯಲು ಹೇಳಿದನು. ಅವನ ಮಾತನ್ನು ನಂಬಿ ರಾಜನು ತನ್ನ ಸಹವರ್ತಿಗಳೊಂದಿಗೆ ನಳದುರ್ಗದ ಮಾರ್ಗವಾಗಿ ಹೈದರಾಬಾದಿಗೆ ತೆರಳಿದನು.



ಆದರೆ ಅಲ್ಲಿ ಸಾಲಾರಜಂಗ್ ಹಾಗೂ ವನಪರ್ತಿಯ ಅರಸ ರಾಮೇಶ್ವರಾವ್ ಇಬ್ಬರೂ ಕೂಡಿ ರಾಜನನ್ನು ಬಂಧಿಸಿ ಬ್ರಿಟಿಷರಿಗೆ ಒಪ್ಪಿದರು. ಇವನನ್ನು ಸಿಕಂದರಾಬಾದ್ ಜೇಲಿನಲ್ಲಿಡಲಾಯಿತು. ಮೆಡೋಸ್ ಟೇಲರ್ ವೆಂಕಟಪ್ಪ ನಾಯಕನನ್ನು ಭೇಟಿಯಾದಾಗ ರಾಜನು ಆಡಿದ ಮಾತು ವೀರಸಿಂಹ ಘರ್ಜನೆಯೇ ಸರಿ.

'ನನಗೆ ಜೀವದ ಹಂಗಿಲ್ಲ, ನನಗೆ ಜೀವದಂಡನೆಯನ್ನು ವಿಧಿಸಿ ಒಬ್ಬ ಕಳ್ಳನಂತೆ ನನ್ನನ್ನು ಗಲ್ಲಿಗೇರಿಸಬೇಕಾಗಿಲ್ಲ. ಅದರ ಬದಲಾಗಿ ನನ್ನ ಬಾಯಲ್ಲಿ ತೋಪನ್ನಿಟ್ಟು ಕೊಲ್ಲಿರಿ, ನಾನು ಹೆದರುವುದಿಲ್ಲ' ಎಂದು.

ಸ್ವಾತಂತ್ರ್ಯ ಸೇನಾನಿ ಸುರಪುರದ ನಾಲ್ವಡಿ ರಾಜಾ ವೆಂಕಟಪ್ಪ ನಾಯಕನ ವಿಚಾರಣೆಯನ್ನು ಬ್ರಿಟಿಷ್ ಬ್ರಿಗೇಡಿಯರನ ನೇತೃತ್ವದ ಮಿಲಿಟರಿ ನ್ಯಾಯಾಲಯದಲ್ಲಿ ವಿಚಾರಣೆ ನಡೆಯಿತು. ಅವರೆಲ್ಲಾ ಸೇರಿ ಮರಣ ದಂಡನೆಯನ್ನು ವಿಧಿಸಿದರು. ಕೊನೆಗೆ ರೆಸಿಡೆಂಟ್ ಡ್ಯಾವಿಡ್ಸನ್‌ನ ಕೋರಿಕೆಯಂತೆ ಆಜನ್ಮ ಕಾರಾಗ್ರಹ ವಾಸ ಎಂದು ನಿರ್ಣಯಿಸಲಾಯಿತು. ನಂತರ ಗವರ್ನರ್ ಜನರಲ್‌ನ ಎದುರು ಮೆಡೋಸ್ ಟೇಲರ್ ಅದನ್ನು ನಾಲ್ಕು ವರ್ಷಗಳ ಕಾರಾಗ್ರಹದ ಶಿಕ್ಷೆಯಾಗಿ ಮಾರ್ಪಡಿಸಿದರು. ಇಲ್ಲಿ ಬ್ರಿಟಿಷರು ತುಂಬಾ ಚೆನ್ನಾಗಿ ನಾಟಕ ಮಾಡಿದರು. ರಾಜನನ್ನು ಹಾಗೂ ಈತನ ಇಬ್ಬರು ರಾಣಿಯರಾದ ರಾಣಿರಂಗಮ್ಮ ಹಾಗೂ ರಾಣಿ ವೆಂಕಟಮ್ಮನನ್ನು ಕರ್ನೂಲ ಕಾರಾಗೃಹದಲ್ಲಿಡಲು ಉದ್ದೇಶಿಸಿದರು.

ಲೆಫ್ಟಿನಂಟ್ ಪಿಕ್– ಟಾಪ್ ನ ನೇತೃತ್ವದಲ್ಲಿ ಸೈನಿಕರ ಸರ್ಪ ಕಾವಲಿನಲ್ಲಿ ಮದ್ರಾಸ್ ಹತ್ತಿರದ ಚೆಂಗಾಲಪೇಟೆಗೆ ರಾಜನನ್ನು ಕರೆದುಕೊಂಡು ಹೋಗುವಾಗ ಸಿಕಂದರಾಬಾದ್‌ನ ಹುಸೇನ್ ಸಾಗರದ ಹತ್ತಿರ ಆರು ಮೈಲಿ ದೂರದಲ್ಲಿ ಇವರು ಬಿಡಾರ ಹೂಡಿದರು. ಅಂಬಾರಪೇಟೆಯ ಈ ಬಿಡಾರನಲ್ಲಿ ಲೆಫ್ಟಿನಂಟ್ ಪಿಕ್– ಟಾಪ್ ರಿವಾಲ್ವರ್ ಅಲ್ಲಿಯೇ ಬಿಟ್ಟು ಮುಖ ತೊಳೆಯಲು ಹೋಗಿದ್ದನು. ಆತ ಮರಳಿ ಬರುವುದರಲ್ಲಿ ರಾಜನು ರಕ್ತದ ಮಡುವಿನಲ್ಲಿ ಬಿದ್ದಿದ್ದನು. ಗುಂಡು ಆತನ ಹೊಟ್ಟೆಯಿಂದ ಹಾದು ಬೆನ್ನಿನೊಳಗಿಂದ ಹೊರಬಂದಿತ್ತು. ಅರಸನೇ ಆತ್ಮಹತ್ಯೆ ಮಾಡಿಕೊಂಡ ಎಂದು ಕಥೆಯನ್ನು ಬ್ರಿಟಿಷರು ಕಟ್ಟಿದರು.

ಈ ಸಂದರ್ಭದಲ್ಲಿ ಅನೇಕ ಬ್ರಿಟಿಷ ಅಧಿಕಾರಿಗಳು ಸರ್ಕಾರಕ್ಕೆ ನೀಡಿದ ವರದಿಗಳಲ್ಲಿ ಎಲ್ಲರೂ ಬ್ರಿಟಿಷ ಸರಕಾರದ ಪರವಾಗಿಯೇ ವರದಿ ನೀಡಿದ್ದಾರೆ. ರಾಜನು ರಿವಾಲ್ವರ್ ಪರೀಕ್ಷಿಸಲು ಹೋಗಿ ಗುಂಡು ಹಾರಿ ರಾಜನು ಸತ್ತಿರಬಹುದು ಎಂದು ವರದಿಗಳು ಹೇಳುತ್ತವೆ. ರಾಜನು ಆತಹತ್ಯೆ ಮಾಡಿಕೊಂಡನೆಂದೇ ಇಂಗ್ಲಿಷರು ಪ್ರತಿಪಾಸಿದಿದ್ದಾರೆ.

'ರಾಜನನ್ನು ಬಂಧಿಸಿ ಸೆರೆ ಹಿಡಿದದ್ದು, ಕಾರಾಗೃಹದಲ್ಲಿ ಇರಿಸಿದ್ದು, ಇವು ಅವನ ಸ್ವಾಭಿಮಾನಕ್ಕೆ ಪೆಟ್ಟು ನೀಡಿದ್ದವು. ಹೀಗಾಗಿ ರಾಜನು ಆತ್ಮಹತ್ಯೆ ಮಾಡಿಕೊಂಡಿರಬಹುದು' ಎಂದು ಮೇಜರ್ ಜನರಲ್ ಸರ್ ಜಾರ್ಜ್ ಲೆಗ್ರಾಂಡ್ ಜೇಕಬ್, ಪಾಲಿಮಾರ್ಕ್, ಮೆಡೋಸ್ ಟೇಲರ್.... ಮೊದಲಾದವರು ಅಭಿಪ್ರಾಯ ಪಡುತ್ತಾರೆ.

ಉತ್ತರ ಭಾರತದ ಝಾನ್ಸಿ, ಅವಹ್, ಗ್ವಾಲಿಯರ್, ಕಾನ್ಪುರ.... ಮೊದಲಾದ ಕಡೆಗೆ ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮದ ಕಾವು ಏರಿತ್ತು. ಉತ್ತರ ಭಾರತದಲ್ಲಿ ನಾನಾಸಾಹೇಬ ಸ್ವಾತಂತ್ರ್ಯ ಸಂಗ್ರಾಮದ ಮುಖಂಡತ್ವ ವಹಿಸಿಕೊಂಡಂತೆ, ದಕ್ಷಿಣ ಭಾರತದಲ್ಲಿ ರಾಜಾ ವೆಂಕಟಪ್ಪನಾಯಕನ ಮುಖಂಡತ್ವವನ್ನು ಇಲ್ಲಿಯ ಎಲ್ಲ ರಾಜರೂ, ಸಂಸ್ಥಾನಿಕರು ಒಪ್ಪಿಕೊಂಡಿದ್ದರು. ಇದು ಬ್ರಿಟಿಷರಿಗೆ ಭಯ ಹುಟ್ಟಿಸಿತ್ತು. ಬೇಡ ಅರಸರ ಶೂರತ್ವದ ಪರಿಚಯವೂ ಇಂಗ್ಲಿಷರಿಗೆ ಇತ್ತು. ಇದನ್ನು ಹೇಗಾದರೂ ಮಾಡಿ ಕೊನೆಗಾಣಿಸಬೇಕೆಂದು ಬ್ರಿಟಿಷರು ಈ ತಂತ್ರ ಹೂಡಿದರು. ಬ್ರಿಟಿಷರು ತಾವೇ ರಾಜನನ್ನು ವಿಚಾರಣೆಯ ನಾಟಕ ಮಾಡಿ ಕೊಂದರು, ರಾಜನ ಶವದ ಪೋಸ್ಟ್ ಮಾರ್ಟಮ್ ಅವರೇ ಮಾಡಿದರು. ಅವರೇ ಶವವನ್ನು ಯಾರ ಕೈಗೂ ಸಿಗದಂತೆ ಎಚ್ಚರ ವಹಿಸಿದರು.

ಶೂರ ರಾಜನ ಶವ ನೋಡಿ ಜನರು ಕುದಿಯುತ್ತಿದ್ದರು, ಅವರ ಆಕ್ರೋಶ ಭುಗಿಲೇಳುತ್ತಿತ್ತು. ಇದು ಬ್ರಿಟಿಷರಿಗೆ ನುಂಗಲಾರದ ತುತ್ತಾಗಿತ್ತು. ಬ್ರಿಟಿಷರು ಯಥಾ ಪ್ರಕಾರ ತಮ್ಮ ಒಡೆದಾಳುವ ನೀತಿಯ ಮೂಲಕ ಇಲ್ಲಿ ಇದನ್ನು ನಿಭಾಯಿಸಿದ್ದು ಕಂಡು ಬರುತ್ತದೆ.

ಶೂರ ರಾಜಾ ವೆಂಕಟಪ್ಪ ನಾಯಕನ ಸಮಾಧಿಯು ಸುರಪುರದಲ್ಲಿಲ್ಲ, ಆಂಧ್ರ ಪ್ರದೇಶದ ಅಂಬರ ಪೇಟೆಯ ಮೈದಾನದಲ್ಲಿಯೂ ಇಲ್ಲ. ೨೩ರ



ಹರೆಯದ ಶೂರ ರಾಜನನ್ನು ಮೋಸದಿಂದ ಬ್ರಿಟಿಷರು ಕೊಂದು ಹಾಕಿ, ಅದಕ್ಕೆ ಬೇರೆ ಕಥೆಯನ್ನೇ ಕಟ್ಟಿದರು.

ಸುರಪುರದ ಜನಪದರು ಕಟ್ಟಿದ ಲಾವಣಿಯಲ್ಲಿ ಶ್ರೀ ಸಾಮಾನ್ಯರು ಈ ಬಗ್ಗೆ ಸ್ಪಷ್ಟವಾಗಿ ಹಾಡುತ್ತಾರೆ.

**'ದಿಟ್ಟ ವೆಂಕಟಪ್ಪ ನಾಯಕ, ಅಟ್ಟಿದನು ವೈರಿಗಳ**
**ಭದ್ರ ರಾಜ್ಯವ ಕಟ್ಟಿ ಗುಂಡಿಗೆ! ದೇಹ ಕೊಟ್ಟು**
**ಮೋಸಕ್ಕೆ ಜೀವ ತೆತ್ತಾನು!**

ಈ ರೀತಿ ದೇಶಕ್ಕಾಗಿ ತನ್ನ ಆತ್ಮಾರ್ಪಣೆ ಮಾಡಿಕೊಂಡ ಶೂರ ಅರಸು ರಾಜಾ ವೆಂಕಟಪ್ಪ ನಾಯಕ ಭಾರತ ಸ್ವಾತಂತ್ರ್ಯ ಕಿಚ್ಚು ಹಚ್ಚಿದ್ದು ಸುಳ್ಳಲ್ಲ. ರಾಜನ ಮೂಲಕ ಬೇಡರ ಸ್ವಾಮಿನಿಷ್ಠೆ, ಸ್ವಾಭಿಮಾನ, ತ್ಯಾಗಗಳು ಇಡೀ ದೇಶಕ್ಕೆ ಪರಿಚಯವಾಗುವಂತಾಯಿತು. ಇ.ಸ.೧೮೬೧ ರಂದು ಸುರಪುರ ಸಂಸ್ಥಾನವನ್ನು ಹೈದರಾಬಾದಿನ ನಿಜಾಮನ ರಾಜ್ಯಕ್ಕೆ ಸೇರ್ಪಡೆ ಮಾಡಿದ ಬ್ರಿಟಿಷರು ಈ ಬೇಡ ರಾಜ್ಯವನ್ನು ಆಹುತಿ ತೆಗೆದುಕೊಂಡರು.

ಶೂರ ರಾಜಾ ವೆಂಕಟಪ್ಪ ನಾಯಕನ ಬೆಳವಣಿಗೆಯಲ್ಲಿ ಮೆಡೋಸ್ ಟೇಲರ್ ಮಹತ್ವದ ಪಾತ್ರ ವಹಿಸುತ್ತಾನೆ. ಅವನಿಗೆ ಉತ್ತಮ ಶಿಕ್ಷಣ ನೀಡಿ, ಎಲ್ಲ ವಿದ್ಯೆಗಳೂ ಕರತಲಾಮಲಕವಾಗುವಂತೆ ತರಬೇತಿ ಕೊಡಿಸುತ್ತಾನೆ. ಸುರಪುರದಲ್ಲಿ ಗುಡ್ಡದ ಮೇಲೆ ಬಂಗ್ಲೆ ನಿರ್ಮಿಸಿ 'ಟೇಲರ್ಸ್ ಮಂಜಿಲ್' ಎಂದು ಹೆಸರಿಸುತ್ತಾನೆ. ಆಗಿನ ಕಾಲದಲ್ಲಿಯೇ ಇದು ಅತ್ಯಾಧುನಿಕ ತಂತ್ರಜ್ಞಾನವನ್ನು ಹೊಂದಿತ್ತು. ಇಲ್ಲಿ ಒಂದು ಮುಖ್ಯ ಬಾಗಿಲು ತೆರೆದರೆ ಎಲ್ಲ ಬಾಗಿಲುಗಳೂ ತೆರೆಯುತ್ತವೆ ಹಾಗೂ ಮುಚ್ಚುತ್ತವೆ. ತನ್ನ ರಕ್ಷಣೆಗಾಗಿ ಈ ರೀತಿ ಮಾಡಿದ್ದನು ಎಂದು ಹೇಳಲಾಗುತ್ತದೆ. ಇನ್ನೊಂದು ಲಾವಣಿಯಲ್ಲಿ... ರಾಜನ ಕುರಿತು....

**'ಬಡೆಸಾಬಗ ಸುದ್ದಿಯ ಕಳಿಸಿ। ಆಗಳಿಗೆ ಸೋಲ್ಜರ್ ತರಿಸಿ**
**ವಳವಳಗ ಹೇಳಿ ಹಿಡಿತರಿಸಿ। ಮಾಡಿದರು ಫಾಸಿ।'**

**'ವೆಂಕಟಪ್ಪನ ಬಂಧಿಸಿ, ಮಾಡ್ಯಾರೋ ಜೀವಕ್ಕ ಫಾಸಿ,**
**ಕತೆ ಕಟ್ಟಿ ಹೇಳ್ಯಾರೋ। ಕೋತಿ**

**ಮುಸುಡಿಯ ಮಂದಿ।**
**ಹೀಗೆ ಜಾನಪದೀಯಗಳು ಎಂದೂ ಸುಳ್ಳನ್ನಾಡುವುದಿಲ್ಲ. ಸತ್ಯವೇ ಅವರ ಧ್ಯೇಯವಾಕ್ಯ!**

ಧೀರ ಶೂರ ರಾಜನಾಗಿದ್ದ ನಾಲ್ವಡಿ ರಾಜಾ ವೆಂಕಟಪ್ಪ ನಾಯಕನ ಕುರಿತು ಜನಸಾಮಾನ್ಯರು ಲಾವಣಿ ಕಟ್ಟಿ ಹಾಡಿದರು. 'ದುಂದುಮೇ' ಪದದಲ್ಲಿ ವೀರರಸವೇ ಪ್ರಧಾನವಾಗಿ ಹರಿದಿದೆ. ಬಹುಶಃ ದುಂದುಮೇ ಹಾಡು, ಹಾಡುಗಾರರು 'ಸುರಪುರ' ಬಿಟ್ಟು ಇನ್ನೆಲ್ಲೂ ಇದ್ದಂತೆ ಕಾಣುವುದಿಲ್ಲ. ಇಡೀ ಭಾರತದಲ್ಲಿ ವೀರ ರಾಜನಿಗೆ ಅರ್ಪಿಸಿದ 'ಶ್ರೀಸಾಮಾನ್ಯನ ಹೃದಯ ಸಿಂಹಾಸನದ ಬಿನ್ನವತ್ತಳೆ ಈ 'ದುಂದುಮೇ' ಪದ ಇಲ್ಲಿ ಮಾತ್ರ ಕಾಣುತ್ತೇವೆ. ಇತಿಹಾಸಕಾರ ತನ್ನ ಇತಿಹಾಸ ಬರೆಯುವಲ್ಲಿ ತನ್ನ ನಾಯಕನನ್ನು ವೈಭವೀಕರಿಸಿರಬಹುದು. ಅಂತಹ ಸಾಧ್ಯತೆಗಳಿವೆ. ಆದರೆ ಸಾಮಾನ್ಯ ಪ್ರಜೆ ನುಡಿದ ಈ 'ದುಂದುಮೇ' ರಾಜನ ಕುರಿತಾದ ನೈಜ ಇತಿಹಾಸವನ್ನು ಕಟ್ಟಿ ಕೊಡುತ್ತದೆ. ಇದು ಎಲ್ಲ ನಿಜ ಲೇಖಕರ, ಬರಹಗಾರರ, ಸಮತೂಕದ ಓದುಗರ ದೃಢ ನಂಬಿಕೆ ಹಾಗೂ ದೃಢ ವಿಶ್ವಾಸ.

ಸುರಪುರದಲ್ಲಿ 'ಗುತ್ತೇದಾರ' ತಂಡದವರು, ಅವರೆಲ್ಲಾ ಒಂದೇ ಮನೆತನದವರು, ಅವರು ಹಾಡುವ ಈ ಪದ, ನಿಜಕ್ಕೂ ಇತಿಹಾಸವನ್ನು ಮೌಖಿಕ ಪರಂಪರೆಯ ರೀತಿಯಲ್ಲಿ ಜನಸಮುದಾಯಕ್ಕೆ ತಲುಪಿಸುತ್ತಿದ್ದಾರೆ. ಈಗ ಲಕ್ಷ್ಮಣ ಗುತ್ತೇದಾರ ತಂಡ ಈ ಬಹು ಅಮೂಲ್ಯವಾದ ಕಾರ್ಯ ಮಾಡುತ್ತಿದೆ. ರಾಜನ ಶೌರ್ಯ, ಸಾಹಸ, ವಂಚಕರ ಹೃದಯ ಹೀನತೆ, ಬ್ರಿಟಿಷರಿಗೆ ಚಳ್ಳೆ ಹಣ್ಣು ತಿನ್ನಿಸಿದ್ದು, ಎಲ್ಲ ಇದರಲ್ಲಿ ಅಡಕವಾಗಿದೆ. ಕ್ರಿ.ಶ.೧೮೫೮ರಿಂದಲೂ ಇದನ್ನು ಹಾಡುತ್ತ ಬರಲಾಗುತ್ತಿದೆ. ಇದು ಅಜ್ಞಾತ ಕವಿಯ ರಚನೆ. ಅಕ್ಷರ ಬಲ್ಲವನಿರದಿದ್ದರೂ ಇದು ಹೃದಯದಿಂದ ಬಂದದ್ದು ಈ 'ದುಂದುಮೇ ಪದ'. ೧೯೭೫ರ ಅಗಸ್ಟ್ ೧೫ರಂದು ಸುರಪುರದ ರಮಣಪ್ಪನ ಕಟ್ಟೆಯ ಮೇಲೆ ಎಲ್ಲ ಪ್ರಮುಖ ನಾಯಕರ ಸಮ್ಮುಖದಲ್ಲಿ, ಸಹಸ್ರಾರು ಜನರ ಎದುರುಗಡೆ ಇದನ್ನು 'ಗುತ್ತೇದಾರ ಸಹೋದರರು' ಹಾಡುತ್ತಿರುವಾಗಲೇ, ಮನೆತನದ ಹಿರಿಯ ಪಾರಪ್ಪ ಗುತ್ತೇದಾರರ ಹೃದಯ ನಿಂತುಹೋದ 'ಹೃದಯ ವಿದ್ರಾವಕ' ಘಟನೆ ಜರುಗಿತ್ತು. ಸುರಪುರ ರಾಜರ ಕುರಿತಾಗಿ ಅನೇಕ ಲಾವಣಿಗಳು,



ಹಾಡುಗಳು, ಜನಪದ ಗೀತೆಗಳು ಬಂದಿದ್ದರೂ ಕೂಡ ಎಲ್ಲರ ಹೃದಯದಲ್ಲಿ ಈ 'ದುಂದುಮೆ ಪದ' ಶಾಶ್ವತವಾಗಿ ನೆಲೆಸಿದೆ.

ಈ ಪದವನ್ನು ದೂರದರ್ಶನ, ಆಕಾಶವಾಣಿ, ಮೈಸೂರು ದಸರಾ ಸಂದರ್ಭದಲ್ಲಿಯೂ ಹಾಡಿದ್ದಾರೆ. ಇದೊಂದು 'ಭಾರತದ ಸ್ವಾತಂತ್ರ್ಯ ಸಂಗ್ರಾಮದ ದಕ್ಷಿಣ ಭಾರತದ ಮರೆಯಲಾಗದ ಅಮರ ಗೀತೆಯಾಗಿದೆ'.

'ಕರ್ನಾಟಕದಲ್ಲಿ ಸ್ವಾತಂತ್ರ್ಯ ಸಂಗ್ರಾಮ' ಎಂಬ ಕೃತಿಯಲ್ಲಿ ದಿ.ತಿ.ತಾ.ಶರ್ಮ ಅವರು, 'ಧೀರ ಕರ್ನಾಟಕ ಕ್ರಾಂತಿವೀರ ನಾಲ್ವಡಿ ರಾಜಾ ವೆಂಕಟಪ್ಪ ನಾಯಕನ ಬಗ್ಗೆ ಹೀಗೆ ಹೇಳುತ್ತಾರೆ–

'೧೮೫೭ನೆಯ ಮಹಾಕ್ರಾಂತಿಯ ಕಾಲದಲ್ಲಿ ಉತ್ತರ ಭಾರತದಲ್ಲಿ ನಾನಾಸಾಹೇಬನಿಗೆ ಯಾವ ಸ್ಥಾನವುಂಟೋ, ದಕ್ಷಿಣ ಭಾರತದಲ್ಲಿ ಸುರಪುರದ ರಾಜಾ ವೆಂಕಟಪ್ಪ ನಾಯಕನಿಗೆ ಆ ಸ್ಥಾನವುಂಟೆನ್ನಬಹುದು. ಭಾರತ ಇತಿಹಾಸದಲ್ಲಿ ವಿದ್ವಾಂಸರು 'ಅನಾದರ' ಮಾಡಿದ ಪಾತ್ರಗಳು ಅನೇಕ ಇವೆ. ಅವುಗಳಲ್ಲಿ ಸುರಪುರದ ಮಹಾವೀರನೂ ಒಬ್ಬ. ರಣರಾಗ, ರಣಪರಾಕ್ರಮಿ, ರಣವಿಕ್ರಾಂತ, ರಣಧೀರರೆಂದು ಬಿರುದು ಪಡೆದು ಪ್ರಖ್ಯಾತರಾದ ಕರ್ನಾಟಕದ ವೀರಕುಲ ಪರಂಪರೆಯಲ್ಲಿ, ಸುರಪುರದ ರಾಜಾ ನಾಲ್ವಡಿ ವೆಂಕಟಪ್ಪ ನಾಯಕನ ಹೆಸರು ಎದ್ದು ಕಾಣುತ್ತದೆ' ಎಂದು.

ಇಂಥ ವೀರನ ಬಗ್ಗೆ ನಮ್ಮ ಮಕ್ಕಳು ಪಠ್ಯಪುಸ್ತಕದಲ್ಲಿ ಓದಲೇ ಇಲ್ಲ! ಈಗಲಾದರೂ ಸರಕಾರ ಪಠ್ಯ ಪುಸ್ತಕದಲ್ಲಿ 'ಸುರಪುರದ ಸಿಂಹ' ಬಗ್ಗೆ ಅಳವಡಿಸಬೇಕು. ಹೊಸ ಪೀಳಿಗೆ ಇದನ್ನು ಅರಿಯಬೇಕು ಎಂಬುದೇ ಬಹುಜನರ ಬಯಕೆಯಾಗಿದೆ.

## ರಾಜಾ ವೆಂಕಟಪ್ಪನಾಯಕನ ದುಂದುಮೆ

ಹೇ ದುಂದುಮ್ಮೆ ಎಂದೆಂದು ಪಾಡಿರಿ ಜಾಣರೆ,
ದುಂದುಮ್ಮೆ ಬಸವಂತನ ಹಬ್ಬ

ಕೇಮಲಸಾಹೇಬ ಸುರಪುರಕ ಬಂದು
ಬಾವಾನ ಭಾವೀಯ ಸ್ಥಳದಲ್ಲಿ ಇಳಿದು
ಬುದ್ಧಿವಂತರನೆಲ್ಲ ಬಳಿಯಲ್ಲಿ ಕರೆದು
ನಾನಾ ತರದ ವಿದ್ಯಾ ಮಾಡಿದರು ಪಂದು

ಕೇಮಾಲ ಸಾಹೇಬ ಬಂದಾನೆಂದು
ಬಾವಾನ ತೋಟಕ್ಕೆ ಡೇರ‍್ಯಾವ ತಂದು
ಒಡಿಯಾರಿ ಪಾರಾಸ್ತಿ ಹೊಡಿಯರಿ ಮುಂದು
ತಡವು ಮಾಡಲಿಬ್ಯಾಡ ಜಲ್ದೀ ಹೋಗೆಂದು

ಮುತ್ತೀನ ಪಲ್ಲಕ್ಕಿ ನೌಬತ್ತು ಬಾಜಿ
ಕೊತ್ತಾಲ ಹಿಡಿದಾರು ಉತ್ತಮ ತೇಜಿ
ನಿತ್ಯಾಮಾಡುತ ನಾವು ಗುರುವೀನ ಪೂಜಿ
ಸಗರ ಸಾವಿರ ಹಳ್ಳಿ ರೈತರು ರಾಜಿ

ಸಾಹೇಬನ ಬೆಟ್ಟಿಗಿ ಹೋಗೋ ವಿಸ್ತಾರ
ಎದ್ದು ಬಡಿತಾದ ಆನಿ ಝೂಲಾ ಜರತಾರಾ
ಕಬ್ಬಿಣ ಹೊತ್ತಾರ ಹಳೆ ಮಂದಿ ಪೂರಾ
ಹಾರ‍್ಯಾರಿ ಬಿಳುತಾದ ಮರ್ದ ಸುರಪುರಿ

ಹೇ ದುಂದುಮ್ಮೆ ಎಂದೆಂದು ಪಾಡಿರಿ ಜಾಣರೆ......

ನವಾಬು ಸುಲೆಮಾನಷಾ ಇಬ್ಬರೂ ಕೂಡಿ
ಕೂತ ಜಾಗದಲ್ಲಿ ಏಕಾಂತ ಮಾಡಿ
ಲಚಮನ ಸಿಂಗನು ಬರುವುದು ನೋಡಿ
ದೊರೆಗ್ಹೋಗಿ ಹೇಳ್ತಾರ ಧೈರ್ಯವ ಮಾಡಿ
ಬಡೇ ಸಾಹೇಬನ ಹುಕುಮು ತಂದು
ದೊರೆಯ ಕೈಯೊಳಗ ಕೊಟ್ಟಾರ ಮುಂದು
ಇದರ ಉತ್ತರ ನೀವು ಜಲ್ದಿ ಹೇಳೆಂದು
ಹೇಳಿದ್ಹಾಂಗ ಬರೆದು ಹಾಕತೀವೆಂದು

ಪೋಲೀಸು ಕೆಲಸವು ನಮಗೆ ಇರಲೆಂದು
ಇದ್ದ ಹತಿಯಾರಗಳನ್ನು ತಂದಿಡರಿ ಮುಂದು
ಮುಲಿಕಿಯ ರೊಕ್ಕ ಎತ್ತುತ್ತೇವೆಂದು
ಹುಕುಮು ನಡಸ್ತೀವಿ ಕೇಳೊ ನಮದೊಂದು

ಪೋಲೀಸು ಕೆಲಸವು ನಾವಿಡೊಣೆಲ್ಲ
ಹತಿಯಾರ ಸಾಮಾನು ನಿಮಗೆ ಕೊಡೊಣೆಲ್ಲ
ಅದರ ಕಾನೂನನು ಕಾರ್ಬಾರಿ ಬಲ್ಲ
ಹೀಗಂತು ಸಾಹೇಬರಿಗೆ ಆಡಿದರು ಎಲ್ಲ

ಕಾಟಕ ಮಂದೀನ ಅಗಸಿಗೆ ಹಾಕಿ
ಅಗಸಿ ಪಾರ‍್ಯಾದಲ್ಲಿ ಇರಬೇಕು ಜ್ವಾಕಿ
ಮೊಸರಿನ ಗಡಿಗ್ಯಾಗ ರುಕ್ಕ ಬರೆದ್ಹಾಕಿ
ರುಕ್ಕ ಹೊಯ್ಯಾರಂಡಿ ಆಗ್ಯಾಳೊ ಪುಕ್ಕಿ

ಬೇಡರಿಗೆ ಹಾಕ್ಯಾರ ಸೀಬರುಬಂಡ್ಯಗಸಿ
ಡೇರ‍್ಯಾ ಬಿಟ್ಟು ದೂರ ಗುಂಡ ಹಾರಸಿ
ಡೇರ‍್ಯಾದ ಹಗ್ಗಗಳು ಆಗ್ಯಾವ ಫಾಸಿ
ಬೇಡರು ಮಾಡಿದರು ತಿಳಿಲಿಲ್ಲಾ ಫಾಸಿ

ಆದಿತ್ವಾರುದಯಕ್ಕೆ ಹಾರೀತು ಗುಂಡು
ಕೇಳಿದಾರೋ ಇಲ್ಲೊ ಸಾಹೇಬರ ಬಂಡು
ಹಿಂದಕ್ಕೆ ನಡೆದಾರು ಡೇರೆ ಸುಟ್ಟುಕೊಂಡು
ಕೈಸೆರೆ ಆಗ್ಯಾವು ಚಕಡಿ ಮದ್ದುಗುಂಡು
ಕಂಪೂನಿ ಲಷ್ಕರು ದಿಲ್ಗೀರಾಯ್ತು
ಹೋಗೋದಕ್ಕೆ ಹೊತ್ತು ರಾತ್ರಿ ಬಹಳಾಯ್ತು,
ಕೇಮಾಲ ಸಾಹೇಬಗ ಕೋಪ ಬಂದಿತ್ತು
ದಂಡ್ಹೋಗಿ ನಿಂಗದಳ್ಳಿ ಹತ್ತಿರಿಳಿದಿತ್ತು

ಹೇ ದುಂದುಮ್ಮೆ ಎಂದೆಂದು ಪಾಡಿರಿ ಜಾಣರೆ......

ಯಾಕೆ ಬಂದೆವು ನಾವು ಬೇಡರ ತಳ್ಳಿ
ದಂಡ್ಹೋಗಿ ಇಳಿದಿತ್ತು ಅದು ನಿಂಗದಳ್ಳಿ,
ಸುತ್ತ ಮುತ್ತಾ ಹಾಳು ಮಾಡಿದರು ಹಳ್ಳಿ
ತೋಪನ್ನು ಹಚ್ಚಿದರು ವೆಂಕಟಾಪುರ ಕಳ್ಳಿ

ನಿನ್ನ ಪಾದಕ ಬಂದೆ ಕೊಟ್ಟೂರು ಬಸವ
ಊರ ಸ್ವಾಧೀನ ಮಾಡೋ ನಾ ನಿನ್ನ ಶಿಸುವ
ಇಂಥ ಅರಸರಿಗೆಲ್ಲ ಬಳಸುವೆನು ಕಸವ
ನಿತ್ಯ ಪೂಜೆಗೆ ನಿನಗೆ ಮಲ್ಲಗಿ ತುಸುವ

ಕೊಟ್ಟೂರು ಬಸವಗೆ ತಾ ಬೇಡಿಕೊಂಡ
ಸುರಪುರ ಸ್ವಾಧೀನ ನನಗೆ ಮಾಡೆಂದ
ಮಿತಿಯ ಇಲ್ಲದ ಕಾಯಿ ಹೊಡೆಸುವೆನೆಂದ
ಕೇಮಲ ಸಾಹೇಬ ಮನಸಿನೊಳಗಂದ
ಸಿಟ್ಟಿಗೇರಿ ಸಾಹೇಬ ಬಟ್ಟ ಕಚಿಕೊಂಡು
ಹಚ್ಚಿದಾನೋ ತೋಪ "ಬುರ್ಜ" ನೋಡಿಕೊಂಡು,



ಕದನ ಹತ್ತಿತು ಬೇಗ ಇದು ಏನು ಬಂಡು
ಹೊರಬಿದ್ದು ಹೋಗುತದ ಸುರಪುರ ದಂಡು

ಹೇ ದುಂದುಮ್ಮೆ ಎಂದೆಂದು ಹಾಡಿರಿ ಜಾಣರೆ......
ಎದುರು ದಂಡಿಗೆ ತಾವು ತೋಪುಗಳ ಹಚ್ಚಿ
ಬಹಾದ್ದೂರ ಮೆಟ್ಟಿದ ಬಂಗಾರದ ಮೊಚ್ಚಿ
ರಣ ಶೂರರಾಯರು ತೇಜೀಗಳುಚ್ಚಿ
ಕಡದವರಿಗೆ ಕೊಡುವೆನು ಕಂಠಿಸರ ಉಚ್ಚಿ

ಜೋಕಿನ ಸಾಹೇಬ ಶ್ರಮದಲ್ಲಿ ನಿಂತಾ
ಊರ ತೊಗಬೇಕು ನಮದೊಂದು ಭ್ರಾಂತ;
ಒಂದೇಟಿಗೆ ಸತ್ತಾನೋ ಸರದಾರ ಇಂಥ
ಸುತ್ತ ದಾರಿಗಳು ಗಂಡಿಜಾಗಂತ

ತಲೆಯ ಟೊಪ್ಪಿಗೆ ಎರಡು ಕೈಯಲ್ಲಿ ಹಿಡಿದು
ದೊರೆ ಬಹರಿ ಬಹದ್ದೂರಿಗೆ ಎದುರಾಗಿ ನಡೆದು,
ಮುಂದಿಟ್ಟು 'ಪುರ್ನಿಯ ಸಲಾಮು' ಹೊಡೆದು
ದೊರೆ ನೋಡಿ ದಾಳಿ ಬಂತೆಂದು ನುಡಿದು

ಹೇ ದುಂದುಮ್ಮೆ ಎಂದೆಂದು ಹಾಡಿರಿ ಜಾಣರೆ.....

ಕಾಣುತಲೆ ರೋಹಿಲರಿಗೆ ಚಂದ್ರಾರ ಕೊಟ್ಟ
ಸಾಹೇಬರ ಬಿಟ್ಟರ ಕುಲದಲ್ಲಿ ಬಟ್ಟಾ
ತಲೆಯ ಕೊಯ್ಯಿರಂತೆ ಅಪ್ಪಣೆಯ ಕೊಟ್ಟ
ಧೈರ್ಯ ಸಾಲದೆ ಕುಂತಜಾಗ ತಾ ಬಿಟ್ಟ
ಹಳಿ ಮಂದಿ ಎಲ್ಲಾರು ನಿಂತವರು ನೋಡಿ
ತೆಳಿಯಾಕ ಇಳಿದಾರ ಪ್ರಾಣೆಗಳ ಜೋಡಿ

ಒತ್ತಟ್ಟಿ ಆಯಿತು ದಂಡ ಹಿಂದಕ್ಕೆ ನೋಡಿ
ಕವಲು ಕೊಟ್ಟರು ಸರ್ವರೆಲ್ಲರು ಕೂಡಿ

ಅಷ್ಟರೊಳಗೆ ತಾನು ಭೀಮರಾಯ ಬಂದು
ಇನ್ನು ಈ ಊರೊಳಗೆ ಇರಬಾರದೆಂದು,
ಶಹರಕ್ಕೆ ನಾವು ಹೋಗೋಣ ಮುಂದು
ಹುಜೂರನ ಭೆಟ್ಟಿಯ ಮಾಡಿಸುತ್ತೇನೆಂದು

ರಾಜ ಸಾಹೇಬರಲ್ಲಿ ರಾಮಣ್ಣ ಬಂದು
ಶಹರದ ದಾರಿ ನೀವು ಹಿಡಿಯಿರಿ ಮುಂದು
ಬಳಿಯಲ್ಲಿದ್ದ ವಸ್ತು ನನಗೆ ತಾರೆಂದು
ನಾನು ಮನೆಗೆ ಹೋಗಿ ಬರುತೀನಿ ಎಂದು

ಹೇ ದುಂದುಮ್ಮೆ ಎಂದೆಂದು ಪಾಡಿರಿ ಜಾಣರೆ......

ನಾಡ ಹುಟ್ಟಿದ ಮ್ಯಾಲೆ ನೋಡಿಲ್ಲಾ ಇಂಥಾ
ದಾವ ಸೂಳೆಮಗನು ಮಾಡ್ಯಾನೋ ಭ್ರಾಂತಾ;
ದೊರೆ ಭೈರಿ ಬಹಾದ್ದೂರ ಭ್ರಾಂತಿಯಾಗಿ ಕುಳಿತ
ಅವ್ವ ಈಶ್ವರಮ್ಮನ ವರವೀರ ಪುತ್ರ

ಗೋಪಾಲ ಸ್ವಾಮಿಯ ಗುಡಿಗೆ ತಾ ಬಂದ
ಮನದಿ ಎನ್ನ ಮೇಲೆ ದಯವಿರಲೆಂದ
ಇಂದಿಗೆ ಸುರಪುರ ಎರವಾಯಿತೆಂದ
ಶಹರದ ದಾರೀ ಹಿಡದಾನ ಮುಂದ

ಬೆಳತನಕ ಸಾಹೇಬರು ಮಾಡಿಲ್ಲ ನಿದ್ದಿ
ದಂಡೀಗಿ ಎದುರಾಗಿ ಹೋಯಿತು ಸುದ್ದಿ,
ಊರೊಳಗೆ ಯಾರಿಲ್ಲ ಮೇಲಕ್ಕೆ ಬಾ ಬುದ್ಧಿ



ಕೇಮಲಸಾಹೇಬ ಪುಂಡಾನೆ ಸಿದ್ಧಿ
ಮೇಲಕ್ಕೆ ಬಾರಂತಿ ತಿಳಿವಲ್ದು ಘಾಸಿ
ಮೇಲಕ್ಕೆ ಬಂದರೆ ಜೀವ ಆದಿತ್ತೋ ಘಾಸಿ
ಹನ್ನೆರಡು ಸಾವಿರಮಂದಿ ತಿದ್ದಿತ್ತೊ ಮೀಸಿ
ಉದಯ ಹೊಂಡದರಾಗ ಹೋಯ್ತೆಲ್ಲ ಆಶಿ

ಹೇ ದುಂದುಮ್ಮೆ ಎಂದೆಂದು ಪಾಡಿರಿ ಜಾಣರೆ......

ತೈಬಾಲಿ ತಮ್ಮ ಮೊಹಮ್ಮದಲಿ ಊರೊಳಗ ಇದ್ದು
ಕೇಮಾಲಸಾಹೇಬನ ಪಾದಕ್ಕೆ ಬಿದ್ದು;
ಸಾಹೇಬನ ಮುಂದೆ ಹೇಳ್ತಾನ ಸುದ್ದಿ ಆದದ್ದು,
ಊರೊಳಗೆ ಯಾರಿಲ್ಲ ಹೋಗ್ಯಾರ ಎದ್ದು

ಎಂಥ ಬಂಟರ ಜಾಗ ಉಪಾಯದಿಂದ್ಹೊಯ್ತೊ
ಹನ್ನೆರಡು ಸಾವಿರ ಹಳೆಮಂದಿ ಏನಾಯ್ತೊ
ಸೋಮಾರದುದಯಕ್ಕೆ ಎದುರೀಗ ಆಯ್ತು
ಬುದ್ಧಿವಂತರಿಲ್ಲದಚ್ಚು ಮುರದ್ಹೋಯ್ತು

ಕೇಮಲ ಸಾಹೇಬ ಮೇಲಕ್ಕೆ ಬಂದಾ
ದಿಬರಿ ಮೇಲಕೆ ನಿಂತು ದುರುಮುಂಜಿ ನೋಡಿದ
ಇಂಥ ಠಾಣೆಗಳು ಸರಿಗಾಣೆನೆಂದಾ
ಅಪ್ಪಣೆ ಕೊಟ್ಟಾನು ಸುಲಗಿ ಮಾಡೆಂದು

ಬಂದ ಬರುತಲಿ ಸಾಹೇಬ ದರಬಾರ ಹೊಕ್ಕ
ಎಲ್ಲಿ ನೋಡಿದರಲ್ಲಿ ಬೆಳ್ಳಿ ಬಂಗಾರ ಬದುಕ
ಏನು ಸೋಜಿಗವೆಂದು ಕೈ ಬಡಿದು ನಕ್ಕ
ರಾಯಪ್ಪ ರಾಚಪ್ಪ ಕೈಯೊಳಗೆ ಸಿಕ್ಕ
ಹೇ ದುಂದುಮೇ ಎಂದೆಂದು ಪಾಡಿರೆ ಜಾಣರೆ.......

'ಗೋರ ಸಾಹೇಬ'ರೆಲ್ಲ ಬಂದು ಕೂಡಿದರು
ಏನೇನು ಬದುಕೆಂದು ತಾರೀಪ ಮಾಡಿದರು
ಚಕಡಿ ಹೇರಿತಂದು ಮಾತಾನಾಡಿದರು
ತುಂಬಿ ಭರತಿ ಮಾಡಿ ಎತ್ತ ಹೂಡಿದರು

ಆನೆ ಕುದುರೆ ಒಂಟೆ ಹರಾಜು ಮಾಡಿದರು
ಮಿಗಿಲಾದ ಬಂಗಾರ ವಸ್ತು ನೋಡಿದರು,
ಚೆಲುವಾದ ಸಾಮಾನು ಒಂಟಿ ಮ್ಯಾಲ್ಹೇರಿದರು
ಕೇಮಲ ಸಾಹೇಬನ ಕವಲ ಸಾರಿದರು

ಮರುದಿವಸ ಉದಯಕ್ಕೆ ಚಕಡಿಗಳು ಸಾಗಿ
ಊರಿಗಿರಲಿ ಅಂತ ಹೇಳಿದರು ಕೂಗಿ
ದಿವಸ ಪಾಡಿಲ್ಲ ಶಿವರಾತ್ರಿ ಭೋಗಿ
ಸುಲಗಿ ಸೇರಿತು ಲಿಂಗಸೂರಿಗೆ ಹೋಗಿ
ಮೂರನೆ ದಿವಸಕ್ಕೆ ದೊರೆ ಶಹರಕ್ಕ ಹೋದ
ವನಪರ್ತಿ ರಾಜನ ಭೆಟ್ಟಿಯು ಆದ;
ಪೈಗಂಬರ್ ಬಜಾರದೊಳಗೆ ಇಳಿಲಿಕ್ಕೆ ಹೋದ
ಮುಂದಿನ ಸಂಗತಿ ತಿಳಿಲಾರದೆ ಹೋದ

ಹೇ ದುಂದುಮ್ಮೆ ಎಂದೆಂದು ಪಾಡಿರಿ ಜಾಣರೆ......

ವನಪರ್ತಿರಾಜ ಮಾಡಿದನು ಪಂದು
ದೇವಡಿಯಲ್ಲಿ 'ಪಹರೆ' ಯಾರಿದ್ದೀರೆಂದು
ಸುರಪುರದ ಅರಸನು ಬಂದಾನೆಂದು
ಸಾಲಾರ ಜಂಗನಿಗೆ ತೀವ್ರ ಹೇಳೆಂದು
ಸಾಲಾರ ಜಂಗ, ದೊರೆ ಬಂದ ಸುದ್ದಿಯ ಕೇಳಿ
ಸೋಲ್ಜರಿಗೆ ಜಲದಿ ಹೋಗೆಂದು ಹೇಳಿ,



ಸುರಪುರದ ಅರಸನು ಎಲ್ಯಾನೆಂದು ಕೇಳಿ
ಅಂಗಡಿ ಮುಂದು ನೋಡ ಆದಿತ್ತು ಹೋಳಿ

ಮಂಗಳವಾರುದಯಕ್ಕೆ ದೊರೆ ಬಿಟ್ಟ ಊರ
ಭೈರಿ ಬಹಾದ್ದೂರ್ಗೊಕ್ಕ ಗೋಲ್ಕುಂಡ ಶಹರ
ಮುಂದೆ ಹೇಳಿವಿ ನಾವು ಸರ್ದಾರನ ವಿಸ್ತಾರ
ಹಚ್ಚಿ ಬಂದಾನಿವನು ಅಂತರಂಗದ ಫೇರಾ

ದೊರೀನ ಸದರೀಗೆ ತಂದು ಮಾಡಿದರು ವಿಚಾರ
ದೊಡ್ಡ ಸರದಾರನ ತಲೆ ಹೊಡಿಸಿ ಬಂದೆಲ್ಲೊ ಜೋರ
ಎಂಥಾದ್ದು ಮಾಡಿದ್ದಿ ಕೆಟ್ಟ ಬೇಂಡಾರ
ಹೊಡೆಸಿ ಬಿಡುವೆನು ನಿನ್ನ ಜೀವದಿಂದ ಠಾರಾ

ನಾನು ಹೇಳುವೆನು ಕೇಳೊ ಸರಕಾರ
ಕೆಟ್ಟು ಬಂದೀನಿ ನಾನು ಬಿಟ್ಟು ಸುರಪೂರ
ಕಾರ್ಭಾರಿ ಮಂಡಲಿನಿ ಹಿಡಿತರಿಸು ಪೂರಾ
ಮೂರು ಕೋಟಿಯಲ್ಲಿ ಮಾಡೋ ವಿಚಾರ

ಮುಂದಾಗಿ ಲಡಾಯಿ ನೀ ಮಾಡಿರೆಂದು
ಸತ್ತು ಹೋದನು ದೊಡ್ಡ ಸರದಾರ ಮುಂದು
ಇದಕ್ಕೆ ಉತ್ತರ ನೀ ಜಲ್ದಿ ಹೇಳೆಂದು
ಕೋರ್ಟಿನ ಮಸಲತಿ ಮಾಡತೀವೆಂದು

ಮುಂದಾಗಿ ಲಡಾಯಿ ನಾನು ಮಾಡಿಲ್ಲ
ಕಾಟಗ ಮಂದಿ ಮಾತು ನಾನು ಕೇಳಲಿಲ್ಲ
ಲಡಾಯಿಗೆ ಅಪ್ಪಣೆ ನಾನು ಕೊಟ್ಟಿಲ್ಲ
ಆದಂತ ಸುದ್ದಿಯು ಭೀಮರಾಯ ಬಲ್ಲ

ಬಡೇಸಾಹೇಬ ತಾ ಕೇಳಿ ಸಂತೋಷವಾಗಿ
ಕೋರ್ಟಿನ ಮಸಲತಿ ಮಾಡಬೇಕಾಗಿ
ಟೇಲರ ಸಾಹೇಬ ಸುರಪುರಕ್ಕೆ ಹೋಗಿ
ಕಾರ್ಭಾರಿ ಜನರನ್ನು ಕಳಸರಿ ಬೇಗ

ಹೇ ದುಂದುಮ್ಮೆ ಎಂದೆಂದು ಪಾಡಿರಿ ಜಾಣರೆ.....

ಟೇಲರ ಸಾಹೇಬ ದೊರೆ ಬಳಿಗೆ ಬಂದು
ನಾನು ಸುರಪುರಕ್ಕೆ ಹೋಗುವೆನೆಂದು
ಕಾರ್ಭಾರಿ ಜನರನ್ನು ಕಳಿಸುವೆನೆಂದು
ಜವಾಬು ಕೊಡು ನೀನು ಬಹು ಧೈರ್ಯದಿಂದ

ಟೇಲರ ಸಾಹೇಬ ಸುರಪುರಕ್ಕೆ ಬಂದಾ
ಕಾರ್ಭಾರಿ ಜನರನ್ನು ಶಹರಕ್ಕೆ ನಡಿರೆಂದ
ಕೋರ್ಟಿನ ಜವಾಬು ಮಾಡೀರಿ ಮುಂದಾ
ಜಲ್ದಿ ನಿಮ್ಮ ದೊರಿನ್ನ ಉಳಿಸಬೇಕೆಂದಾ

ಕಾರ್ಭಾರಿ ಮಂಡಳಿಯು ಶಹರಕ್ಕೆ ಹೊರಟು
ಕುದುರೀಗಿ ಹೇರ‍್ಯಾರ ಹಳಿ ಹಳಿ ತಟ್ಟು
ಶಲ್ಲ್ಯಾ ಮುಂಡಾಸನೆಲ್ಲ ಒತ್ತಿಯ ಇಟ್ಟು
ಹೋಗಿ ನಿಂತಾರ ಬಡವೇಷವ ತೊಟ್ಟು

ಸಾಹೇಬರು ಮಾಡಿದರು ಕೆಲಸವು ಪಕ್ಕಾ
ವ್ಯರ್ಥ ದೊರೆ ಹೋಗಿ ಕೈಸೆರೆ ಸಿಕ್ಕಾ
ಭೀಮರಾಯ ಮಾಡಿದನು ಕೆಲಸವು ಪಕ್ಕಾ
ರಾಮಣ್ಣ ಬರಲೆಂದು ಹೇಳ್ಯಾನ ಲೆಕ್ಕಾ
ಹೇ ದುಂದುಮ್ಮೆ ಎಂದೆಂದು ಪಾಡಿರಿ ಜಾಣರೆ.....



ಭೀಮರಾಯ ಆಲೋಚನೆ ಮಾಡಿದನು ಬಂದು
ಇನ್ನು ಈ ಮಾತು ನಮಗೆ ಬಂತೆಂದು
ಹೊರಗೆ ಹೇಳುತಾರ ಮಾತು ಮತ್ತೊಂದು
ಹೆದರಬೇಡಿರಿ ಬುದ್ಧಿ ಕರೆದ್ಹೋಯ್ತೆವೆಂದು

ಬುದ್ಧಿ ಹೇಳುವಂತ ತಾಯಿ ತಂದಿ ಇಲ್ಲ
ಕ್ಷುದ್ರ ಮನುಜರ ಮಾತು ನೀ ಬೆಳಸಿದಲ್ಲ
ಹಿರಿಯ ಕಿರಿಯರ ಮಾತು ನೀ ಕೇಳಲಿಲ್ಲ
ಸುರಪುರ ಗೋಪಾಲ ತಾ ಮುನಿದನಲ್ಲ

ಭೀಮರಾಯನ ಮಾತು ದೊರೆ ತಾನು ಕೇಳಿ
ಸಾಹೇಬರ ಮುಂದ್ಹೋಗಿ ಬದಲು ಮಾತು ಹೇಳಿ
ಕೇಳುತಲೆ ಸಾಹೇಬರು ಕೋಪಾವು ತಾಳಿ
ಚೆನ್ನಪಟ್ಟಣ ದಾಟಿ ಒಯ್ಯಿರಂತೆ ಹೇಳಿ

ದೊರೆಯನ್ನು ಭೀಮರಾಯ ಕೈಸೆರೆ ಕೊಟ್ಟ
ಮನಸಿನೊಳಗ ಇದ್ದ ಚಿಂತೆಯ ಬಿಟ್ಟ
ನಕ್ಕಂತ ಸುರಪುರದ ಹಾದ್ಹಿಡಿದು ಹೊಂಟ
ದೌಲತ್ತು ಇವ ಹಾಳು ಮಾಡಿದನು ತೊಂಟ

ಹೇ ದುಂದುಮ್ಮೆ ಎಂದೆಂದು ಪಾಡಿರಿ ಜಾಣರೆ......

ವೆಂಕಟಪ್ಪ ನಾಯ್ಕಂದು ಭೀತಿ ಬಾಳಿತ್ತು
ಸುತ್ತ ದೇಶದ ಜನ ನಡುಗೂತಲಿತ್ತು
ಹಳೆ ಮಂದಿ ಉಜರತ್ತು ಭರಪೂರ ಇತ್ತು
ವೆಂಕಟರಮಣನ ದಯವು ತಪ್ಪಿತ್ತು

**ವೆಂಕಟಪ್ಪನಾಯಕ "ಮೃಗಜಾತಿ ಶೂರ"**
**ಕೇಳೆ ಇದ್ದಿಲ್ಲ ಇಂಥ ಸರದಾರ**
**ಒದಗಿ ಬಂದಿತು ಬೇಗ ಕಂಪನಿ ಸರಕಾರ**
**ಸ್ಥಿರವಾಗಿ ಇರಲಿಲ್ಲ ಮುಂದಿನ ವಿಸ್ತಾರ**

**ಫಾಲ್ಗುಣ ಪ್ರತಿಪದ ಹುಡುಗರು ಕೂಡಿ**
**ಹತವಾದ ಕಾಮನ ಬೂದಿ ಚೆಲ್ಲ್ಯಾಡಿ**
**ಮಿತಿಯನಿಲ್ಲದ ಹೋಳಿಪದಗಳ ಹಾಡಿ,**
**ರತಿದೇವಿ ರಮಣನ ಬೂದಿ ಚೆಲ್ಲ್ಯಾಡಿ**

**ಆದಿ ಅಂತ್ಯ ಹಿಡಿದು ಪದಗಳ ಪಾಡಿ**
**ಬುದ್ಧಿವಂತರ ಮುಂದ ಕರ ಮುಗಿದು ಬೇಡಿ**
**ಪರೀಕ್ಷೆ ಮಾಡಿರಿ ದೈವ ಒಂದೊಂದು ನೋಡಿ**
**ತಪ್ಪು ಕ್ಷಮೆ ಮಾಡಿರಿ ಶಿಶುವಿನ ನೋಡಿ**

**ಹೇ ದುಂದುಮ್ಮೆ ಎಂದೆಂದು ಪಾಡಿರಿ ಜಾಣರೆ.....**

**ಭರದಿಂದ ಕರತಂದು ಇದು ಮಾಘಮಾಸ**
**ಭರದಿಂದ ಒದಗೀತು ಫಾಲ್ಗುಣ ಮಾಸ**
**ಬರೆದಂಥ ಪದಗಳು ಮನಕೆ ಉಲ್ಲಾಸ**
**ಧರೆಯೊಳು ವಾಗಣಗೇರಿ "ಗೋಪಾಲವಾಸ"**
**ಮಂಗಲಮಸ್ತು ಶ್ರೀ ಗೋಪಾಲನಿಗೆ**
**ಮಂಗಲಮಸ್ತು ಶ್ರೀದೇವಿಯರಿಗೆ**
**ಮಂಗಲಮ್ ನಮೋಸ್ತು ಕೋಶಲರಾಜನಿಗೆ**
**ಮಂಗಲಮಸ್ತು ರತಿಯ ರಮಣಗೆ**

**ಹೇ ದುಂದುಮೆ ಎಂದೆಂದು ಪಾಡಿರಿ ಜಾಣರೆ**
**ದುಂದುಮ್ಮೆ ಬಸವಂತನ ಹಬ್ಬ**



ಶ್ರೀ ಬಿ.ಲಕ್ಷ್ಮಣ ಭೀಮಪ್ಪ ಗುತ್ತೇದಾರ ಸುರಪುರ 'ದುಂದುಮೆ' ಹಾಡುಗಾರಿಕೆಯನ್ನು ಮುಂದುವರೆಸಿಕೊಂಡು ಹೋಗುತ್ತಿದ್ದಾರೆ.

### ಸುರಪುರದ ಅತ್ಯಂತ ಹಿರಿಯ 'ದುಂದುಮೆ' ಹಾಡುಗಾರರು

ದಿ.ಪಾರಪ್ಪ ಗುತ್ತೇದಾರ, ದಿ.ಲಿಂಗಣ್ಣ ಗುತ್ತೇದಾರ, ಶ್ರೀ ಲಕ್ಷ್ಮಣ ಗುತ್ತೇದಾರ, ದಿ.ತಿಮ್ಮಣ್ಣ ಗುತ್ತೇದಾರ, ಶ್ರೀ ದೊಡ್ಡನಿಂಗಪ್ಪ ಗುತ್ತೇದಾರ, ಶ್ರೀ ರಾಮಚಂದ್ರಪ್ಪ ಗುತ್ತೇದಾರ.

### ಈಗಿನ ಪೀಳಿಗೆಯ 'ದುಂದುಮೆ' ಹಾಡುಗಾರರು

ಬಿ.ಪಾರಪ್ಪ ಲಕ್ಷ್ಮಣ, ತಿಪ್ಪಣ್ಣ ಬಿ ಲಿಂಗಣ್ಣ, ಗುರುರಾಜ ಬಿ ಲಿಂಗಣ್ಣ, ರಾಜು ಬಿ ಲಿಂಗಣ್ಣ, ರವಿ ತಿಮ್ಮಣ್ಣ, ಪ್ರವೀಣ ಬಿ ಪಾರಪ್ಪ, ಪಾರಪ್ಪ ಯಂಕಪ್ಪ, ಯಂಕಪ್ಪ ನರಸಪ್ಪ, ಯಂಕಪ್ಪ ನರಸಪ್ಪ, ಯಂಕಪ್ಪ ಹೈಯ್ಯಾಳಪ್ಪ, ಯಂಕಪ್ಪ ಮಲ್ಲಪ್ಪ, ಅಭಿಷೇಕ ಭೀಮಣ್ಣ.

### ಸುರಪುರದ ವೀರ ಮಹಿಳೆ ರಾಣಿ ಈಶ್ವರಮ್ಮ

ಇಂಗ್ಲಿಷರ ದಮನಕಾರಿ ನೀತಿ, ಅತ್ಯಾಚಾರ, ಅನಾದರಗಳಿಂದ ಸಿಡಿದೆದ್ದು ಉತ್ತರ ಭಾರತ, ದಕ್ಷಿಣ ಭಾರತದ ರಾಜರು, ಕ್ರಾಂತಿಕಾರಿಗಳು, ಸೈನಿಕರು ಉಗ್ರರೂಪ ತಾಳಿದರು. ಲಾರ್ಡ್ ಡಾಲಹೌಸಿಯ ದುರುದ್ದೇಶದಿಂದ ಕೂಡಿದ ತಪ್ಪು ನೀತಿಗಳಿಂದ ರೊಚ್ಚಿಗೆದ್ದ ದೇಶದ ಜನರು ದಂಗೆ ಎದ್ದರು. ಝಾನ್ಸಿ, ಮೀರತ್, ದಿಲ್ಲಿ, ಕಾನ್ಪುರ, ಲಕ್ನೋಗಳಲ್ಲಿಯೂ ರಾಜಕೀಯ ದಂಗೆಗಳಾದವು. ನಾನಾಸಾಹೇಬ, ತಾತ್ಯಾಟೋಪಿ ಇವರು ಹುತಾತ್ಮರಾದರು. ೧೦–೫–೧೮೫೭ ರಂದು ಸ್ವಾತಂತ್ರ್ಯದ ಪ್ರಥಮ ಕಹಳೆ ಮೊಳಗಿತು.

ಸುರಪುರದ ವೀರ ಮಹಿಳೆಯರಲ್ಲಿ ರಾಣಿ ಈಶ್ವರಮ್ಮನಿಗೆ ಅಗ್ರಸ್ಥಾನವಿದೆ. ತನ್ನ ಒಳ್ಳೆಯತನದ ತೋರಿಕೆಯ ಬಿಂಬದಂತಿದ್ದ ಆಂಗ್ಲ ಅಧಿಕಾರಿ ಮೆಡೋಸ್ ಟೇಲರನನ್ನು ಎದುರಿಸಿದ ದಿಟ್ಟ ಮಹಿಳೆಯಾಗಿ ರಾಣಿ ಈಶ್ವರಮ್ಮ ಗೋಚರಿಸುತ್ತಾಳೆ. ರಾಣಿ ಈಶ್ವರಮ್ಮನ ಮಗ ನಾಲ್ವಡಿ ರಾಜಾ ವೆಂಕಟಪ್ಪ ನಾಯಕನ 'ಕೇರ್ ಟೇಕರ್' ಆಗಿ ಬಂದ 'ಟೇಲರ್'ನನ್ನು ಕಂಡರೇ ರಾಣಿಗೆ ಆಗಿ ಬರುತ್ತಿರಲಿಲ್ಲ. ನಮ್ಮ ಆಡಳಿತದ ನಡುವೆ ಮೂಗು ತೂರಿಸಲು ಈ ಆಂಗ್ಲರು ಯಾರು? ಈ ಟೇಲರ್ ಯಾರು? ಎಂಬ ಸಿಟ್ಟು ರಾಣಿಗಿತ್ತು.

ಅದಕ್ಕಾಗಿಯೇ ರಾಣಿ ಈಶ್ವರಮ್ಮ ತನ್ನ ಮಗನನ್ನು ಬ್ರಿಟಿಷರ ವಿರುದ್ಧ ಹೋರಾಡಲು ಸಜ್ಜುಗೊಳಿಸುತ್ತಾಳೆ. ಆಗಿನ ಘೋಷಾ ಪದ್ಧತಿ ಹಾಗೂ ಸುರಪುರ ಸಂಸ್ಥಾನ ಎದುರಿಸುತ್ತಿದ್ದ ಅನೇಕ ಸಮಸ್ಯೆಗಳ ಮಧ್ಯೆ ಕೂಡ ರಾಣಿ ದಿಟ್ಟತನದಿಂದ ವಿಭಿನ್ನಳಾಗಿ ನಿಲ್ಲುತ್ತಾಳೆ.

ಚೆನ್ನಬಸಪ್ಪ ಎಂಬ ನಿಷ್ಠಾವಂತನನ್ನು ತನ್ನ ಸಹಾಯಕನನ್ನಾಗಿ ತೆಗೆದುಕೊಂಡು ರಾಣಿ ಆಡಳಿತ ನಡೆಸುತ್ತಾಳೆ. ಈ ಬಗ್ಗೆ ಮೆಡೋಸ್ ಟೇಲರ್ ತನ್ನ 'The story of my life' ಎಂಬ ಪುಸ್ತಕದಲ್ಲಿ ರಾಣಿಯ ಬಗ್ಗೆ 'Conduct of Rani' (Page 233) ರಾಣಿಯ ನಡತೆಯ ಬಗ್ಗೆ ಕೆಟ್ಟದಾಗಿ ಬರೆಯುತ್ತಾನೆ.

'She was desolute to a degree in fact a very Messalina and hardly. Her infidelities were known to her husband and his family, but could not be checked'

ಇದು ರಾಣಿಗೆ ಘಾಸಿ ಉಂಟು ಮಾಡಿತು. ಆದರೂ ಆಕೆಯು ಸಂಸ್ಥಾನ ಮುನ್ನಡೆಯ ದೃಷ್ಟಿಯಿಂದ ಸಹಿಸಿಕೊಂಡಳು ಎಂದು ಇತಿಹಾಸಕಾರರು ಅಭಿಪ್ರಾಯ ಪಡುತ್ತಾರೆ.

ಸುರಪುರ ಸಂಸ್ಥಾನದಲ್ಲಿದ್ದ ೧೨೦೦೦ ಬೇಡ ಸೈನಿಕರು, ವನದುರ್ಗದ ಬೇಡಪಡೆ ಇವಳಿಗೆ ಬೆಂಗಾವಲಾಗಿ ನಿಲ್ಲುತ್ತಾರೆ. ಆಂಗ್ಲರ ಗ್ರಿಸ್ಲೆ ಹಾಗೂ ಹೈದ್ರಾಬಾದಿನ ನಿಜಾಮರು ಪಿಡ್ಡನಾಯಕನನ್ನು ಪಟ್ಟಕ್ಕೇರಿಸಬೇಕೆಂಬ ಆಶೆ ಉಳ್ಳವರಾಗಿದ್ದರು. ಅದರಲ್ಲಿ ರಾಣಿಯನ್ನು ಮಣಿಸುವ ಕುತಂತ್ರವೂ ಸೇರಿತ್ತು. ಪಿಡ್ಡನಾಯಕ ಕೈಗೊಂಬೆಯಾದರೇ ಸುರಪುರ ಸಂಸ್ಥಾನ ತಮ್ಮ ಸುಪರ್ದಿಯಲ್ಲಿ ಬರುವುದೆಂಬ ಕೆಟ್ಟ ಆಲೋಚನೆ ಇತ್ತು. ಪಿಡ್ಡನಾಯಕನನ್ನು ಸುರಪುರದ 'ದಿವಾನ್' ಎಂದು ಬ್ರಿಟಿಷರು ಘೋಷಿಸಿದರು.

ಇದರಿಂದ ರಾಣಿ ಕ್ರುದ್ಧಳಾದಳು. ಅಸಮರ್ಥನ ಕೈಗೆ ಅಧಿಕಾರ ಕೊಡುವುದರ ಮೂಲಕ ಆಂಗ್ಲರು ಇಡೀ ಅಧಿಕಾರವನ್ನು ತಮ್ಮ ಸ್ವಾಧೀನ ಪಡಿಸಿಕೊಳ್ಳಲು ಹಾತೋರೆಯುತ್ತಿದ್ದಾರೆ ಎಂದು ರಾಣಿಗೆ ತಿಳಿಯಿತು. ಅದಕ್ಕಾಗಿ ರಾಣಿ ರೋಹಿಲರನ್ನು ತನ್ನ ಸೈನ್ಯಕ್ಕೆ ಸೇರಿಸಿಕೊಂಡು ಮತ್ತಷ್ಟು ಬಲಿಷ್ಠ ಮಾಡಿದಳು ತನ್ನ ಸೈನ್ಯವನ್ನು. ಇದರಿಂದ ಹೆದರಿದ ಆಂಗ್ಲರು ರಾಣಿ ಓಲೈಕೆಗೆ ನಿಂತರು.



ಕೊನೆಗೂ ಪಿಡ್ಡನಾಯಕನನ್ನು 'ದಿವಾನ'ನನ್ನಾಗಿ ಮಾಡುವಲ್ಲಿ ಬ್ರಿಟೀಷರು ಯಶ ಕಂಡರು. ನಂತರ ದಿನಗಳೆದಂತೆ ದಿವಾನರಿಗೆ ರಾಣಿ ಅಧಿಕಾರ ಹಸ್ತಾಂತರಿಸಬೇಕೆಂದು ಆಂಗ್ಲರ ರೆಸಿಡೆಂಟನು ಆದೇಶಿಸಿದನು. ಇದನ್ನು ರಾಣಿಯೂ ಧಿಕ್ಕರಿಸಿದಳು.

ಗ್ರಿಸ್ಲೆಯು ಕುತಂತ್ರದಿಂದ, ಹಿಂಬಾಗಿಲಿನಿಂದ ಅಧಿಕಾರದ ಸಮೀಪ ಬಂದು, ರಾಣಿಗೆ ನಾನಾ ತೊಂದರೆ ನೀಡಿದನು. ರಾಣಿಯ ನಿಷ್ಠಾವಂತ ಸಹಾಯಕ ಚೆನ್ನಬಸಪ್ಪನನ್ನು ಅಧಿಕಾರದಿಂದ ದೂರವಿಡಲು, ಸೈನ್ಯದಲ್ಲಿದ್ದ ಅರಬ್ ರೋಹಿಲರನ್ನು ತೆಗೆಯಲು, ಹಾಗೂ ನಿಜಾಮನಿಗೆ ಕೊಡಬೇಕಿರುವ ಹಣ ಕೂಡಲೇ ತಲುಪಿಸಬೇಕೆಂದು ಗ್ರಿಸ್ಲೆ ಸೂಚಿಸಿದನು. ರಾಣಿಯು ಈ ಬಗ್ಗೆ ಮನವರಿಕೆ ಮಾಡಿಕೊಡಲು ನೋಡಿದರೂ ಕೂಡ ಗ್ರಿಸ್ಲೆ ಸ್ಪಂದಿಸಲಿಲ್ಲ. ಸುರಪುರವನ್ನೇ ಆಹುತಿ ತೆಗೆದುಕೊಳ್ಳಬೇಕೆಂಬ, ಆಪೋಶನಗೈಯ್ಯುವ ಕುತಂತ್ರಿಗೆ, ರಾಣಿಯನ್ನು ಮಣಿಸುವುದು, ಆಕೆಯನ್ನು ಅಧಿಕಾರದಿಂದ ವಂಚಿತಳನ್ನಾಗಿಸುವುದೇ ಗ್ರಿಸ್ಲೆಯ ಉದ್ದೇಶವಾಗಿತ್ತು. ಆದರೆ ರಾಣಿಯ ಸಂಘಟನಾ ಶಕ್ತಿಯ ಮುಂದೆ ಗ್ರಿಸ್ಲೆಯ ಆಟ ನಡೆಯಲಿಲ್ಲ. ಅವನು ಕೊನೆಗೆ ರಾಣಿಯ ಧೀಶಕ್ತಿಗೆ ಸೋತು ರಾಜೀನಾಮೆ ಕೊಟ್ಟು ಹೊರಟು ಹೋದನು.

ನಂತರ ಬಂದ ಮೆಡೋಸ್ ಟೇಲರ್ ಉಪಾಯವಾಗಿ ಇಲ್ಲಿನವರಂತೆಯೇ ಮಾತಾಡಿ, ರಾಜಕುಮಾರನಿಗೆ ಒಳ್ಳೆಯ ಶಿಕ್ಷಣ ನೀಡಿ, ಎಲ್ಲರ ಪ್ರೀತಿ ಗಳಿಸಿದಂತೆ ಮಾಡಿ, 'ಸುರಪುರದ ಸಿಂಹ'ವನ್ನು ಬೋನಿನಲ್ಲಿ ಕೂಡಿಡಲು ಪ್ರಯತ್ನಿಸಿದನು. ರಾಣಿ ಈಶ್ವರಮ್ಮಳಿಗೆ ಉಪಾಯವಾಗಿ ನಾನಾ ತೊಂದರೆ ನೀಡಿದ. ಆದರೆ ಬೇಡರ ಪಡೆ ಮುಂದೆ ಟೇಲರನ ಆಟ ನಡೆಯಲಿಲ್ಲ. ಕೊನೆಗೆ ಪುಟ್ಟ ರಾಜ ರಾಜಾ ವೆಂಕಟಪ್ಪ ನಾಯಕನಿಗೆ ಒಲಿಸಿಕೊಂಡು, ಕುಟಿಲ ನೀತಿಯಿಂದ ತನ್ನ ಕೆಲಸ ಸಾಧಿಸಿಕೊಂಡ. ಅನಾರೋಗ್ಯ ಪೀಡಿತಳಾದ ರಾಣಿಯು ತಿರುಪತಿಗೆ ಹೋಗುವಾಗ ಕೊನೆಗೆ ಲಿಂಗಸುಗೂರ ಹತ್ತಿರ ೧೮೫೩ ಮೇ ೨೭ ರಂದು ಅಸುನೀಗುತ್ತಾಳೆ.

ರಾಣಿ ಈಶ್ವರಮ್ಮನ ಹೋರಾಟ ಆಂಗ್ಲರನ್ನು ದಂಗು ಬಡಿಸಿತ್ತು. ಇವಳ ಹೋರಾಟದ ಬಗ್ಗೆ ಇತಿಹಾಸದಲ್ಲಿ ಸರಿಯಾಗಿ ದಾಖಲಾಗಿಲ್ಲ. ಕಿತ್ತೂರ ರಾಣಿ ಚೆನ್ನಮ್ಮ, ಝಾನ್ಸಿ ರಾಣಿ ಲಕ್ಷ್ಮೀದೇವಿಯರಿಗೆ ಸಿಕ್ಕಷ್ಟು ಪ್ರಾಧಾನ್ಯತೆ 'ರಾಣಿ

ಈಶ್ವರಮ್ಮನಿಗೆ' ಸಿಗಲೇ ಇಲ್ಲ ಆದರೆ ಜಾನಪದರು ರಾಣಿಯ ಬಗ್ಗೆ ಹಾಡಿದ ಲಾವಣಿಗಳು ಅವಳನ್ನು ಚರಿತ್ರೆಯಲ್ಲಿ ಅಜರಾಮರವನ್ನಾಗಿಸಿವೆ. ರಾಣಿ ಈಶ್ವರಮ್ಮ 'ಸ್ವಾಭಿಮಾನದ ಗಣಿ' ಎಂದು ವರ್ಣಿಸಿದ್ದಾರೆ. ನಾಲ್ವಡಿ ರಾಜಾ ವೆಂಕಟಪ್ಪ ನಾಯಕನ್ನು ಲಾವಣಿಯಲ್ಲಿ, 'ಅವ್ವ ಈಶ್ವರಮ್ಮನ ವರವೀರ ಪುತ್ರ' ಎಂದು ಬಣ್ಣಿಸಿದ್ದಾರೆ.

ರಾಣಿ ಈಶ್ವರಮ್ಮನ ಬಗ್ಗೆ ಲಾವಣಿಕಾರರು–

**'ರಾಣಿ ಈಶ್ವರಮ್ಮ ನಾಡಿಗೆ ತಕ್ಕವಳು**
**ನಡುಕ ಹುಟ್ಟಿಸಿದಳೋ! ಟೇಲರ್ ಸಾಯ್ಯಾಗ**
**ಬೈಗುಳದ ಸುರಿಮಳೆ ಸುರಿಸಿದಳೋ'**

**'ಚಿನ್ನದ ಗುಣದವಳು, ದಿಟ್ಟ ನಿಲುವಿನವಳು**
**ಭಾಷೆಗೆ ತಪ್ಪದವಳು! ಈಶ್ವರಮ್ಮ**
**ಮಗನ ರಕ್ಷಣೆಗೆ ನಿಂತವಳು'**
**'ಉಪ್ಪರಿಗೆ ಮನೆ ಬೇಕು, ಕೊಪ್ಪರಿಗೆ ಹಣ ಬೇಕು**
**ರಾಣಿ ಈಶ್ವರಮ್ಮನಂಥ ಸೊಸೆ ಬೇಕು! ನಮ್ಮನೆಗೆ**
**ಸುರಪುರ ರಾಜನಂಥ ಮಗ ಬೇಕು'**

ಹೀಗೆ ಸುರಪುರ ಸಂಸ್ಥಾನದ ಅರಸರ ಕುರಿತು ಹಾಡುತ್ತಾರೆ. ಈ ಸಂಸ್ಥಾನದ ಉಳಿದ ದೊರೆಗಳ ಬಗ್ಗೆ ರಾಣಿಯರ ಬಗ್ಗೆ ಜನಪದರು ಲಾವಣಿ ಕಟ್ಟಿ ಹಾಡಲಿಲ್ಲ. ರಾಣಿ ಈಶ್ವರಮ್ಮ ಹಾಗೂ ನಾಲ್ವಡಿ ರಾಜಾ ವೆಂಕಟಪ್ಪ ನಾಯಕರ ಕುರಿತಾಗಿಯೇ ಹಾಡುಗಳು, ಲಾವಣಿ, ದುಂದುಮೆ ಪದಗಳು ಹುಟ್ಟಿಕೊಂಡಿವೆ.

ಬ್ರಿಟಿಷರ ಒಡೆದಾಳುವ ನೀತಿಗೆ ಇವರು ಬಗ್ಗಲಿಲ್ಲ. ಅವರಿಗೇ ತಿರುಗಿ ಚಳ್ಳೇಹಣ್ಣು ತಿನ್ನಿಸಿದರು. ಅದಕ್ಕಾಗಿ ಆಂಗ್ಲರು ಇವರ ತೇಜೋವಧೆ ಮಾಡಲು ನೋಡಿದರು. ರಾಣಿಯ ನಡತೆ ಬಗ್ಗೆ ಕಥೆ ಕಟ್ಟಿದರು. ವೀರ ರಾಜನು ಗುಂಡು ಹಾರಿಸಿಕೊಂಡು ಆತ್ಮಹತ್ಯೆ ಮಾಡಿಕೊಂಡನೆಂದು ಹೇಳಿದರು. ಆದರೆ ಕಣ್ಣಾರೆ ನೋಡಿದ, ಅವರ ಸಾಹಸವನ್ನು ಅರಿತ ಜನರು ಇದನ್ನು ನಂಬಲಿಲ್ಲ.



ಬ್ರಿಟಿಷರ ಯಾವ ಮಾತಿಗೂ ಮನ್ನಣೆ ನೀಡಲಿಲ್ಲ, ಅವರ ಸಂಧಾನವನ್ನು ತಿರಸ್ಕರಿಸಿದ ರಾಣಿ ಈಶ್ವರಮ್ಮ, ಬಹಳ ಸಂದಿಗ್ಧ ಪರಿಸ್ಥಿತಿಯಲ್ಲಿ ಅಧಿಕಾರ ಚುಕ್ಕಾಣಿಯನ್ನು ಹಿಡಿದು ತನ್ನ ೭ ವರ್ಷದ ಮಗನನ್ನು ಮುಂದಿಟ್ಟುಕೊಂಡು, ನಿಷ್ಠಾವಂತ ಬೇಡರ ಪಡೆಯ ಬೆಂಬಲದಿಂದ ರಾಜ್ಯವಾಳಿದಳು. ಮಗನಲ್ಲಿ ಸ್ವಾತಂತ್ರ್ಯದ ಕಿಚ್ಚು ಹಚ್ಚಿ, ಇಡೀ ದಕ್ಷಿಣ ಭಾರತದಲ್ಲಿ ಪ್ರಥಮ ಸ್ವಾತಂತ್ರ್ಯ ಸಂಗ್ರಾಮ ನಡೆಯಲು ಕಾರಣಳಾದದ್ದು ಸಾಮಾನ್ಯ ಸಂಗತಿಯಲ್ಲ!

ನಮ್ಮ ನೆಲವನ್ನು, ಜಲವನ್ನು, ಸಂಪತ್ತನ್ನು ಕೊಳ್ಳೆ ಹೊಡೆಯಲು ಬಂದ ಇಂಗ್ಲಿಷರಿಗೆ ಸರಿಯಾದ ಪಾಠ ಕಲಿಸಿದ ಕೀರ್ತಿ ಹಾಗೂ ನಿಜಾಂನನ್ನೂ, ಮತ್ತು ರಾಜ್ಯದಲ್ಲಿಯೇ ಇದ್ದ ಹಿತಶತ್ರುಗಳನ್ನು ಹಿಮ್ಮೆಟ್ಟಿಸಿದ ರೀತಿ ನಿಜಕ್ಕೂ ವಿಸ್ಮಯಕಾರಿಯಾದದ್ದು. ರಾಣಿ ಈಶ್ವರಮ್ಮನ ಕುರಿತು ಪುನರ್ ಅಧ್ಯಯನದ ಅವಶ್ಯಕತೆ ಇದೆ.

## ಇತಿಹಾಸ ಮರೆತ ಸ್ವಾತಂತ್ರ್ಯ ಹೋರಾಟದ ಅಧ್ಯಾಯ

ಇತಿಹಾಸಕ್ಕೆ ಕಣ್ಣಿಲ್ಲ, ಕೇವಲ ಹೊಟ್ಟೆ ಇದೆ. ಅದು ಎಲ್ಲವನ್ನು ತನ್ನ ಗರ್ಭದಲ್ಲಿ ಸೇರಿಸಿಕೊಳ್ಳುತ್ತಾ ಹೋಗುತ್ತದೆ. ಮತ್ತೆ ಏನೂ ಆಗಿಯೇ ಇಲ್ಲ ಎಂಬಂತೆ ಇರುತ್ತದೆ ಎಂಬ ಮಾತು ಬಹಳ ಸತ್ಯದ ಝಳಪು ಹೊಂದಿದೆ. ಈ ಮಾತು ಅಕ್ಷರಶಃ ಸತ್ಯವಾಗಿರುವುದು ಹೈದ್ರಾಬಾದ್ ವಿಮೋಚನಾ ಇತಿಹಾಸದ ಸಂಪುಟವನ್ನು ತಿರುವಿದಾಗ, ಅದರಲ್ಲಿ ಮಹತ್ವದ ಹೋರಾಟದ ಅಧ್ಯಾಯವಾದ ಸುರಪುರದ ಭೂಗತ ವೀರರು ಸ್ಥಾಪಿಸಿದ ಕಾಂಗ್ರೆಸ್ ಶಿಬಿರದ ವಿವರಗಳು ಇಲ್ಲದೇ ಇರುವುದನ್ನು ಓದಿದಾಗ.

ಬ್ರಿಟಿಷ್ ಸರ್ಕಾರದ ವಿರುದ್ಧ ಸೈನ್ಯವನ್ನು ಸಂಘಟಿಸಿ, ತನ್ನ ಅಪ್ರತಿಮ ಶೌರ್ಯವನ್ನು ಮೆರೆದು, ಬ್ರಿಟಿಷರಿಗೆ ಸಿಂಹಸ್ವಪ್ನನಾಗಿದ್ದ ಸುರಪುರದ ಸಿಂಹದ ಮರಿ ರಾಜಾವೆಂಕಟಪ್ಪ ನಾಯಕನ ಇತಿಹಾಸದ ಸಂಪುಟ ರಕ್ತದಲ್ಲಿ ಅದ್ದಿ ಬರೆಯಲಾಗಿದೆ. ಇಡೀ ದಕ್ಷಿಣ ಭಾರತದ ರಾಜರನ್ನೆಲ್ಲಾ ಸಂಘಟಿಸಿ ಬ್ರಿಟಿಷರಿಗೆ ನಡುಕ ಹುಟ್ಟಿಸಿದ್ದ ಈ ದೊರೆ ಕೊನೆಗೆ ತನ್ನವರ ಒಳಸಂಚಿನಿಂದ ೧೮೫೮ ರಲ್ಲಿ ಮೋಸದಿಂದ ಹತನಾದ. ಸುರಪುರದ ಈ ಧೀರ ಬೇಡರ ದೊರೆಯ ಅಪ್ರತಿಮ ವೀರತನದ ಕುರುಹುಗಳು ಇಂದಿಗೂ ಸುರಪುರ, ವಾಗಣಗೇರಿ

ಕೋಟೆ, ರಾಮನಪಾಳ್ಯ, ವನದುರ್ಗಗಳಲ್ಲಿ ನೋಡಬಹುದು. ಸುರಪುರದ ಜಾನಪದರು ಹಾಡುವ ದುಂದುಮೆ ಪದಗಳಲ್ಲಿ ವೀರರಸ ಉಕ್ಕಿ ಹರಿಯುತ್ತದೆ. ಸುರಪುರ ಸಂಸ್ಥಾನದ ಬಗ್ಗೆ ಇತ್ತೀಚೆಗೆ ಹೆಚ್ಚಿನ ಸಂಶೋಧನೆ ಕೈಗೊಂಡ ಡಾ.ರಂಗರಾಜ ವನದುರ್ಗ ಹಾಗೂ ಡಾ.ಶಿವಶರಣ ಅರುಣಿ ಈ ವಿಷಯದ ಮೇಲೆ ಹೆಚ್ಚಿನ ಬೆಳಕು ಚೆಲ್ಲಿದ್ದಾರೆ.

ಆದರೆ ರಾಜನ ನಂತರ ಜನಸಾಮಾನ್ಯರು ಹೋರಾಟಕ್ಕೆ ಇಳಿದರು. ಭೂಗತ ಚಟುವಟಿಕೆಗಳನ್ನು ನಡೆಸಿದರು. ಅನಾಮಧೇಯರು ಸ್ವಾತಂತ್ರ್ಯಕ್ಕಾಗಿ ಸಹಸ್ರ ಸಂಖ್ಯೆಯಲ್ಲಿ ಹೋರಾಡಿದ್ದು ದಾಖಲೆಗೆ ಸೇರದೆ ಹೋಯಿತು. ಬಹುಶಃ ಸುರಪುರದ ಕಣಕಣದಲ್ಲಿಯೂ ವೀರತನ ತುಂಬಿದೆ ಎಂದೆನಿಸುತ್ತದೆ. ಯಾರ ದಬ್ಬಾಳಿಕೆಯನ್ನು ಸಹಿಸದ, ವಿದ್ವತ್ತಿಗೆ ತಲೆಬಾಗುವ ಸ್ವತಂತ್ರ್ಯ ಮನೋಭಾವದ ಜನರ ಗುಂಪು ಇದು. ಗುಡ್ಡಗಾಡು ಪ್ರದೇಶ ಅನೇಕ ಭೂಗತ ಚಟುವಟಿಕೆಗಳಿಗೂ ಅನುಕೂಲ ಮಾಡಿಕೊಟ್ಟಿದೆ.

ತಾಳಿಕೋಟೆಯಲ್ಲಿ ಸ್ಥಾಪಿತವಾದ ನಿಜಾಮ ಶಾಹಿಯಿಂದ ಸುರಪುರವನ್ನು ವಿಮೋಚಿಸುವ ಭೂಗತ ಕಾಂಗ್ರೆಸ್ ಕ್ಯಾಂಪ್ ೧೮೫೦ ರಿಂದ ೧೯೪೮ ಸೆಪ್ಟೆಂಬರ್‌ವರೆಗೆ ಚಟುವಟಿಕೆಯಲ್ಲಿತ್ತು. ಈ ಕ್ಯಾಂಪ್‌ದ ಮುಖಂಡರು ಘಟಾನುಘಟಿ ವಿದ್ವಾಂಸರು, ಪ್ರತಿಷ್ಠಿತರು, ಸಾಹಸಿಗರು ಆಗಿದ್ದರು. ಈ ಶಿಬಿರದ ಶಿಬಿರಾಧಿಪತಿ ರಾಜಾ ವೆಂಕಟಪ್ಪ ನಾಯಕ ಬ್ಯಾರಿಸ್ಟರ್. ಅವರು ಇಂಗ್ಲೆಂಡಿನಲ್ಲಿ 'ಬಾರ್ ಆ್ಯಟ್ ಲಾ' ಪದವಿಯನ್ನು ಸಂಪಾದಿಸಿ, ಹೈದ್ರಾಬಾದಿನಲ್ಲಿ ವಕೀಲಿ ವೃತ್ತಿ ಮಾಡುತ್ತ ರಾಜಠೀವಿಯಿಂದ ಇದ್ದಂತವರು. ಅಪ್ಪಾರಾವ್ ವಕೀಲರು ಹೈದ್ರಾಬಾದಿನಲ್ಲಿದ್ದವರು. ಅವರು ಆಗಲೇ ಖ್ಯಾತಿಯ ಉತ್ತುಂಗದಲ್ಲಿದ್ದವರು ಮತ್ತು ರಾಜಠೀವಿಯಲ್ಲಿ ಬದುಕುತ್ತಿದ್ದರು. ಇವರೊಂದಿಗೆ ನೂರಾರು ಕೂರಿಗೆ ಜಮೀನು ಹೊಂದಿದ, ಅದನ್ನೆಲ್ಲಾ ಬದಿಗೆ ಸರಿಸಿ, ತಮ್ಮ ಸುಖಕ್ಕೆ ಬೆನ್ನು ತಿರುಗಿಸಿ ಹೋರಾಟಕ್ಕೆ ಇಳಿದ ತ್ಯಾಗಜೀವಿಗಳೆಂದರೆ, ಬಸವಂತರಾಯಗೌಡ, ಪರ್ವತರೆಡ್ಡಿ ರೋಟ್ನಡಗಿ, ಮಹಾದೇವಪ್ಪ ವೇಮನೂರು, ಅಚ್ಚಪ್ಪಗೌಡಸಗರ್, ಹಣಮಂತರಾಮಗೌಡ ಗುಳಬಾಳ, ವಿರುಪಾಕ್ಷಪ್ಪಗೌಡ ರಾಜನ್‌ಕೋಳೂರು, ಭಂಟನೂರ ವೆಂಕಪ್ಪ, ಬಸಣ್ಣ ಬಾರಿ ಕಾಂಗ್ರೆಸ್ ಹೀಗೆ ಅನೇಕರು ಈ ಭೂಗತ ಪಡೆಯ ಸೈನಿಕರಾಗಿದ್ದರು.



ನಿಜಾಮನ ಆಳ್ವಿಕೆಯಲ್ಲಿದ್ದ ಸುರಪುರ ಪ್ರಾಂತ್ಯದಲ್ಲಿ ನಡೆಯುತ್ತಿದ್ದ ಅತ್ಯಾಚಾರ ತಡೆಯುವುದು ಹಂತ ಹಂತವಾಗಿ ಸುರಪುರ ಪ್ರಾಂತ್ಯವನ್ನು ನಿಜಾಮನ ಆಳ್ವಿಕೆಯಿಂದ ಮುಕ್ತಗೊಳಿಸಿ ಭಾರತದ ಒಕ್ಕೂಟದಲ್ಲಿ ವಿಲೀನಗೊಳಿಸುವುದು, ನಿಜಾಮನ ದುರಾಡಳಿತ ಹಾಗೂ ರಜಾಕಾರರ ದಬ್ಬಾಳಿಕೆಯ ವಿರುದ್ಧ ಸುರಪುರ ಸಂಸ್ಥಾನದ ಜನರನ್ನು ರಕ್ಷಿಸುವುದು – ಈ ಗುರಿಗಳನ್ನು ಹೊಂದಿದ್ದ 'ಕ್ಯಾಂಪ್' ತಾಳಿಕೋಟೆಯಲ್ಲಿ ಸ್ಥಾಪಿತವಾಯಿತು. ತಾಳಿಕೋಟೆ ಆಗ ಆಂಗ್ಲರ ವಶದಲ್ಲಿದ್ದು, ಆಗಲೇ ಸ್ವತಂತ್ರ ಭಾರತದ ಅಂಗವಾಗಿತ್ತು ಹಾಗೂ ಸುರಪುರ ಸಂಸ್ಥಾನದ ಸೀಮೆಗೆ ಹತ್ತಿರವಾಗಿತ್ತು.

ಈ ಕಾರ್ಯಾಚರಣೆಯ ಮುಖಂಡ ಅಪ್ಪಾರಾವ್ ವಕೀಲರು ಶಿಬಿರ ಪ್ರಾರಂಭಿಸುವ ಮೊದಲೇ ಭಾರತೀಯ ಸೈನ್ಯದ ಅಧಿಕಾರಿಗಳಿಂದ ಭೂಗತ ಸಶಸ್ತ್ರ ಚಟುವಟಿಕೆ ನಡೆಸಲು ತರಬೇತಿ ಪಡೆದು ಬಂದಿದ್ದರು. ಅಲ್ಲದೇ ಎಲ್ಲಕ್ಕಿಂತ ಮುಖ್ಯವಾಗಿ ಉಕ್ಕಿನ ಮನುಷ್ಯ ಸರ್ದಾರ ವಲ್ಲಭಭಾಯಿ ಪಟೇಲರ ಪ್ರೋತ್ಸಾಹ, ಕಾಳಜಿ ಈ ಶಿಬಿರಕ್ಕೆ ದೊರಕಿತ್ತು. ಶಿಬಿರಾಧಿಪತಿ ರಾಜಾ ವೆಂಕಟಪ್ಪನಾಯಕರು ಸರ್ದಾರ ವಲ್ಲಭಭಾಯಿ ಪಟೇಲರೊಂದಿಗೆ ನೇರ ಸಂಪರ್ಕವನ್ನು ಹೊಂದಿದ್ದರು ಎಂಬ ವಿಷಯ ಈ ಶಿಬಿರದ ಐತಿಹಾಸಿಕ ಮಹತ್ವವನ್ನು ತಿಳಿಸುತ್ತದೆ. ಈ ಶಿಬಿರಕ್ಕೆ ಆಗ ಹೈದ್ರಾಬಾದ್ ವಿಮೋಚನಾ ಹೋರಾಟದ ಧುರೀಣರಾಗಿದ್ದ ಸ್ವಾಮೀ ರಮಾನಂದ ತೀರ್ಥರ ಮಾರ್ಗದರ್ಶನವಿತ್ತು. ಜಿಲ್ಲೆಯ ಪ್ರಮುಖ ಕಾಂಗ್ರೆಸ್ ಧುರೀಣರಾಗಿದ್ದ ಕೋಳೂರು ಮಲ್ಲಪ್ಪನವರ ನಿಕಟ ಸಂಪರ್ಕವು ಈ ಶಿಬಿರಕ್ಕಿತ್ತು. ಈ ಶಿಬಿರದ ಪ್ರಮುಖ ದಾಖಲೆಗಳನ್ನು ಅಪ್ಪಾರಾವ್ ವಕೀಲರು ತಮ್ಮ ನೆಚ್ಚಿನ ಶಿಷ್ಯ ಸುರಪುರದ ಜೆ.ಅಗಸ್ಟಿನ್ ವಕೀಲರಿಗೆ ನೀಡಿದ್ದಾರೆ.

ಈ ಶಿಬಿರವು ಶಸ್ತ್ರ ಸನ್ನದ್ಧವಾದ ೧೧ ಜನರ ೭ ತಂಡಗಳನ್ನು ಹೊಂದಿತ್ತು. ಅಪ್ಪಾರಾವ್ ಅವರು ತಂಡದ ಸೈನಿಕರಿಗೆ ಸಶಸ್ತ್ರ ಹೋರಾಟದ ತರಬೇತಿಯನ್ನು ನೀಡಿದ್ದರು. ಈ ಶಿಬಿರವು ರಜಾಕಾರರಿಂದ ಹಲ್ಲೆಗೊಳಗಾದ ಜನರಿಗೆ ಆಶ್ರಯ ನೀಡಿದ ಬಗ್ಗೆ ದಾಖಲೆಗಳಿವೆ. ರಜಾಕಾರರ ಶಿಬಿರಗಳ ಮೇಲೆ ದಾಳಿ ಮಾಡಿ, ಅವರಿಂದ ವಶಪಡಿಸಿಕೊಂಡ ಸಾಮಾನುಗಳನ್ನು ನಂತರ ಅವರು ಮಾಡಿಕೊಂಡ ವಿನಂತಿ ಹಾಗೂ ಕಾಂಗ್ರೆಸ್ಸಿಗೆ ನಿಷ್ಠೆ ತೋರುವ ಬಗ್ಗೆ ಅವರು ಬರೆದುಕೊಟ್ಟ ಕಾಗದಗಳ ಆಧಾರದ ಮೇಲೆ ಅವರಿಗೆ ಸಾಮಾನುಗಳನ್ನು ಹಿಂತಿರುಗಿಸಿದ್ದರು.

ಈ ಶಿಬಿರ 'ಜನಪರ'ವಾಗಿತ್ತೆಂದು ತೋರಿಸಿಕೊಡುತ್ತದೆ. ಎಲ್ಲಿಯೂ ಶಿಬಿರವು ದುರುಪಯೋಗ ಮಾಡಿಕೊಂಡ ದಾಖಲೆಗಳಿಲ್ಲ. ಅಪ್ಪಾರಾವ್ ವಕೀಲರು ಹೇಳುವಂತೆ, ಈ ಶಿಬಿರಕ್ಕೆ ಕೆಲ ಮುಸ್ಲಿಂ ಹಿತೈಷಿಗಳೂ ಇದ್ದರು. ಶಿಬಿರದ ೭ ದಳಗಳಲ್ಲಿ ಒಂದು ದಳವು, ಹೈದ್ರಾಬಾದ್ ನಿಜಾಮನ ಪಡೆಯಿಂದ ಹತನಾದ ರಾಷ್ಟ್ರೀಯವಾದಿ ಕ್ರಾಂತಿಕಾರಿ ಶೋಯೆಬುಲ್ಲಾ ಸ್ಮಾರಕದಳವೂ ಇತ್ತು. ಈ ದಳದ ಮುಖಂಡರು ಬಸಪ್ಪ ವಾಣಿಯವರಾಗಿದ್ದರು.

೧೯೪೮ ಸೆಪ್ಟೆಂಬರ್ ೧೮ ರಂದು ಈ ಶಿಬಿರವು ಅಪ್ಪಾರಾವ್ ಅವರ ನೇತೃತ್ವದಲ್ಲಿ ಸುರಪುರವನ್ನು ಪ್ರವೇಶಿಸಿ, ರಜಾಕಾರರಿಂದ ಇದನ್ನು ಮುಕ್ತಗೊಳಿಸಿತು. ಆ ಸಂದರ್ಭದಲ್ಲಿ ಮುಸ್ಲಿಂರ ಪ್ರಾಣ ಮತ್ತು ಆಸ್ತಿಗಳಿಗೆ ಅತ್ಯಂತ ಕಡಿಮೆ ಪ್ರಮಾಣದಲ್ಲಿ ಹಾನಿಯಾಗಿದ್ದು ಸುರಪುರದಲ್ಲಿ ಮಾತ್ರ.

ಅಪ್ಪಾರಾವ್ ವಕೀಲ ಅವರ ವ್ಯಕ್ತಿತ್ವ, ಶಿಸ್ತಿನ ಬದುಕು, ಇವರ ಪ್ರಾಮಾಣಿಕತೆ ಹೋರಾಟದ ಅನುಭವ, ಹೈದ್ರಾಬಾದಿನಲ್ಲಿ ಅವರು ಎದುರಿಸಿದ ನಿಜಾಮನ ದರ್ಪ, ಆತನ ಸಿಬ್ಬಂದಿಯಲ್ಲಿದ್ದ ದೇಶಭಕ್ತರ ವಿವರಗಳು, ಇತಿಹಾಸಕ್ಕೆ ಅಪೂರ್ವ ದಾಖಲೆಗಳಾಗಬಲ್ಲವು.

ಅಪ್ಪಾರಾವ್ ವಕೀಲರು ಒಂದು ಘಟನೆಯನ್ನು ಮೆಲುಕುಹಾಕಿ ಸ್ಮರಿಸಿಕೊಳ್ಳುತ್ತಿದ್ದರು–

'ಹೈದ್ರಾಬಾದ್ ನಿಜಾಮ ಭಾರತೀಯ ಸೈನ್ಯಕ್ಕೆ ಶರಣಾಗಿ, ಹೈದ್ರಾಬಾದ್ ಪ್ರಾಂತ್ಯವು ಭಾರತದ ಒಕ್ಕೂಟದಲ್ಲಿ ವಿಲೀನವಾದ ನಂತರ ಅಪ್ಪಾರಾವ್ ಭೂಗತ ಚಟುವಟಿಕೆಗಳನ್ನೆಲ್ಲಾ ತೊರೆದು ಮತ್ತೇ ಹೈದ್ರಾಬಾದಿಗೆ ತೆರಳಿ ಅಲ್ಲಿ ತಮ್ಮ ವಕೀಲಿ ವೃತ್ತಿಯನ್ನು ಆರಂಭಿಸಿದರು. ಆಗ ಭಾರತ ಸರ್ಕಾರವು ರಜಾಕಾರರ ಮುಖಂಡನಾಗಿದ್ದ ಖಾಸೀಮ್ ರಿಜ್ವಿಯ ಮೇಲೆ ಕ್ರಮಕೈಗೊಳ್ಳಲು ಅಪ್ಪಾರಾವ್ ಅವರನ್ನು ವಿಶೇಷ ಅಧಿಕಾರಿಯನ್ನಾಗಿ ನೇಮಿಸಿತು. ಈ ಸಂದರ್ಭದಲ್ಲಿ ಅಪ್ಪಾರಾವ್ ನೀಡಿದ ನಿಷ್ಠುರ ಅಭಿಪ್ರಾಯ ಉಲ್ಲೇಖನೀಯವಾಗಿದೆ.

'ರಜಾಕಾರರ ಪಡೆಯ ಸೃಷ್ಟಿಯ ಮೂಲ ಕಾರಣ ಹೈದ್ರಾಬಾದ್ ನಿಜಾಮನಾಗಿದ್ದ ಉಸ್ಮಾನ್ ಅಲಿಖಾನ್, ರಜಾಕಾರರ ಈ ಪರಿಯ ಹಾವಳಿಗೆ ಮೂಲ ಕಾರಣ ನಿಜಾಮನ ಸ್ವಾರ್ಥ ಪ್ರೇರಣೆ, ಅಧಿಕಾರ ದಾಹ, ಇದರಲ್ಲಿ ರಿಜ್ವಿ ಅಸಹಾಯಕ ಆದ್ದರಿಂದ ಕ್ರಮ ಜರುಗಿಸುವುದಿದ್ದರೇ, ಹೈದ್ರಾಬಾದ್ ನಿಜಾಮನ ಮೇಲೆ ಜರುಗಿಸಿರಿ, ಖಾಸೀಮ್ ರಿಜ್ವಿಯ ಮೇಲಲ್ಲ' ಎಂದು ಸರ್ಕಾರಕ್ಕೆ ಅಪ್ಪಾರಾವ್ ವರದಿ ಕಳುಹಿಸಿದರು.



ಡಾ.ಸುಬ್ಬಯ್ಯನವರು ಸ್ವಾತಂತ್ರ್ಯ ಹೋರಾಟಗಾರರು, ಕರ್ನೂಲು ಜಿಲ್ಲೆಯ ಗುಡೂರಿನಲ್ಲಿ ಜನಿಸಿದ ಇವರು ಆಯುರ್ವೇದ ವೈದ್ಯರು. ೧೯೪೨ರ ಕ್ವಿಟ್ ಇಂಡಿಯಾ ಚಳುವಳಿಯಲ್ಲಿ ಧುಮುಕಿದರು, ಅವರನ್ನು ಬಳ್ಳಾರಿ ಜೇಲಿಗೆ ಹಾಕಲಾಯಿತು. ಅಲ್ಲಿ ಕರ್ನಾಟಕದ ಮಾಜಿ ರಾಜ್ಯಪಾಲ ಪಿ.ವೆಂಕಟಸುಬ್ಬಯ್ಯನವರು ಜೊತೆಯಾಗಿದ್ದರು. ೧೯೪೭–೪೮ರಲ್ಲಿ 'ನಿಜಾಮ್ ಹಟಾವ್' ಚಳವಳಿಯಲ್ಲಿ, ತಾಳಿಕೋಟೆ ಶಿಬಿರಕ್ಕೆ ರಾಜಾ ವೆಂಕಟಪ್ಪ ನಾಯಕ ಬ್ಯಾರಿಸ್ಟರ್, ರಾಜಾ ಪಿಡ್ಡನಾಯಕರ ಪ್ರಭಾವದಿಂದ ಕರ್ನಾಟಕಕ್ಕೆ ಆಗಮಿಸಿದ್ದ ಡಾ.ಸುಬ್ಬಯ್ಯನವರು ಕಟ್ಟಾ ಕಾಂಗ್ರೆಸ್ಸಿಗರು. ಸುರಪುರ ತಾಲೂಕಿನ ಹರಿಜನ ಸೇವಕ ಸಂಘದ ಅಧ್ಯಕ್ಷರಾಗಿದ್ದರು. ಕಲ್ಬುರ್ಗಿ ಜಿಲ್ಲೆಯ ಕಾಂಗ್ರೆಸ್ ಅಧ್ಯಕ್ಷರಾಗಿ, ಆಯುರ್ವೇದಿಕ್ ಬೋರ್ಡಿನ ಸದಸ್ಯರಾಗಿಯೂ ಅವರು ಸೇವೆ ಸಲ್ಲಿಸಿದ್ದಾರೆ.

ವಿರುಪಾಕ್ಷಪ್ಪ ಬಿ ಪಾಟೀಲ ಇವರು ಸಾಲವಾಡಗಿ ಭೂಗತ ಚಟುವಟಿಕೆ ಕ್ಯಾಂಪಿನ ಮುಖ್ಯ ಕಾರ್ಯಕರ್ತರಾಗಿದ್ದರು. ಇವರು ಹೈದ್ರಾಬಾದಿನ ಉಸ್ಮಾನಿಯಾ ವಿ.ವಿ.ಯಲ್ಲಿ ಬಿ.ಎ. ಓದುವುದನ್ನು ತ್ಯಜಿಸಿ ಸ್ವಾತಂತ್ರ್ಯ ಹೋರಾಟಕ್ಕೆ ಧುಮುಕಿದ್ದರು. ಕೊನೆಗೆ ಸಾಲವಾಡಗಿ ಹತ್ತಿರವೇ ರಜಾಕಾರರ ಕೈಯಲ್ಲಿ ಸಿಕ್ಕು ಜೂನ್ ೫ಕ್ಕೆ ಕೊಲೆಯಾದ ವೀರ ಸೇನಾನಿ ಇವರು.

ಕಾಂಗ್ರೆಸ್ ಬಸಣ್ಣ, ಮಹಾದೇವಪ್ಪ ಹೂಗಾರ, ಭಂಟನೂರ ಯಂಕಪ್ಪ ಇಂತಹ ಸಾವಿರಾರು ಅಪ್ರತಿಮ ವೀರರು ಸ್ವಾತಂತ್ರ್ಯ ಹೋರಾಟಕ್ಕೆ ತಮ್ಮ ಜೀವನದ ಅಮೂಲ್ಯ ಗಳಿಗೆಯನ್ನು ಸವೆಸಿದ್ದಾರೆ.

ಇಂತಹ ಅಮೂಲ್ಯ ಅನುಭವಗಳ ಕ್ರೋಡೀಕರಣ, ಹೋರಾಟದ ಬದುಕು ನಮಗೆ ಎಂದೆಂದಿಗೂ ಮಾದರಿಯಾಗಿದೆ. ಇದು ಮರೆಯಬಾರದ ಹಾಗೂ ಮರೆಯಲಾಗದ ಇತಿಹಾಸ.

'ಮಮಕಾರದ ಮಳೆಯಲ್ಲಿ ದ್ವೇಷದ ಬೆಂಕಿ ಆರಲಿ' ಎಲ್ಲರೂ ಬಯಸಿದ್ದರು. ಆದರೆ ಹೈದ್ರಾಬಾದ್‌ನ ನಿಜಾಂನ ಮೊಂಡುತನದಿಂದ ಅದು ಉಲ್ಬಣಗೊಂಡಿತು. ೧೫ ನೇ ಅಗಸ್ಟ್ ೧೯೪೭ ರಂದು ಭಾರತ ದೇಶವು ಆಂಗ್ಲರ ಕಪಿಮುಷ್ಟಿಯಿಂದ

ಬಿಡುಗಡೆ ಹೊಂದಿತು. ಆದರೆ ಈ ದೇಶ ಸ್ವತಂತ್ರವಾದ ಸಂದರ್ಭದಲ್ಲಿಯೇ ವಿರೂಪಗೊಂಡಿತು. ಭಾರತ ಹಾಗೂ ಪಾಕಿಸ್ತಾನ ಎಂದು ಎರಡು ದೇಶಗಳಾದವು. ಭಾರತದಲ್ಲಿ ಅನೇಕ ಸಂಸ್ಥಾನಗಳು, ಪುಟ್ಟ ಪುಟ್ಟ ರಾಜ್ಯಗಳು ಇದ್ದವು. ಅವುಗಳಲ್ಲಿ ಅನೇಕರು ಸ್ವತಂತ್ರ ಭಾರತದಲ್ಲಿ ತಾವು ಸೇರುವುದಿಲ್ಲ, ತಮ್ಮದು ಒಂದು ಸ್ವತಂತ್ರ ದೇಶವಾಗಿರುತ್ತದೆ, ರಾಜ್ಯವಾಗಿರುತ್ತದೆ ಎಂದು ಪ್ರತಿಪಾದಿಸಿದರು. ಇಲ್ಲಿಯವರೆಗಿನ ಬ್ರಿಟಿಷರ ಹೋರಾಟದ ಒಂದು ಅಧ್ಯಾಯವಾದರೆ, ಈಗಿನದು ಮತ್ತೊಂದು ಅಧ್ಯಾಯ ಶುರುವಾಯಿತು. ಆದರೆ ಸರ್ದಾರ ವಲ್ಲಭಭಾಯಿ ಪಟೇಲರ ಮುಂದೆ ಇವರ್ಯಾರ ಆಟಗಳೂ ನಡೆಯಲಿಲ್ಲ. ಎಲ್ಲರೂ ಮಂಡಿಯೂರಬೇಕಾಯಿತು.

ಭಾರತ ಸ್ವತಂತ್ರ ದೇಶವಾಯಿತು. ಇನ್ನೂರು ವರ್ಷಗಳ ಬಂಧನ ಕಡಿಯಿತು. ಆದರೆ ಹೈದ್ರಾಬಾದ್ ನಿಜಾಂನಿಂದ ಹೈದ್ರಾಬಾದ್(ಕಲ್ಯಾಣ) ಕರ್ನಾಟಕದ ಜಿಲ್ಲೆಗಳು ಸ್ವತಂತ್ರವಾಗಬೇಕಾದರೆ ಮತ್ತೆ ೧೩ ತಿಂಗಳುಗಳು ಬೇಕಾದವು. ಈ ೧೩ ತಿಂಗಳುಗಳಷ್ಟು ದೀರ್ಘಕಾಲ ಈ ಪ್ರದೇಶದಲ್ಲಿ ಅಘೋಷಿತ ಅಂತರ್ಯುದ್ಧಗಳು ನಡೆದವು. ನಿಜಾಂರಿಂದ ನಡೆದ ಲೂಟಿ, ಅತ್ಯಾಚಾರ, ನಿಜಾಮ ಸೈನಿಕರ ದೌರ್ಜನ್ಯ, ದೊಂಬಿಗಳು, ಅನ್ಯಾಯಗಳಿಂದ ಜನ ತತ್ತರಿಸಿ ಹೋಗಿದ್ದರು. ಇದನ್ನು ಸರ್ದಾರ ವಲ್ಲಭಭಾಯಿ ಪಟೇಲರು ಸದೆಬಡೆದರು. ಅವರು ಹೈದ್ರಾಬಾದ್ ವಿಮೋಚನೆಯ ರೂವಾರಿ ಎನಿಸಿದರು.

ಹೈದ್ರಾಬಾದ್ ವಿಮೋಚನಾ ಚಳವಳಿಯ ರೂವಾರಿಗಳು ಸ್ವಾಮಿ ರಮಾನಂದ ತೀರ್ಥರು. ಇಂದು ರಮಾನಂದ ತೀರ್ಥರು ಸ್ಮರಿಸುವ ಕಾರ್ಯ ನಡೆಯಲಿಲ್ಲ, ಅವರ ಒಂದೇ ಒಂದು ಪುತ್ಥಳಿ ಇಲ್ಲ. ಹೋರಾಟ ಮಾಡಿ ಸತ್ತವರು ಹಿನ್ನೆಲೆಗೆ ಸರಿದರು. ಹೋರಾಟ ಮಾಡದೇ ಆ ಲಾಭಗಳನ್ನು ಅನೇಕರು ಪಡೆದದ್ದನ್ನು ನಾವು ಕಾಣುತ್ತೇವೆ. ಇದು ಎಲ್ಲ ದೇಶಗಳ ಹೋರಾಟದ ನಂತರದ ನಿಜ ವಸ್ತು ಸ್ಥಿತಿಯೇ ಆಗಿರುತ್ತದೆ. ಇದು ನಿಜಕ್ಕೂ ದುರ್ದೈವದ ಸಂಗತಿ.

ವೀರೂಪಾಕ್ಷಪ್ಪಗೌಡ ರಾಜನ್ ಕೋಳೂರ, ಬ್ಯಾರಿಸ್ಟರ್ ರಾಜಾ ವೆಂಕಟಪ್ಪ ನಾಯಕ, ಅಪ್ಪಾರಾವ್ ಅಡ್ವೋಕೇಟ್, ಡಾ. ಜಿ. ಸುಬ್ಬಯ್ಯ, ಸಗರದ ಅಚ್ಚಪ್ಪ ಗೌಡರು, ಶರಣಗೌಡ ಇನಾಮದಾರ ದುಮ್ಮದ್ರಿ, ಸಗರದ ಒಕ್ಕಲಿಗರು, ಯುವಕರು



ಈ ಹೋರಾಟದಲ್ಲಿ ಅತ್ಯಂತ ಮಹತ್ವದ ಪಾತ್ರವಹಿಸಿದರು. ಪೊಲೀಸ್ ತೋಟ (ರಂಗಂ ಪೇಟೆಯಲ್ಲಿರುವ ಈಗಿನ ವೀರಶೈವ ಕಲ್ಯಾಣ ಮಂಟಪದ ಮುಂದಿನ ಭಾಗ)ದಲ್ಲಿ ಸಗರದ ಯುವಕರನ್ನು ಸಾಲಾಗಿ ನಿಲ್ಲಿಸಿ ಕೊಲ್ಲಲಾಯಿತು. ಸಗರದ ಮಹಾಂತಪ್ಪ, ಮಲ್ಲಪ್ಪ ಹಾಗೂ ಅನೇಕ ರೈತರು, ತಿಮ್ಮಯ್ಯ ದರ್ಬಾರಿ, ಬಸಣ್ಣ ಬಾರಿ, ಮಳ್ಳಿ ಕಿಶನ್ ರಾವ ದೇಶಪಾಂಡೆ, ರಾಮರಾವ ಹೇಜೀಬ್, ಮಾಣಿಕರಾವ ಆದವಾನಿ, ಬಸವರಾಜ ಪಂಜಗಲ್ಲ ಕೊಡೇಕಲ್ಲ, ಉದ್ದಾನ್, ಭರಮ ಗೌಡ ಕೋಟೆಗುಡ್ಡ, ಮಹಾಂತಸ್ವಾಮಿ ಹುಣಸಗಿ, ಡಿ. ಗೋವಿಂದಪ್ಪ, ಡೋಹರ ಪಿರೋಜಿ, ಪ್ರಧಾನೆಪ್ಪ ಪಾಣಿಭಾತೆ, ಪೆರುಮಾಳ ಕೃಷ್ಣಮಾಚಾರಿ, ಗೋಪಾಲರಾವ ಆದವಾನಿ, ಕಪಟರಾಳ ಕೃಷ್ಣರಾವ, ಮುಷ್ಠಳ್ಳಿ ವಾಮನಾರಾಯ, ಗಣಪತರಾವ ಸಗರ, ಮಹಾಂತಪ್ಪ ಹಗರಟಗಿ, ಹನುಮಂತರಾವ ಕಕ್ಕೇರಿ, ನಾಗಣ್ಣ ವಕೀಲರು, ಲಕ್ಷ್ಮಣರಾವ ಜಮದರಖಾನಿ, ಪುಣೆ ಕೃಷ್ಣಮಾಚಾರ್ಯ, ವೆಂಕೋಬರಾವ ಪದಕಿ, ಮಾಧವರಾವ ಬಾಸೂತಕರ, ಮಹಾದೇವಪ್ಪ ಹೂಗಾರ, ಮೊದಲಾದವರು. ಇನ್ನೂ ಸಹಸ್ರಾರು ವೀರರ ಹೋರಾಟದ ಫಲವಾಗಿ, ಅವರಲ್ಲಿ ಅನೇಕರು ಹುತಾತ್ಮರಾದ ಪರಿಣಾಮ ಹೈದ್ರಾಬಾದ ಪ್ರಾಂತ್ಯದ ವಿಮೋಚನೆಯಾಯಿತು.

ಕರ್ನಾಟಕದ ಈ ಭಾಗದಲ್ಲಿ ಮಾತ್ರ ಎರಡೆರಡು ಸ್ವಾತಂತ್ರ್ಯ ಹೋರಾಟಗಳು ಹಾಗೂ ಚಳವಳಿಗಳು ನಡೆದವು. ಉಳಿದ ಭಾಗಗಳು ಒಂದೇ ಬಾರಿಗೆ ಸ್ವತಂತ್ರಗೊಂಡವು. ಅದಕ್ಕಾಗಿಯೇ ಇದು ಸ್ವಾತಂತ್ರ್ಯ ಹೋರಾಟದ ರೋಚಕ ಅಧ್ಯಾಯ ಅನಿಸುತ್ತದೆ. ಯಾಕೆಂದರೆ ಭಾರತ ದೇಶ ಸ್ವತಂತ್ರಗೊಂಡ ಮೇಲೆ ಹೈದ್ರಾಬಾದ್ ವಿಮೋಚನೆಗೆ ಮತ್ತೇ ಪ್ರತ್ಯೇಕ ಹೋರಾಟ ನಡೆಯುತ್ತದೆ ಎಂಬ ಕಲ್ಪನೆಯೇ ಯಾರಿಗೂ ಇರಲಿಲ್ಲ ಮಹಾತ್ಮಾ ಗಾಂಧೀಜಿ ಅವರ ಕನಸು ಭಾರತ ಸ್ವತಂತ್ರಗೊಳ್ಳುವುದೇ ಆಗಿತ್ತು. ಇದು ರಾಮರಾಜ್ಯವಾಗಬೇಕೆಂದು ಕೂಡ ಅವರ ಅಂತರಂಗದ ಬಯಕೆಯಾಗಿತ್ತು.

ಹೈದ್ರಾಬಾದ್‌ನ ನಿಜಾಮನು ಭಾರತ ಸ್ವತಂತ್ರಗೊಳ್ಳುತ್ತಲೇ ಇದರ ವಿರುದ್ಧ ಬಂಡೆದ್ದ. ತಾನೂ ದಕ್ಷಿಣ ಪಾಕಿಸ್ತಾನ ಕಟ್ಟಬೇಕುಂಬುದೇ ಅವನ ಬಯಕೆಯಾಗಿತ್ತು. ಅದಕ್ಕಾಗಿ ಅವನು ಭಾರತ ಒಕ್ಕೂಟದಲ್ಲಿ ಸೇರಲು ನಿರಾಕರಿಸಿದ. ಹೈದ್ರಾಬಾದ್ ರಾಜ್ಯವು ಕರ್ನಾಟಕ, ಮಹಾರಾಷ್ಟ್ರ ಹಾಗೂ ತೆಲಂಗಾಣಗಳ ಮೂರು ಭಾಷೆಗಳ ಸಮ್ಮಿಶ್ರಣವಾಗಿತ್ತು. ಕಲಬುರಗಿ, ರಾಯಚೂರ, ಬೀದರ, ಯಾದಗಿರಿ,

ಮಹಾರಾಷ್ಟ್ರದ ಲಾತೂರ, ಉಸ್ಮಾನಾಬಾದ, ಔರಂಗಾಬಾದ್, ಭೀಡ ಹಾಗೂ ತೆಲಂಗಾಣದ ೮ ಜಿಲ್ಲೆಗಳು ಸೇರಿ ೧೬ ಜಿಲ್ಲೆಗಳ ರಾಜ್ಯವಾಗಿತ್ತು. ಭಾರತ ದೇಶ ಆಂಗ್ಲರ ಕಪಿಮುಷ್ಠಿಯಿಂದ ಬಿಡುಗಡೆಯಾದ ಕೂಡಲೇ ನಿಜಾಮ್‌ನಿಗೆ ಪಿಕಿಲಾಟಕ್ಕಿಟ್ಟುಕೊಂಡಿತು. ತನ್ನ ಸ್ವಾತಂತ್ರ್ಯಕ್ಕೆ ಧಕ್ಕೆ ಬರುತ್ತದೆ ಎಂದು ಅವನು ಭಾವಿಸಿದ. ತನ್ನ ರಾಜ್ಯವನ್ನು ದಕ್ಷಿಣ ಪಾಕಿಸ್ತಾನ ಮಾಡಲು ಬಯಸಿದ. ಇದಕ್ಕಾಗಿ ಕಾಶೀಮ್ ರಜ್ವಿ ಮುಂತಾದ ಮತಾಂಧರು ಪ್ರಜೆಗಳ ರಕ್ತ ಹರಿಸಿದರು. ಪ್ರಜೆಗಳನ್ನು ಹೆದರಿಸಲು ನೋಡಿದರು.

ಬೇಂದ್ರೆ ಅವರು ಹೇಳಿದಂತೆ 'ಕರುಳೆಲ್ಲ ಕಡಲೋಳು ಕುದಿಯುತಿರೆ' ಎಂಬಂತಾಯಿತು ಇಲ್ಲಿನ ಪರಿಸ್ಥಿತಿ. ಈ ಬಗ್ಗೆ ಡಾ. ವಸಂತ ಕುಷ್ಟಗಿ ಅವರು ಹೇಳುತ್ತಾರೆ,' ಸುರಪುರ ತಾಲೂಕಿನ ಗಡಿಭಾಗದಲ್ಲಿರುವ ತಾಳಿಕೋಟೆಯ ನೆಲೆಯಲ್ಲಿ ಶಿಬಿರಗಳು, ಉಪಶಿಬಿರಗಳು ಸ್ಥಾಪನೆಗೊಂಡು ರೋಮಾಂಚನಕಾರಿ ಘಟನೆಗಳು ಜರುಗಿ ಹೋದವು. ಬ್ಯಾರಿಸ್ಟರ್ ರಾಜಾ ವೆಂಕಟಪ್ಪ ನಾಯಕರ ಅಧ್ಯಕ್ಷತೆಯಲ್ಲಿ ಬಂಡೆಪ್ಪನಳ್ಳಿ ಸಾಲವಾಡಗಿಯಲ್ಲಿ ಇಂತಹ ಒಂದು ಉಪಶಿಬಿರ ಸ್ಥಾಪನೆಗೊಂಡಿತ್ತು. ಅದರ ಕೇಂದ್ರ ಧೀಶಕ್ತಿಯಾಗಿ ವಿರೂಪಾಕ್ಷಪ್ಪಗೌಡ ರಾಜನ್ ಕೋಳೂರು, ಮಹಾಂತಗೌಡ ಹಗರಟಗಿ, ಕಾಂಗ್ರೆಸ್ ಬಸಣ್ಣ, ಡಾ. ಜಿ. ಸುಬ್ಬಯ್ಯ, ಅಪ್ಪಾರಾವ ವಕೀಲರು ಮೊದಲಾದವರು ಇದ್ದರು. ಇವರೆಲ್ಲಾ ನಿಜಾಂ ನ ಗುಲಾಮಿತನವನ್ನು ಧಿಕ್ಕರಿಸಿ ಹೋರಾಟಕ್ಕಿಳಿದರು.

ರಾಜನ್‌ಕೋಳೂರು ವಿರುಪಾಕ್ಷಪ್ಪ ಗೌಡರು ಆಗರ್ಭ ಶ್ರೀಮಂತ ಕುಟುಂಬದಲ್ಲಿ ಜನಿಸಿದ್ದರು. ಅವರು ಮನಸ್ಸು ಮಾಡಿದ್ದರೇ ಐಷಾರಾಮಿ ಜೀವನ ಮಾಡಬಹುದಿತ್ತು. ಆದರೆ ಅವರು ಬೆಳೆದ ರೀತಿ, ಅವರಿಗೆ ಗುರುಗಳು ನೀಡಿದ ಸಂಸ್ಕಾರಗಳು ಅವರನ್ನು ಸ್ವಾತಂತ್ರ್ಯ ಹೋರಾಟಕ್ಕಾಗಿ ನಿರಂತರ ಪ್ರೇರೆಪಿಸಿದವು. ಅವರು ವಿದ್ಯಾರ್ಥಿ ದೆಸೆಯಲ್ಲಿಯೇ ಕ್ರಾಂತಿಕಾರರ ಭಾಷಣ ಕೇಳಿ ರೋಮಾಂಚನಗೊಂಡರು.

'ಯಾರಲ್ಲಿ ಗುಂಡಿಗೆ ಇಲ್ಲವೋ ಯಾರು ಗುಂಡಿಗೆ ಅಂಜಿ ಹಿಂಜರಿಯುವರೋ ಅವರು ಹೇಡಿಗಳು, ಸ್ವಾತಂತ್ರ್ಯ ಹೋರಾಟವು ಯಾರ ಉಪದೇಶದಿಂದ ಬರುವಂಥದ್ದಲ್ಲ, ಅದು ಸ್ವಯಂ ಸ್ಫೂರ್ತಿಯಿಂದ ಬರಬೇಕು.'



ಇಂತಹ ಸ್ವಾತಂತ್ರ್ಯ ಹಂಬಲದ ಮಾತುಗಳು ವಿರುಪಾಕ್ಷಪ್ಪಗೌಡರ ಜೀವನದ ಅವಿಭಾಜ್ಯ ಅಂಗಗಳಾದವು. ಖಾದಿ ಪ್ರಿಯರಾದ ಗೌಡರು ಹೈದ್ರಾಬಾದಿನಲ್ಲಿ ಕಲಿಯುವಾಗಲೂ ಅದನ್ನೇ ಧರಿಸುತ್ತಿದ್ದರು. ಇದಕ್ಕಾಗಿ ಇವರನ್ನು ತರಗತಿಯಿಂದ ಹೊರಗೆ ಹಾಕಿದರೂ ಕೂಡ ಇವರು ಎದೆಗುಂದಲಿಲ್ಲ. 'ಸ್ವಾತಂತ್ರ್ಯವೇ ನನ್ನ ಜನ್ಮ ಸಿದ್ಧ ಹಕ್ಕು' ಎಂದು ಘೋಷಿಸಿ, ಅದರಂತೆ ನಡೆದವರು. ಇವರು ತಂದೆ–ತಾಯಿಗೆ ಒಬ್ಬನೇ ಮಗ. ಇವರ ವಿವಾಹವಾದರೂ ಇವರು ಸಂಸಾರದ ಗೊಡವೆಗೆ ಹೋಗಲಿಲ್ಲ. ಸ್ವಾತಂತ್ರ್ಯದ ಹಂಬಲವೇ ಇವರ ನಿರಂತರ ಜಪವಾಗಿತ್ತು. ಅದೇ ಇವರ ಸಂಗಾತಿಯಾಗಿತ್ತು.

ತಾಳಿಕೋಟೆಯ ಖಾಸ್ಗತೇಶ್ವರ ಮಠದಲ್ಲಿ ಸಭೆಗಳು ನಡೆಯುತ್ತಿದ್ದವು. ಆ ಸಭೆಗಳಲ್ಲಿ ಕೋಳೂರು ಮಲ್ಲಪ್ಪ, ಎಸ್.ಆರ್.ಕಂಠಿ, ತಮ್ಮಾಜಪ್ಪ ಮಿರಜಕರ, ದುಬೆ, ಚೆನ್ನಬಸಪ್ಪ ಅಂಬಲಿ, ಶರಣಗೌಡ ದುಮ್ಮದ್ರಿ, ಅಚ್ಚಪ್ಪಗೌಡ ಸುಭೇದಾರ, ಸಂಗನಗೌಡ ವಜ್ಜಲ ಸಭೆಯಲ್ಲಿ ಗುಪ್ತ ಕಾರ್ಯಾಚರಣೆಗಳು ನಡೆಯುತ್ತಿದ್ದವು. ರಜಾಕಾರರನ್ನು ಬಗ್ಗು ಬಡೆಯುವ ಬಗ್ಗೆ ಹೋರಾಟದ ರೂಪರೇಷೆಗಳು ಸಿದ್ಧವಾಗುತ್ತಿದ್ದವು. ಗಾಂಧೀಜಿಯವರನ್ನೂ ಹೋರಾಟಗಾರರು ಮುಂಬೈಯಲ್ಲಿ ಭೇಟಿಯಾಗಿದ್ದರು. ವಿರೂಪಾಕ್ಷಪ್ಪಗೌಡರು ಯುದ್ಧ ನೈಪುಣ್ಯ ಪಡೆದಿದ್ದರು.

ಎಲ್ಲ ಹೋರಾಟಗಾರರು ಹಾಗೂ ಅವರ ಮುಖಂಡರು ಕೂಡಿಕೊಂಡು ರಜಾಕಾರರ ವಿರುದ್ಧ ಆಯಕಟ್ಟು ಸ್ಥಳಗಳಾದ ಬಂಡೆಪ್ಪನಹಳ್ಳಿ, ನಾಗರಬೆಟ್ಟ, ಭಂಟನೂರ, ಬಿಳೇಭಾವಿ, ಸಾಲವಡಗಿಗಳಲ್ಲಿ ಕ್ಯಾಂಪಗಳನ್ನು ರಚಿಸಿಕೊಂಡು ಗುಪ್ತಚಟುವಟಿಕೆ ನಡೆಸುತ್ತಿದ್ದರು.

ಕೊನೆಗೆ ಹುಣಸಗಿ ಹತ್ತಿರದ ಮಂಕಾರ್ತಿ ಗುಡ್ಡದಲ್ಲಿ ನಡೆದ ಘನಘೋರ ಹೋರಾಟದಲ್ಲಿ ಅಪರಿಮಿತವಾಗಿ ಹೋರಾಟ ಮಾಡಿ ರಾಜನಕೋಳೂರಿನ ವಿರೂಪಾಕ್ಷಪ್ಪಗೌಡರು ಹಾಗೂ ಹಗರಟಗಿಯ ಮಹಾಂತಗೌಡರು ಹುತಾತ್ಮರಾದರು. ಇದರಲ್ಲಿ ವಂಚಕರು ಈ ಧೀರರನ್ನು ದಾರಿತಪ್ಪಿಸಿದ್ದು ಕಂಡು ಬರುತ್ತದೆ. ರಾಜನ್‌ಕೋಳೂರು ಸ್ವತಂತ್ರ್ಯ ಭಾರತದ ರಾಷ್ಟ್ರನಕ್ಷೆಯಲ್ಲಿ ವಿರೂಪಾಕ್ಷಪ್ಪಗೌಡರ 'ವೀರತನದ ಸಂಕೇತವಾಗಿ' ಗೋಚರಿಸುತ್ತದೆ.

ಕನ್ನಡ ಸಾಹಿತ್ಯ ಸಂಘಗಳು ಕೂಡ ಈ ಹೈದರಾಬಾದ್ ವಿಮೋಚನಾ ಚಳವಳಿಯಲ್ಲಿ ಮಹತ್ವದ ಪಾತ್ರವನ್ನು ವಹಿಸಿವೆ.

ನಿಜಾಂನ ಆಳ್ವಿಕೆಯಲ್ಲಿ ಉರ್ದು ಭಾಷೆಯನ್ನು ಆಡಳಿತದ ಭಾಷೆ ಮಾಡಿದ್ದರಿಂದ ಇಲ್ಲಿ ಕನ್ನಡ ಭಾಷೆಯ ಸ್ಥಿತಿ ಚಿಂತಾಜನಕವಾಗಿತ್ತು. ಒಂದೆಡೆ ಬ್ರಿಟಿಷರ ದಬ್ಬಾಳಿಕೆ, ಇನ್ನೊಂದೆಡೆ ಇಲ್ಲಿಯ ನಿಜಾಮರ ಪ್ರಾಬಲ್ಯ. ೧೯೩೮ ರಲ್ಲಿ ನಿಜಾಂ ಸರ್ಕಾರ ಕಾಂಗ್ರೆಸ್‌ನ ಮೇಲೆ ನಿಷೇಧ ಹೇರಿತು. ಸ್ವಾಮಿ ರಮಾನಂದ ತೀರ್ಥರು, ಜನಾರ್ಧನರಾವ ದೇಶಪಾಂಡೆ, ರಾಮಾಚಾರ್ಯ ಜೋಶಿ, ಜಿ.ಕೆ.ಪ್ರಾಣೇಶಾಚಾರ್ಯರು ನಿಜಾಂ ಕರ್ನಾಟಕ ಪರಿಷತ್ತನ್ನು ಆರಂಭಿಸಿ, ಆ ಮೂಲಕ ಕಾಂಗ್ರೆಸ್ ಚಟುವಟಿಕೆಗಳನ್ನು ಆರಂಭಿಸಿದರು. ಇದರ ಮುಖಾಂತರ 'ಕನ್ನಡ ಸಾಹಿತ್ಯ ಸಂಘ'ಗಳನ್ನು ಪ್ರಾರಂಭಿಸಿ, ಸಾಹಿತ್ಯದ ಚಟುವಟಿಕೆಗಳ ಮುಖಾಂತರ ಸ್ವಾತಂತ್ರ್ಯ ಹೋರಾಟಗಳನ್ನು ಮುಂದುವರೆಸಿದರು. ಇಂತಹ ಕನ್ನಡ ಸಾಹಿತ್ಯ ಸಂಘಗಳ ಮೇಲೆಯೂ ನಿಜಾಂ ಸರ್ಕಾರದ ವಕ್ರದೃಷ್ಟಿ ಬಿದ್ದು, ಅವುಗಳನ್ನು ನಿಷೇಧಿಸುತ್ತಿತ್ತು.

ಕನ್ನಡ ಸಾಹಿತ್ಯ ಸಂಘಗಳು ನಾಡಹಬ್ಬ ಆಚರಿಸುತ್ತಿದ್ದವು. ಅದರ ಮುಖಾಂತರ ಸ್ವಾತಂತ್ರ್ಯದ ಕಿಚ್ಚನ್ನು ಹಚ್ಚಿ ಜನಜಾಗೃತಿ ಮೂಡಿಸಲಾಗುತ್ತಿತ್ತು. ಅದಕ್ಕಾಗಿ ಸ್ವಾತಂತ್ರ್ಯ ಹೋರಾಟದಲ್ಲಿ ಕನ್ನಡ ಸಾಹಿತ್ಯ ಸಂಘಗಳ ಪಾತ್ರ ಗಣನೀಯವಾಗಿತ್ತು.

೧೯೪೨ರಲ್ಲಿ ಸುರಪುರದ ಕನ್ನಡ ಸಾಹಿತ್ಯ ಸಂಘವನ್ನು ದೀಕ್ಷಾಚಾರ್ಯರ ನೇತೃತ್ವದಲ್ಲಿ ಪ್ರಾರಂಭಿಸಲಾಯಿತು. ಈ ಸಂಘಕ್ಕೆ ಮಾಸ್ತಿ, ಬಿ.ಎಂ.ಶ್ರೀ., ದ.ರಾ.ಬೇಂದ್ರೆ, ತಿ.ನಂ.ಶ್ರೀ. ಮೊದಲಾದವರನ್ನು ಆಮಂತ್ರಿಸಲಾಗಿತ್ತು. ಹರಿಕಥೆ ಮೂಲಕವು ಸ್ವಾತಂತ್ರ್ಯ ಚಳವಳಿ ಕಾವು ಪಡೆಯಿತು. ೧೯೪೨ರಲ್ಲಿ ನಿಜಾಂ ಕರ್ನಾಟಕ ಪರಿಷತ್ತಿನ ೩ನೇ ಅಧಿವೇಶನವನ್ನು ಸುರಪುರದ ಆನಂದ ವಿದ್ಯಾಲಯದಲ್ಲಿ ಅಣ್ಣಾರಾವ ಗಣಮುಖಿ ಅವರ ಅಧ್ಯಕ್ಷತೆಯಲ್ಲಿ ನಡೆಸಿದ್ದು ಐತಿಹಾಸಿಕ ಸಂಗತಿ. 'ಭಾರತ ಬಿಟ್ಟು ತೊಲಗಿ' ಚಳವಳಿಯ ಹಿನ್ನೆಲೆಯಲ್ಲಿ ನಾನಪ್ಪ ದೇಸಾಯಿ ಹಾಗೂ ಇತರ ಹಿರಿಯರ ನೇತೃತ್ವದಲ್ಲಿ ಈ ಸಮ್ಮೇಳನ ಜರುಗಿತ್ತು. ೧೯೪೩ರಲ್ಲಿ ರಂಗಂಪೇಟೆಯ ಕನ್ನಡ ಸಾಹಿತ್ಯ ಸಂಘವು ಪ್ರಾರಂಭವಾಯಿತು. ಬುದ್ಧವಂತ ಶೆಟ್ಟರು, ಬಂಡಿ ಗುರಾಚಾರ್ಯ, ಸಗರ ಕೃಷ್ಣಾಚಾರ್ಯ, ಹೆಬ್ಬಾಳ ಶೇಷಶಾಸ್ತ್ರಿಗಳು, ಮಣೂರ ಜಯತೀರ್ಥಾಚಾರ್ಯ, ಅಷ್ಟಾವಧಾನಿ ನರಸಿಂಹ ಶಾಸ್ತ್ರಿಗಳು, ಡಿ.ಗೋವಿಂದಪ್ಪ, ಬೋಡಾ ರಾಮಣ್ಣ, ಮುಮ್ಮಡಿ ಶಿವಣ್ಣ ಮೊದಲಾದವರ ಸಾರಥ್ಯ ಇದಕ್ಕಿತ್ತು.



ಸ್ವಾತಂತ್ರ್ಯ ಚಳವಳಿಯಲ್ಲಿ ಈ ಸಂಘವು ಕೂಡ ತುಂಬ ಮಹತ್ವದ ಪಾತ್ರ ವಹಿಸಿತು. ನಿಜಾಂ ಆಡಳಿತಶಾಹಿ ಕನ್ನಡ ಕಾರ್ಯಕ್ರಮಗಳ ಮೇಲೆ ನಿಷೇಧ ಹೇರಿತ್ತು. ಹೈದ್ರಾಬಾದ್ ವಿಮೋಚನಾ ಚಳವಳಿ ಹೋರಾಟಗಾರರಿಗೆ ಸಂಘವು ಅಡಗುತಾಣವಾಗಿತ್ತು. ಹೋರಾಟದ ಅನೇಕ ಮಹತ್ವದ ಸಂಗತಿಗಳು ಸಂಘದಲ್ಲಿ ಗುಪ್ತ ಸಭೆಗಳನ್ನು ನಡೆಸುವ ಮೂಲಕ ಕೈಗೊಳ್ಳಲಾಗುತ್ತಿತ್ತು.

ದುಮ್ಮದ್ರಿ ಶರಣಗೌಡರು ಹೈದ್ರಾಬಾದ್ ವಿಮೋಚನೆಯ ಮಹತ್ವದ ಹೋರಾಟಗಾರರು. ೧೯೩೯ರಲ್ಲಿ ಸುಭಾಶ್ಚಂದ್ರ ಭೋಸರನ್ನು ವಾಡಿಯಲ್ಲಿ ಭೇಟಿಯಾದಾಗ ಅವರು 'ವಂದೇ ಮಾತರಂ ಎನ್ನುವುದು ರಾಷ್ಟ್ರೀಯ ಚಳುವಳಿ ಅದನ್ನು ಮುಂದುವರೆಸಿರಿ' ಎಂದು ಹೇಳುತ್ತಾರೆ. ಶರಣಗೌಡರು ಪ್ರತಿಯೊಂದು ಹಳ್ಳಿಗಳಲ್ಲಿ 'ಹುಡೆ'ಗಳನ್ನು ಸ್ಥಾಪಿಸಿ, ಅದರಲ್ಲಿ ಶಸ್ತ್ರಾಸ್ತ್ರ ಅಡಗಿಸಿಡಲು, ಹೋರಾಟಗಾರರು ಅಡಗಿಕೊಳ್ಳಲು ತಮ್ಮ ಸಂಗಡಿಗರ ಮೂಲಕ ಮಾಡುತ್ತಾರೆ.

ಅಪ್ಪಾರಾವ ವಕೀಲರು, ತಿಮ್ಮಯ್ಯ ದರಬಾರಿ, ಹಣಮಂತರಾವ ದರಬಾರಿ, ಮಹಾದೇವಪ್ಪ ಹೇಮನೂರ, ಇವರೆಲ್ಲರೂ ಕೂಡ ಬ್ಯಾರಿಸ್ಟರ್ ರಾಜಾ ವೆಂಕಟಪ್ಪ ನಾಯಕ ಶಿಬಿರಾಧಿಪತಿಗಳು. ಇವರ ನೇತೃತ್ವದಲ್ಲಿ ಹೋರಾಟ ಮಾಡಿದವರೇ ಆಗಿದ್ದಾರೆ. ಬಸಣ್ಣ ಬಾರಿ ಅವರು 'ಕಾಂಗ್ರೆಸ್ ಬಸಣ್ಣ'ರೆಂದೇ ಹೆಚ್ಚು ಖ್ಯಾತಿ ಪಡೆದವರು. ಅವರು ದರಬಾರದ ಮುಂದುಗಡೆ ಇದ್ದ ಗೋಗಿ ಸಾಹುಕಾರ ಅಂಗಡಿ ಕಟ್ಟೆ ಮೇಲೆ ಕುಳಿತು 'ರಾಷ್ಟ್ರಧ್ವಜ'ಗಳನ್ನು ಹೊಲಿದು ಕೊಡುತ್ತಿದ್ದರು. ಒಮ್ಮೆ ಒಂದೇ ದಿವಸ ೧೧೫ ಧ್ವಜಗಳನ್ನು ಹೊಲಿದಿದ್ದರು. ಎದುರುಗಡೆಯೇ ಪೋಲೀಸ ಠಾಣೆ. ಇವರು ನಾಗಣ್ಣ ವಕೀಲರು, ತುಳಜಾರಾಮಸಿಂಗ ವಕೀಲರ ಜೊತೆಗೂಡಿ ಕಾರ್ಯನಿರ್ವಹಿಸಿದ್ದರು. ಇದಕ್ಕಾಗಿ ಜೈಲುವಾಸ ಕೂಡ ಅನುಭವಿಸಿದರು. ಪಂಚಾಂಗ ಮಠದ ನೀಲಯ್ಯ ಸ್ವಾಮಿಗಳು ಹಾಗೂ ಕನಕಗಿರಿ ರಾಜಗೋಪಾಲಾಚಾರ್ಯರು, ಜಗನ್ನಾಥರಾವ ಚಂಡರಕಿಯವರೊಡಗೂಡಿ ಹೋರಾಟ ಮಾಡಿದವರು ಕಾಂಗ್ರೆಸ್ ಬಸಣ್ಣ.

ಹೀಗೆ ಎರಡೆರಡು ಸ್ವಾತಂತ್ರ್ಯ ಹೋರಾಟಕ್ಕಾಗಿ ತನ್ನ ರಕ್ತವನ್ನೇ ಬಸಿದದ್ದು ಈ ನೆಲದ ಹಿರಿಮೆ–ಗರಿಮೆ. ರಾಜಬಹಾದ್ದೂರ ನಾಲ್ವಡಿ ರಾಜಾ ವೆಂಕಟಪ್ಪ ನಾಯಕನಿಂದ ಇತ್ತೀಚಿನ ಹೋರಾಟಗಾರರು 'ದೇಶಪ್ರೇಮ'ದ ಅಮೃತಬಿಂದುವಾಗಿದ್ದರು. ಸ್ವಾರ್ಥ ರಹಿತ ಈ ಸ್ವಾತಂತ್ರ್ಯ ಹೋರಾಟಗಾರರು

'ಸುರಪುರವನ್ನು ಅತ್ಯಂತ ಎತ್ತರದ ಸ್ಥಾನದಲ್ಲಿ' ಇರಿಸಿದವು. ಇಂದಿನ ಯುವ ಪೀಳಿಗೆಗೆ ಇವರೆಲ್ಲಾ ದೊಡ್ಡ ಮಾದರಿಯಾಗಿದ್ದಾರೆ.

**'ಗುಂಡಿಗಂಜದೆ ವೆಂಕಟೇಂದ್ರನು**
**ತುಂಡುಗಡಿದನು ತಾಮ್ರ ಮುಖರನು**
**ದಂಡಧರನಂದದಲಿ ಗಿರಿಕೋದಂಡ ರುದ್ರನೊಲು!**

**ಚಂಡತರ ಮಾರ್ತಾಂಡನೆನೆ ರಣ**
**ಮಂಡಲದಿ ವೈರಿಗಳ ರುಂಡದ**
**ಚಂಡನಾಡಿದ ಬಹರಿ ವೆಂಕಟ ಮಂಡಲಾಧಿಪನು!!**

**'ನೆಲವೆಲ್ಲಂ ಕನಕಮಯಂ**
**ಜಗವೆಲ್ಲ ಸೊದೆ, ಮಹೀಜಗಳಮರಕುಜಗಳ್!**

**ಶಿಲೆಗಳ್ ಪಳಿಯೇ ಪಳುಕಂ**
**ಗಳ್ ಮಿಂದ್ರಪುರ ಮಿಳೆಗಿಳಿದಿದೊ ಸಗರನಾಡೋಳ್!'**

❑

## ಆಧಾರ ಗ್ರಂಥಗಳು


- ಸಗರನಾಡ ದರ್ಶನ – ಸಂ.ಎ.ಕೃಷ್ಣ ಸುರಪುರ
- ಚಾರಿತ್ರಿಕ ಸುರಪುರ – ಅಧ್ಯಯನಾತ್ಮಕ ನೋಟಗಳು – ಡಾ.ಅಮರೇಶ ಯತಗಲ್
- ನಾಯಕರ ಮಹಾಸಂಸ್ಥಾನ ಸುರಪುರ – ಸಂ.ಡಾ.ತಾರಿಹಳ್ಳಿ ಹನುಮಂತಪ್ಪ
- ಸುರಗಿರಿ – ಶಿವಕುಮಾರ ಅಮ್ಮಾಪುರ
- ಹೈದ್ರಾಬಾದ್ ವಿಮೋಚನೆ – ಲೇ.ಎಸ್.ಆರ್.ಮಣೂರ
- ಸ್ವಾತಂತ್ರ್ಯ ಹೋರಾಟದ ರೂವಾರಿಗಳು – ಲೇ.ಶ್ರೀನಿವಾಸ ಜಾಲವಾದಿ

# ಅನುಬಂಧ

## ಛಾಯಾಚಿತ್ರಗಳು



ಗಲಖಲರ ಕ್ರಾಂತಿವೀರ ರಾಜಾ ನಾಲ್ವಡಿ ವೆಂಕಟಪ್ಪ ನಾಯಕ




ನಲವಡಿ ರಾಜಾ ವೆಂಕಟಪ್ಪ ನಾಯಕ



**ಕರ್ನಲ್ ಮೆಡೋಜ್ ಟೇಲರ್ ಬಂಗಲೆ**





**ಸುರಪುರ ಸಂಸ್ಥಾನಿಕರ ಕಿರೀಟ**





**ಜಾರ್ಜ್ ನ್ಯೂಬರಿ ೮.೭.೧೮೫೮ ರಂದು ಮೊದಲ ಕಾಳಗದಲ್ಲಿ ಮಡಿದ ರುಕ್ಮಾಪುರದ ಆಗ್ನೇಯ ದಿಕ್ಕಿಗೆ ಇರುವ ಸಮಾಧಿ**



**ರಾಜಾ ನಾಲ್ವಡಿ ವೆಂಕಟಪ್ಪ ನಾಯಕರು ಬ್ರಿಟಿಷ್ ಮತ್ತು ಇತರ ಅಧಿಕಾರಿಗಳೊಂದಿಗೆ ನಡೆಸುತ್ತಿದ್ದ ಪ್ರಮುಖರ ಸಭೆ**



**ರಾಜಾ ಮೊಂಡಗೈ ವೆಂಕಟಪ್ಪ ನಾಯಕನ ಕಬ್ಬಿಣದ ಹಸ್ತ**



**ಸುರಪುರ ಪೂರ್ವ ದಿಕ್ಕಿಗೆ ಇರುವ ಮುಳ್ಳಗಸಿ**



**ಸುರಪುರ ಸಂಸ್ಥಾನದ ಅರಸರ ಕುಲದೇವರಾದ**
**ಶ್ರೀ ವೇಣುಗೋಪಾಲಸ್ವಾಮಿ ದೇವಸ್ಥಾನ**

## ಅಮೃತ ಮಹೋತ್ಸವ ಪ್ರಕಟಣೆ – ೭೫ ಕಿರುಪುಸ್ತಕಗಳ ಪಟ್ಟಿ
## ಸ್ವಾತಂತ್ರ್ಯ ಹೋರಾಟದಲ್ಲಿ ಕರ್ನಾಟಕ

| ಕ್ರಸಂ. | ಪುಸ್ತಕದ ಹೆಸರು | ಲೇಖಕರ ಹೆಸರು | ಬೆಲೆ |
|---|---|---|---|
| ೧. | ತುರುವನೂರು | ಡಾ. ಪಿ. ಯಶೋದಾ ರಾಜಶೇಖರಪ್ಪ | ೩೦/– |
| ೨. | ಚಿತ್ರದುರ್ಗ | ಡಾ. ಬಿ. ರಾಜಶೇಖರಪ್ಪ | ೩೦/– |
| ೩. | ರಾಮಸ್ವಾಮಿ ವೃತ್ತ | ಮಂಜುನಾಥ ಹೆಚ್.ಎಲ್. | ೩೦/– |
| ೪. | ಸುಬ್ಬರಾಯನ ಕೆರೆ | ಡಾ. ಇಂದಿರಾ ಬಿ.ಪಿ. | ೩೦/– |
| ೫. | ಬದನವಾಳು | ಡಾ. ಇಂದಿರಾ ಬಿ.ಪಿ. | ೩೦/– |
| ೬. | ತಗಡೂರು | ಡಾ. ಎಚ್.ಎಸ್. ಉಷಾರಾಣಿ | ೩೦/– |
| ೭. | ಶಿವಪುರ | ಡಾ. ಲಿಂಗರಾಜು | ೩೦/– |
| ೮. | ಮಂಡ್ಯ | ಡಾ. ಶಿವರಾಮು ಎಸ್. | ೩೦/– |
| ೯. | ಚಾಮರಾಜನಗರ | ಡಾ. ಸುಂದ್ರೇಶ ಎನ್. | ೩೦/– |
| ೧೦. | ಗುಂಡ್ಲುಪೇಟೆ | ಕವಿತಾ ಎ. | ೩೦/– |
| ೧೧. | ಗೊರೂರು | ಡಾ. ಯೋಗೇಶ್ ಎನ್.ಇ. | ೩೦/– |
| ೧೨. | ಅರಸೀಕೆರೆ | ಡಾ. ಮಂಜುನಾಥ ಜಿ.ಆರ್. | ೩೦/– |
| ೧೩. | ಹೊಸರಿತ್ತಿ | ಡಾ. ಹೇಮಪ್ಪ ಬ. ಕೆಂಚಳ್ಳಿ | ೩೦/– |
| ೧೪. | ಕನ್ನೇಶ್ವರ | ಡಾ. ಚಾಮರಾಜ ಕಮ್ಮಾರ | ೩೦/– |
| ೧೫. | ಚಳ್ಳಕೂಡ್ಲೂರು | ರಾಮಣ್ಣ ಹವಳೆ | ೩೦/– |
| ೧೬. | ನ್ಯಾಷನಲ್ ಹೈಸ್ಕೂಲು | ಟಿ.ಕೆ. ತಿಮ್ಮರಾಜ ಶೆಟ್ಟಿ | ೩೦/– |
| ೧೭. | ಬನಪ್ಪ ಪಾರ್ಕ್ | ರಮೇಶ ದೊಡ್ಡಪುರ | ೩೦/– |

| | | | |
|---|---|---|---|
| ೧೮. | ಮಲ್ಲೇಶ್ವರ | ಕೆ.ಎಲ್. ನಟರಾಜ್ | ೩೦/– |
| ೧೯. | ದಂಡುಪ್ರದೇಶ | ಪ್ರಮೋದ್ ನ. ಗೋ. | ೩೦/– |
| ೨೦. | ದೇವನಹಳ್ಳಿ | ಕೆ.ಆರ್. ನರಸಿಂಹನ್ | ೩೦/– |
| ೨೧. | ದೊಡ್ಡಬಳ್ಳಾಪುರ | ಡಿ.ಎಂ. ಘನಶ್ಯಾಮ | ೩೦/– |
| ೨೨. | ರಾಮನಗರ | ಎಸ್. ಶರತ್ ಚಂದ್ರ | ೩೦/– |
| ೨೩. | ಕನಕಪುರ | ಡಾ. ಎಸ್.ಎಚ್. ಭುವನೇಶ್ವರ | ೩೦/– |
| ೨೪. | ಶ್ರೀನಿವಾಸಪುರ | ಪ್ರೊ. ಕೆ.ಆರ್. ಜಯಶ್ರೀ | ೩೦/– |
| ೨೫. | ಬಂಗಾರಪೇಟೆ | ಪ್ರೊ. ಕೆ.ಆರ್. ಜಯಶ್ರೀ | ೩೦/– |
| ೨೬. | ವಿದುರಾಶ್ವತ್ಥ | ಡಾ. ಎಸ್.ಜಿ. ರಾಮದಾಸ ರೆಡ್ಡಿ | ೩೦/– |
| ೨೭. | ಈಸೂರು | ಮಾರ್ಪಳ್ಳಿ ಆರ್. ಮಂಜುನಾಥ್ | ೩೦/– |
| ೨೮. | ನಗರ(ಬಿದನೂರು) | ಚಿನ್ಮಯ ಎಂ.ಸಿ. | ೩೦/– |
| ೨೯. | ಚನ್ನಗಿರಿ | ಡಾ. ಕೆಳದಿ ವೆಂಕಟೇಶ ಜೋಯಿಸ್ | ೩೦/– |
| ೩೦. | ದಾವಣಗೆರೆ | ಸಹನಾ ಚೇತನ್ | ೩೦/– |
| ೩೧. | ಸಿಂದಗಿ | ಡಾ. ರಮೇಶ ಎಸ್. ಕತ್ತಿ | ೩೦/– |
| ೩೨. | ಮಸಬಿನಾಳ | ಶಂಕರ ಬೈಚಬಾಳ | ೩೦/– |
| ೩೩. | ಸಾರವಾಡ | ಡಾ. ಸೋಮಶೇಖರ ವಾಲಿ | ೩೦/– |
| ೩೪. | ಹಲಸಂಗಿ | ಶ್ರೀ ಸುಮಿತ್ ಮೇತ್ರಿ | ೩೦/– |
| ೩೫. | ನರಗುಂದ | ಡಾ. ನಿಂಗು ಸೊಲಗಿ | ೩೦/– |
| ೩೬. | ಮುಂಡರಗಿ | ಡಾ. ಉಮೇಶ ತಿಮ್ಮಾಪುರ | ೩೦/– |



| | | | |
|---|---|---|---|
| ೩೭. | ಹಲಗಲಿ | ಡಾ. ವಿಜಯಶ್ರೀ ಇಟ್ಟಣ್ಣವರ | ೩೦/– |
| ೩೮. | ಬಿಸನಾಳ | ಡಾ. ವಿನಯಕುಮಾರ್ ಹಿರೇಮಠ | ೩೦/– |
| ೩೯. | ಬಾಗಲಕೋಟೆ | ರಾಮ ಮನಗೂಳಿ | ೩೦/– |
| ೪೦. | ಬಾದಾಮಿ | ಡಾ. ಪ್ರಕಾಶ ಗ. ಖಾಡೆ | ೩೦/– |
| ೪೧. | ಸುರಪುರ | ಶ್ರೀನಿವಾಸ ಜಾಲವಾದಿ | ೩೦/– |
| ೪೨. | ಕೆಂಭಾವಿ | ನಿಂಗನಗೌಡ ಹ. ದೇಸಾಯಿ | ೩೦/– |
| ೪೩. | ರಾಜನಕೋಳೂರು | ರಾಘವೇಂದ್ರ ಜಹಗೀರದಾರ | ೩೦/– |
| ೪೪. | ಭಾಲ್ಕಿ | ಡಾ. ರಘುಶಂಖ ಭಾತಂಬ್ರಾ | ೩೦/– |
| ೪೫. | ಗೋರಟಾ | ಷ.ಬ್ರ. ಡಾ. ರಾಜಶೇಖರ ಶಿವಾಚಾರ್ಯ ಸ್ವಾಮಿಗಳು | ೩೦/– |
| ೪೬. | ಕೇಂದ್ರ ಮೈದಾನ | ಡಾ. ವಸಂತಕುಮಾರ್ ಪೆರ್ಲ | ೩೦/– |
| ೪೭. | ರಾಮಶಾಲಾ ಬಯಲು | ರಾಮಣ್ಣ ಹವಳೆ | ೩೦/– |
| ೪೮. | ಉಳ್ಳಾಲ | ಡಾ. ಜ್ಯೋತಿ ಚೇಳ್ಯಾರು | ೩೦/– |
| ೪೯. | ಅಮರಸುಳ್ಯ | ಸಹನಾ ಕಾಂತಬೈಲು | ೩೦/– |
| ೫೦. | ಅಜ್ಜರಕಾಡು ಮೈದಾನ | ಡಾ. ಪೃಥ್ವೀರಾಜ ಕವತ್ತಾರು | ೩೦/– |
| ೫೧. | ಬಸರೂರು–ಕುಂದಾಪುರ | ಮಂಜುನಾಥ್ ಚಾಂದ್ | ೩೦/– |
| ೫೨. | ಪೊನ್ನಂಪೇಟೆ | ಸೊಮೆಯಂಡ ಕೌಸಲ್ಯ ಸತೀಶ್ | ೩೦/– |
| ೫೩. | ಮಡಿಕೇರಿ | ಪ್ರೊ. ಕೆ.ಆರ್. ದೀಕ್ಷಿತ್ | ೩೦/– |
| ೫೪. | ಅಜ್ಜಂಪುರ | ಜಿ.ಸ. ಪ್ರಭುಲಿಂಗ ಶಾಸ್ತ್ರಿ | ೩೦/– |
| ೫೫. | ಚಿಕ್ಕಮಗಳೂರು | ಜಿ.ಸ. ಪ್ರಭುಲಿಂಗ ಶಾಸ್ತ್ರಿ | ೩೦/– |

| | | | |
|---|---|---|---|
| ೫೬. | ಕಲಬುರಗಿ | ಡಾ. ಶಂಭುಲಿಂಗವಾಣಿ | ೩೦/– |
| ೫೭. | ಮುಧೋಳ–ಸೇಡಂ | ಮುಡಬಿ ಗುಂಡೇರಾವ | ೩೦/– |
| ೫೮. | ಅಂಕೋಲಾ | ಶಾಂತಾರಾಮ ನಾಯಕ | ೩೦/– |
| ೫೯. | ಶಿರಸಿ | ಪದ್ಮಾಕರ ಮಡಗಾಂವಕರ | ೩೦/– |
| ೬೦. | ಕಾರವಾರ | ಡಾ. ಉದಯ ಶಂಕರ ಪುರಾಣಿಕ | ೩೦/– |
| ೬೧. | ಬಳ್ಳಾರಿ | ಡಾ. ಮೃತ್ಯುಂಜಯ ರುಮಾಲೆ | ೩೦/– |
| ೬೨. | ಹೊಸಪೇಟೆ | ಡಾ. ಮೃತ್ಯುಂಜಯ ರುಮಾಲೆ | ೩೦/– |
| ೬೩. | ಕೊಟ್ಟೂರು | ಡಾ. ಮೃತ್ಯುಂಜಯ ರುಮಾಲೆ | ೩೦/– |
| ೬೪. | ಕೂಡ್ಲಿಗಿ | ಡಾ. ಕೆ. ಸತೀಶ | ೩೦/– |
| ೬೫. | ಕಿತ್ತೂರು | ಪ್ರಕಾಶ ಗಿರಿಮಲ್ಲನವರ | ೩೦/– |
| ೬೬. | ಹುದಲಿ | ಪ್ರಕಾಶ ಗಿರಿಮಲ್ಲನವರ | ೩೦/– |
| ೬೭. | ಬೆಳಗಾವಿ | ಪ್ರಕಾಶ ಗಿರಿಮಲ್ಲನವರ | ೩೦/– |
| ೬೮. | ಹುಲಕುಂದ | ಪ್ರಕಾಶ ಗಿರಿಮಲ್ಲನವರ | ೩೦/– |
| ೬೯. | ಬೆಂಗೇರಿ | ಪ್ರಕಾಶ ಗಿರಿಮಲ್ಲನವರ | ೩೦/– |
| ೭೦. | ಕೊಪ್ಪಳ | ಮಹೇಶ ಬಳ್ಳಾರಿ | ೩೦/– |
| ೭೧. | ಗಂಗಾವತಿ | ರಮೇಶ ಸಿ. ಬನ್ನಿಕೊಪ್ಪ | ೩೦/– |
| ೭೨. | ಅಳವಂಡಿ | ಡಾ. ಪ್ರಕಾಶ ಬಳ್ಳಾರಿ | ೩೦/– |
| ೭೩. | ತುಮಕೂರು | ಡಾ. ಬಿ. ನಂಜುಂಡಸ್ವಾಮಿ | ೩೦/– |
| ೭೪. | ಮಧುಗಿರಿ | ಡಾ. ಬಿ. ನಂಜುಂಡಸ್ವಾಮಿ | ೩೦/– |
| ೭೫. | ತಾವರೆಕೆರೆ | ಪ್ರೊ. ಕೆ. ಪುಟ್ಟರಂಗಪ್ಪ | ೩೦/– |